11 February 2026 Wednesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮನಸ್ಸನ್ನು ಜಾಸ್ತಿ ಕಲಕಿದರೆ ಜ್ಞಾನ ಕಲುಷಿತ ನೀರಿನಂತಾಗಿ ಬುದ್ಧಿ ಕೈ ಕೊಡುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಕೇಂದ್ರ ಬಜೆಟ್: ದೇಶದ ಅಭಿವೃದ್ಧಿಗೆ ಪೂರಕ: ಸಂಸದ ಡಾ.ಮಂಜುನಾಥ್

ಪುಟ ಸಂ. 2



ಮ.ಬೆಟ್ಟಕ್ಕೆ ಜಿಲ್ಲಾಧಿಕಾರಿ ಭೇಟಿ: ಜಾತ್ರೆ ಸಿದ್ಧತೆ ಪರಿಶೀಲನೆ

ಪುಟ ಸಂ. 3



ಜೆರಾಕ್ಸ್ ಅಂಗಡಿಗೆ ಬೆಂಕಿ: ಲೇಖನ ಸಮಾಗ್ರಿಗಳು, ಮಿಷನ್‌ಗಳು ಬೆಂಕಿಗಾಹುತಿ

ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 97 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಮೈಸೂರಿನಲ್ಲಿ ಫೆ.14ರಂದು ಹನುಮಾನ್ ಚಾಲಿಸ್ ಪಾರಾಯಣ

## 30 ಸಾವಿರಕ್ಕೂ ಹೆಚ್ಚು ಮಂದಿ ಆಗಮನ ನಿರೀಕ್ಷೆ । ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹೇಳಿಕೆ

**ಮೈಸೂರು:** ನಗರದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶ್ರಮದಿಂದ 10 ವರ್ಷದ ಬಳಿಕ ಮೈಸೂರಿನಲ್ಲಿ ಮತ್ತೊಮ್ಮೆ ಬೃಹತ್ ಸಾಮೂಹಿಕ ಹನುಮಾನ್ ಚಾಲಿಸ್ ಪಾರಾಯಣ ನಡೆಸಲು ಸಕಲ ಸಜ್ಜಾಗಿದ್ದಾರೆ.

ಹನುಮಾನ ಚಾಲಿಸ್ ಪಾರಾಯಣ ಕುರಿತು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು, ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಫೆ.14ರಂದು ಹನುಮಾನ ಚಾಲಿಸ್ ಪಾರಾಯಣ ಆಯೋಜಿಸಲಾಗಿದೆ. ಸುಮಾರು 30 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಫೆ.14ರಂದು ಬೆಳಿಗ್ಗೆ 9ಕ್ಕೆ ಸಾಮೂಹಿಕ ಪಾರಾಯಣ ಪ್ರಾರಂಭಗೊಳ್ಳಲಿದೆ. ಬಳಿಕ ಪ್ರಸಾದ ವಿನಿಯೋಗ ಇರಲಿದೆ. ಸಂ.5ಕ್ಕೆ ಗಿರಿಜಾ ಕಲ್ಯಾಣ ಉತ್ಸವ, 6ರಿಂದ 7.30ರವರೆಗೆ ಭಜನೆ ನಡೆಯಲಿದೆ. ಗಂಗಾ ನದಿಯ ಜಲ





ಪ್ರೋಕ್ಷಣೆ ಹಾಗೂ ರುದ್ರಾಕ್ಷಿಯನ್ನು ಭಕ್ತರಿಗೆ ವಿತರಿಸಲಾಗುವುದು. 30 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ. 45,000ಕ್ಕೂ ಹೆಚ್ಚು ಮಂದಿಗೆ ಪ್ರಸಾದ ವಿತರಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಇಂದಿನ ಆಧುನಿಕ ಯುಗದಲ್ಲಿ ಎದುರಾಗುವ ಅನೇಕ ಅಡೆ, ತಡೆ, ಸಮಸ್ಯೆಗಳನ್ನು ನಿವಾರಿಸುವ ಹಾಗೂ ಹೆದರಿಸುವ ಶಕ್ತಿಯನ್ನು ಹನುಮಾನ್ ಚಾಲಿಸಾ ಪಾರಾಯಣದಿಂದ ಬೆಳೆಸಿಕೊಳ್ಳಬಹುದಾಗಿದೆ. ಹನುಮ ಎಂದರೆ ಶಕ್ತಿ ಅದರಲ್ಲೂ ಆತ ಪಾರಾಯಣದಿಂದ ಮನಸ್ಸಿನಲ್ಲಿ ಶಾಂತಿ ನೆಲೆಸಿ ಮಾಡುವ ಕೆಲಸದಲ್ಲಿ ಉತ್ಸುಕತೆ ಹೆಚ್ಚಾಗಲಿದೆ. ಈ ದೃಷ್ಟಿಯಿಂದ ಮೈಸೂರಿನಲ್ಲಿ ಮತ್ತೆ ಹನುಮಾನ ಚಾಲಿಸ ಪಾರಾಯಣ ಆಯೋಜಿಸಲಾಗಿದೆ ಎಂದು ಅವರು ತಿಳಿಸಿದರು.

ತುಳಸಿದಾಸರು ಹಿಂದಿ ಭಾಷೆಯಲ್ಲಿ ಹನುಮಾನ ಚಾಲಿಸಾವನ್ನು ಬರೆದಿದ್ದಾರೆ. ಅದನ್ನು ಈಗ ಕನ್ನಡಕ್ಕೂ ಅನುವಾದಿಸಲಾಗಿದೆ. ಆಂಧ್ರದಲ್ಲಿ ಆಟೋ ರಿಕ್ಷಾದವರು ಸಹ ನಿತ್ಯ ಪಾರಾಯಣ ಮಾಡುತ್ತಾರೆ. ಹನುಮಂತ ಎಲ್ಲಿರುತ್ತಾನೋ ರಾಮ ಅಲ್ಲಿರುತ್ತಾನೆ. ರಾಮನು ಎಲ್ಲಿರುತ್ತಾನೋ ಅಲ್ಲಿ ಹನುಮಂತನಿರುತ್ತಾನೆ. ಅದರಲ್ಲೂ ಕರ್ನಾಟಕ ಆಗುವ ಮೊದಲು ಹನುಮನಾಡು ಎಂದೆ ಕರೆಯುತ್ತಿದ್ದೆವು. ಇದಕ್ಕಾಗಿಯೇ 108 ಹನುಮ ಆಲಯಗಳನ್ನು ಮಾಡಿದ್ದಾರೆ. ಕಾಶಿನಲ್ಲಿ ಮುಕ್ತಿಗೂ ಮುನ್ನ ಹನುಮಂತ ದೇವಾಲಯಕ್ಕೆ ಹೋಗುತ್ತಾರೆ, ಪಾರಾಯಣ ಮಾಡುತ್ತಾರೆ ಎಂದು ತಿಳಿಸಿದರು.

> ಗಣಪತಿ ಆಶ್ರಮದ ದತ್ತಪೀಠ ಸ್ವಾಮೀಜಿ ಈಗಾಗಲೇ ತಮ್ಮ ಹಲವು ಧಾರ್ಮಿಕ ಕಾರ್ಯಗಳಿಂದಲೇ ವಿಶ್ವದ ಗಮನ ಸೆಳೆದು ಅನೇಕ ದಾಖಲೆಗಳನ್ನು ಮಾಡಿದ್ದಾರೆ. ಅಂತಹವರು ಮೈಸೂರಿನಲ್ಲಿ ಫೆ.14ರಂದು ಕೈಗೊಳ್ಳುತ್ತಿರುವ ಸಾಮೂಹಿಕ ಹನುಮಾನ್ ಚಾಲಿಸಾ ಪಾರಾಯಣದಲ್ಲಿ ಪ್ರತಿಯೊಬ್ಬರು ಪಾಲ್ಗೊಳ್ಳುವ ಮೂಲಕ ದೇಶಕ್ಕೆ ಎಲ್ಲರೂ ಒಮ್ಮೆಲೆ ಪ್ರಾರ್ಥಿಸಲು ಸಜ್ಜಾಗೋಣ.
>
> ▶▶ **ಎಚ್.ವಿ.ರಾಜೀವ್** ಮುಡಾ ಮಾಜಿ ಅಧ್ಯಕ್ಷ

ಈಗಾಗಲೇ ನಮ್ಮಿಂದಲೇ 43 ಆಲಯಗಳು ಸ್ಥಾಪನೆ ಆಗಿದೆ. ಮುಂದಿನ ದಿನಗಳಲ್ಲಿ 130 ಅಡಿ ಎತ್ತರದ ಹನುಮ ಪ್ರತಿಮೆಯನ್ನು ವಿಶಾಖಪಟ್ಟಣದಲ್ಲಿ ಮಾಡುತ್ತಿದ್ದೇವೆ.

ಪುಟ 2ಕ್ಕೆ

# ಕದ್ದುಮುಚ್ಚಿ ಮಾತುಕತೆ ನಡೆಸಿಲ್ಲ!

## ಅಧಿಕಾರ ಹಂಚಿಕೆ ವಿಚಾರಕ್ಕೆ ಡಿಸಿಎಂ ಡಿಕೆಶಿ ಗರಂ । ಬಹಿರಂಗ ಅಸಮಾಧಾನ

**ಬೆಂಗಳೂರು:** ಅಧಿಕಾರ ಹಂಚಿಕೆ ವಿಚಾರದಲ್ಲಿ ನಾವು ಕದ್ದುಮುಚ್ಚಿ ಮಾತನಾಡಿಕೊಂಡಿಲ್ಲ. ನಾನು ಮತ್ತು ಸಿದ್ದರಾಮಯ್ಯ ಏನು ಮಾತಾಡಿಕೊಂಡಿದ್ದೇವೆ ಎನ್ನುವುದು ನನಗೆ ಗೊತ್ತಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಬಹಿರಂಗ ಹೇಳಿಕೆ ನೀಡಿದ್ದಾರೆ.

ದೆಹಲಿಗೆ ತೆರಳುವ ಮುನ್ನ ಮಂಗಳವಾರ ಸದಾಶಿವ ನಗರದ ನಿವಾಸದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಗೊಂದಲ ಬೇರೆಯವರಿಗೆ ಇರಬಹುದು. ಆದರೆ ನನಗೆ ಯಾವುದೇ ಗೊಂದಲ ಇಲ್ಲ. ನಾವು, ನಮ್ಮ ವರಿಷ್ಠರು ಮಾತಾಡಿಕೊಂಡಿದ್ದೇವೆ. ಬೇರೆಯವರು ಟೆನ್ಶನ್ ತೆಗೆದುಕೊಳ್ಳುವುದಾಗಲಿ, ಹೇಳಿಕೆ ಕೊಡೋದರಿಂದಾಗಲಿ ಯಾರಿಗೂ ಪ್ರಯೋಜನ ಇಲ್ಲ ಎಂದು ಹೇಳಿದರು.

ದೆಹಲಿಯಿಂದ ಗುಡ್ ನ್ಯೂಸ್ ತಗೊಂಡು ಬತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಡಿಕೆಶಿ, ಪ್ರತಿ ದಿನವೂ ನನಗೆ ಒಳ್ಳೆಯದೇ, ಪ್ರತೀ ದಿನವೂ ಸಂತೋಷನೇ, ಜೊತೆಗೆ ಪ್ರತೀ ದಿನವೂ ಕಷ್ಟದ ದಿನವೇ.

ಯಾವುದೂ ಏನೂ ಸುಲಭವಲ್ಲ. ಜನರ ಸಮಸ್ಯೆಗಳನ್ನು ಬಗೆಹರಿ ಸಬೇಕಾದರೆ ಅನೇಕ ಕಷ್ಟಗಳು, ತೊಡಕುಗಳು ಇದ್ದೇ ಇರುತ್ತವೆ. ಟೀಕೆಗಳು ಬರುತ್ತಲೇ ಇರುತ್ತವೆ. ಟೀಕೆಗಳನ್ನು ಎದುರಿಸಲೇಬೇಕು, ನಮ್ ಕೆಲಸ ಮಾಡಿಕೊಂಡು ಹೋಗಬೇಕು ಎಂದು ಮಾರ್ಮಿಕವಾಗಿ ಮಾತನಾಡಿದರು.



ರಾಜ್ಯದ ಬಜೆಟ್ ಸಭೆಗೆ ಗೈರಾಗುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ, ಬಜೆಟ್ ಮೀಟಿಂಗ್ ಬಗ್ಗೆ ಸಿಎಂಗೆ ಕೇಳಿಕೊಂಡಿದ್ದೇನೆ. ನಿನ್ನೆಯೂ ಬಜೆಟ್ ಮೀಟಿಂಗ್ ಮಾಡಿದ್ದಾರೆ. ಸಿಎಂ ಸಭೆ ಮಾಡುತ್ತಾರೆ. ದೆಹಲಿಯಿಂದ ಬಂದ ನಂತರ ಮಾತನಾಡುತ್ತೇನೆ ಎಂದು ತಿಳಿಸಿದರು. ಅಸ್ಸಾಂ ಚುನಾವಣೆ ವಿಚಾರದ ಬಗ್ಗೆ ಇಂದು ಸಂಜೆ ಚರ್ಚೆ ನಡೆಸಲು ಎಐಸಿಸಿಯವರು ನನ್ನನ್ನು ಕರೆದಿದ್ದಾರೆ. ಕೇರಳಕ್ಕೆ ಹೋಗಿದ್ದೆ ಈಗ ಮುಗಿಸಿಕೊಂಡು ಅಸ್ಸಾಂಗೆ ಹೋಗಬೇಕು ಎಂದರು.

### ಬಾಯಿ ಮುಚ್ಚಿಕೊಂಡು ಇದ್ದರೆ ಒಳ್ಳೆಯದು!

**ಬೆಂಗಳೂರು:** ಎಲ್ಲರೂ ಬಾಯಿ ಮುಚ್ಚಿಕೊಂಡು ಇದ್ದರೆ ಒಳ್ಳೆಯದು ಎಂದು ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಹೇಳಿದ್ದಾರೆ. ಅದನ್ನು ನಾವು ಪಾಲನೆ ಮಾಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಮಾಧ್ಯಮಗಳ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ನನ್ನ ಪರ, ವಿರುದ್ಧ ಹೇಳಿಕೆಗಳನ್ನು ಶಾಸಕರು, ಮಂತ್ರಿಗಳು, ಯಾರೇ ನೀಡುತ್ತಿರಬಹುದು. ಈ ಹೇಳಿಕೆಗಳಿಂದ ಪಕ್ಷಕ್ಕೆ ಹಾನಿ ಆಗಲಿದೆಯೇ ಹೊರತು ಪಕ್ಷಕ್ಕೆ ಒಳ್ಳೆಯ ದನ್ನು ಮಾಡುವ ಹೇಳಿಕೆಗಳಲ್ಲ ಎಂದು ಟೀಕಿಸಿದರು.

ಹೈಕಮಾಂಡ್ ಗೊಂದಲವನ್ನು ಬೇಗ ಇತ್ಯರ್ಥ ಮಾಡಲಿದೆಯಾ ಎಂಬ ಪ್ರಶ್ನೆಗೆ, ನನಗೆ ಯಾವ ಗೊಂದಲವೂ ಇಲ್ಲ. ಗೊಂದಲ ಬೇರೆಯವರಿಗೆ ಇರಬಹುದು. ಬೇರೆಯವರೆಲ್ಲ ಇದಕ್ಕೆ ಟೆನ್ಷನ್ ತೆಗೆದುಕೊಳ್ಳುವುದರಿಂದ ಪ್ರಯೋಜನವಾಗುವುದಿಲ್ಲ ಎಂದರು.

ನಾವು ಮಾತನಾಡಿದರೆ ನೋಟಿಸ್ ನೀಡುತ್ತಾರೆ ಯತೀಂದ್ರ ಮಾತನಾಡಿದರೆ ಏಕೆ ನೋಟಿಸ್ ನೀಡುವುದಿಲ್ಲ ಎಂದು ಶಾಸಕ ಇಕ್ಬಾಲ್ ಹುಸೇನ್ ಅವರು ಪ್ರಶ್ನಿಸಿರುವ ಬಗ್ಗೆ ಕೇಳಿದಾಗ, ಈ ಬಗ್ಗೆ ಹೈಕಮಾಂಡ್ ಅನ್ನು ಕೇಳೋಣ ಎಂದು ವ್ಯಂಗ್ಯವಾಡಿದರು.

ದೆಹಲಿಗೆ ಹೋದ ಮೇಲೆ ಎಲ್ಲಾ ನಾಯಕರನ್ನು, ಯಾರು ಸಿಗುತ್ತಾರೋ ಅವರನ್ನು ಭೇಟಿ ಮಾಡುತ್ತೇನೆ. ಸಂಸತ್ ಅಧಿವೇಶನ ನಡೆಯುತ್ತಿರುತ್ತದೆ. ಬಿಡುವಿದ್ದರೆ ಖಂಡಿತವಾಗಿ ಭೇಟಿ ಮಾಡುತ್ತೇನೆ. ಇಂದು ಸಂಜೆ ಎಐಸಿಸಿಯಲ್ಲಿ ಸಭೆಯಿದೆ. ವಿವಿಧ ಚುನಾವಣೆಗಳು ಹಾಗೂ ರಾಜಕೀಯ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಸಲಾಗುವುದು ಎಂದರು.

# ಕರೆಯದೆ ನಾನೇಕೆ ಹೋಗಲಿ?

## ಡಿಕೆಶಿ ದೆಹಲಿ ಯಾತ್ರೆ ಬಗ್ಗೆ ಸಿದ್ದರಾಮಯ್ಯ ಪ್ರತಿಕ್ರಿಯೆ

**ಬೆಂಗಳೂರು:** ಹೈಕಮಾಂಡ್ ನನ್ನನ್ನು ದೆಹಲಿಗೆ ಕರೆಯದಿದ್ದರೆ ನಾನೇಕೆ ಹೋಗಲಿ. ನನಗೆ ಬಜೆಟ್ ತಯಾರಿ ಕೆಲಸ ಇದೆ. ಕರೆದರೆ ಮಾತ್ರ ಹೋಗುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಅವರು ಉತ್ತರಿಸಿದರು.

ನಮ್ಮ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಿದ್ದೇನೆ ಎಂದು ಅವರು ಹೇಳಿದರು.

ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಹೋಗಿರುವುದರಿಂದ ಸಭೆಗಳಿಗೆ ಬರಲಾಗುವುದಿಲ್ಲ ಎಂದು ಅರ್ಜಿ ಕೊಟ್ಟಿದ್ದಾರೆ. ಅಸ್ಸಾಂ ಚುನಾವಣೆ ಹಿನ್ನಲೆಯಲ್ಲಿ ದೆಹಲಿಗೆ ತೆರಳಿರುವುದಾಗಿಯೂ ತಿಳಿಸಿದ್ದಾರೆ. ಅದನ್ನು ಬಿಟ್ಟು ಬೇರೇನೂ ಗೊತ್ತಿಲ್ಲ ಎಂದು ಉತ್ತರಿಸಿದರು.

ಹೈಕಮಾಂಡ್ ಒಪ್ಪಂದವಾದಾಗ ಸಿದ್ದರಾಮಯ್ಯ ಸಹ ಇದ್ದರು ಎಂದು ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಕುರಿತು



ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಅವರು, ಅದನ್ನೆಲ್ಲ ಅವರಿಗೇ ಕೇಳಿಕೊಳ್ಳಿ ಎಂದರು. ನೀವು ಸಹ ಹೈಕಮಾಂಡ್ ಭೇಟಿ ಮಾಡ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಿಡಿಮಿಡಿಗೊಂಡ ಅವರು, ಕರೆಯದೆ ನಾನೇಕಮ್ಮ ಹೋಗ್ಲಿ. ಕರೆದರೆ ಮಾತ್ರ ಹೋಗ್ತೀನಿ ಎಂದು ಕೊಂಚ ಗರಂ ಆಗಿ ಉತ್ತರ ನೀಡಿದರು.

ಕರ್ನಾಟಕ ರಾಜ್ಯದ ಮೊದಲ ಚುನಾಯಿತ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು, ಸ್ವಾತಂತ್ರ್ಯ ಹೋರಾಟಗಾರರಾಗಿ, ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ನಮ್ಮ ಸುಂದರ ವಿಧಾನಸೌಧವನ್ನು ನಿರ್ಮಿಸಿದ ಅವರು ಸಂವಿಧಾನ ರಚನಾ ಸಮಿತಿಗೆ ಅನೇಕ ಸಲಹೆಗಳನ್ನು ನೀಡಿದ್ದರು. ಅವರ ಹೋರಾಟ, ನೀಡಿದ ಕೊಡುಗೆಗಳು ನಮಗೆ ಆದರ್ಶ ಎಂದು ಸಿದ್ದರಾಮಯ್ಯ ಬಣ್ಣಿಸಿದರು.

## ಸಿಎಂ ಹುದ್ದೆ ಗಲಾಟೆ: ಹೈಕಮಾಂಡ್ ತೀರ್ಮಾನ

**ಬೆಂಗಳೂರು:** ಸಿಎಂ–ಡಿಸಿಎಂ ನಡುವೆ ಕುರ್ಚಿ ಗಲಾಟೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ಹೇಳಿದಂತೆ ನಾವೆಲ್ಲ ಶಾಸಕರು ಕೇಳುತ್ತೇವೆ ಎಂದು ಶಾಸಕ ಬಸನಗೌಡ ದದ್ದಲ್ ತಿಳಿಸಿದ್ದಾರೆ.

ಸಿಎಂ–ಡಿಸಿಎಂ ನಡುವೆ ಕುರ್ಚಿ ಗಲಾಟೆ ವಿಚಾರಕ್ಕೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಡಿಕೆ ಶಿವಕುಮಾರ್‌ಗೆ ಸಿಎಂ ಸ್ಥಾನ ಬಿಟ್ಟು ಕೊಡಿ ಅಂತ ಯಾವ ಶಾಸಕರು ಮಾತಾಡಿದ್ದಾರೋ ಗೊತ್ತಿಲ್ಲ. ಕಾಂಗ್ರೆಸ್ ರಾಷ್ಟ್ರೀಯ ಪಕ್ಷ. ಎಲ್ಲಾ ಶಾಸಕರು ಹೈಕಮಾಂಡ್ ಸೂಚನೆಗೆ

ಪುಟ 2ಕ್ಕೆ

## ವಿಧಾನಸೌಧದ ಸಚಿವರ ಕಚೇರಿಯಲ್ಲೇ ಕಳ್ಳತನ!

**ಬೆಂಗಳೂರು:** ವಿಧಾನಸೌಧದಲ್ಲಿರುವ ನಗರಾಭಿವೃದ್ಧಿ ಸಚಿವ ಸುರೇಶ್ ಅವರ ಕಚೇರಿಯಲ್ಲೇ ಕಳ್ಳತನ ನಡೆದಿರುವ ವಿಚಾರ ತಡವಾಗಿ ಬೆಳಕಿಗೆ ಬಂದಿದೆ.

ಕೆಲಸದ ನಿಮಿತ್ತ ಸಚಿವರ ಕಚೇರಿಗೆ ನವೀನ್ ಎಂಬವರು ಚಿನ್ನಾಭರಣ ಹಾಗೂ ನಗದು ಇದ್ದ ಕೈ ಚೀಲದೊಂದಿಗೆ ಬಂದಿದ್ದರು. ಕೆಲಸ ಮುಗಿಸಿದ ತೆರಳುವಾಗ ಕೈ ಚೀಲವನ್ನು ಮರೆತು ಹೋಗಿದ್ದರು. ಮಾರನೇ ದಿನ ಬಂದು ನೋಡಿದಾಗ ಕೈ ಚೀಲ ನಾಪತ್ತೆಯಾಗಿತ್ತು. 300 ಗ್ರಾಂ ಚಿನ್ನಾಭರಣ, 1.5 ಲಕ್ಷ ರೂ. ಕ್ಯಾಶ್ ಇದ್ದ ಕೈಚೀಲ ಕಳ್ಳತನವಾದ ಬೆನ್ನಲ್ಲೇ ಗಾಬರಿಗೊಂಡ ನವೀನ್ ವಿಧಾನ ಸೌಧ

ಪುಟ 2ಕ್ಕೆ



## ಕೊಲೆಯಾದ ಚಂದನ್ ನಿವಾಸಕ್ಕೆ ಪರಮೇಶ್ವರ್ ಭೇಟಿ

**ಬೆಂಗಳೂರು:** ಕೆನಡಾದಲ್ಲಿ ಅಪರಿಚಿತರಿಂದ ಗುಂಡಿನ ದಾಳಿಗೆ ಒಳಗಾಗಿ ಮೃತಪಟ್ಟಿರುವ ನೆಲಮಂಗಲದ ಚಂದನ್ ಕುಮಾರ್ ಅವರ ಪಾರ್ಥಿವ ಶರೀರವನ್ನು ಆದಷ್ಟು ಶೀಘ್ರ ಭಾರತಕ್ಕೆ ತರಲು ರಾಜ್ಯ ಪೊಲೀಸ್ ಇಲಾಖೆ ಮೂಲಕ ಕೇಂದ್ರ ವಿದೇಶಾಂಗ ಸಚಿವಾಲಯದ ಸಹಕಾರ ಕೋರಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.



ಕೆನಡಾ ದೇಶದ ಟೊರಾಂಟೋ ನಗರದಲ್ಲಿ ಹತ್ಯೆಗೀಡಾದ ಚಂದನ್ ಅವರ ಮನೆಗೆ ಮಂಗಳವಾರ ಭೇಟಿ ನೀಡಿ ಅವರ ತಂದೆ–ತಾಯಿಗೆ ಸಂತ್ವಾನ ಹೇಳಿದ ಸಚಿವರು, ಚಂದನ್

ಪುಟ 2ಕ್ಕೆ

## ಮ.ಮ ಬೆಟ್ಟಕ್ಕೆ ಪಾದಯಾತ್ರೆ ಬಾಲಕನ ಮೇಲೆ ಚಿರತೆ ದಾಳಿ

**ಚಾಮರಾಜನಗರ:** ಶ್ರೀಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಹೊರಟಿದ್ದ ಗುಂಪಿನಲ್ಲಿದ್ದ ಬಾಲಕನ ಮೇಲೆ ಚಿರತೆ ದಾಳಿ ಮಾಡಿರುವ ಘಟನೆ ನಡೆದಿದೆ. ಚನ್ನಪಟ್ಟಣ ತಾಲೂಕಿನ ಭುವಳ್ಳಿ ಗ್ರಾಮದ ಶ್ರೇಯಸ್ (8) ಚಿರತೆ ದಾಳಿಯಿಂದ ಗಾಯಗೊಂಡ ಬಾಲಕ.

ಮಹಾಶಿವರಾತ್ರಿ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಲಕ್ಷಾಂತರ ಭಕ್ತಾದಿಗಳು ಪಾದಯಾತ್ರೆ ಮೂಲಕ ತೆರಳುವುದು ವಾಡಿಕೆ. ಅದರಂತೆ ಪಾದಯಾತ್ರೆಯ ಮೂಲಕ ಪೊನ್ನಾಚಿ ಕ್ರಾಸ್ ನಿಂದ ತಲುಪಿ, ನಂತರ ಮುಂದೆ ಅರಣ್ಯ ಪ್ರದೇಶದಲ್ಲಿ ತೆರಳುತ್ತಿದ್ದಾಗ ಬಾಲಕನ ಮೇಲೆ ಚಿರತೆ ದಾಳಿ ಮಾಡಿದೆ.



ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಜಗದೀಶ್ ಹಾಗೂ ಇಲಾಖೆಯ ಸಿಬ್ಬಂದಿ ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಗಾಯಗೊಂಡಿದ್ದ ಬಾಲಕನನ್ನು

ಪುಟ 2ಕ್ಕೆ

## ಮುಡಾ ಸೈಟ್ ಹಗರಣ: 40 ಮಂದಿಗೆ ನೋಟಿಸ್

**ಮೈಸೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಹಗರಣದಲ್ಲಿ ಲೋಕಾಯುಕ್ತ ಪೊಲೀಸರ ತನಿಖೆ ಮುಂದುವರಿದಿದೆ.





ಈ ಹಿನ್ನೆಲೆಯಲ್ಲಿ 135 ನಿವೇಶನ ಪಡೆದಿರುವ 40 ಮಂದಿಗೆ ಸೂಕ್ತ ಉತ್ತರ ನೀಡುವಂತೆ ನೋಟಿಸ್ ನೀಡಲಾಗಿದೆ.

ಮುಖ್ಯಮಂತ್ರಿ ಪತ್ನಿಗೆ ನಿವೇಶನ ಹಂಚಿಕೆಯಿಂದ ಭಾರೀ ಸುದ್ದಿಯಾಗಿದ್ದ ಮುಡಾದಲ್ಲಿ ಬಳಿಕ ಶೇ.50–50 ನಿವೇಶನ ಅಕ್ರಮ ಆರೋಪದ ಹಿನ್ನೆಲೆಯಲ್ಲಿ ಮೈಸೂರು ಲೋಕಾಯುಕ್ತ ತನಿಖೆ ಕೈಗೊಂಡಿತ್ತು.

ಮೈಸೂರು ಲೋಕಾಯುಕ್ತ ಎಸ್ಪಿ ಉದ್ದೇಶ್ ಈ ಕುರಿತು ಪ್ರತಿಕ್ರಿಯೆ ನೀಡಿ, ಕಳೆದ ಆರು ತಿಂಗಳಿಂದ 134 ಪ್ರಕರಣಗಳ ತನಿಖೆ ನಡೆಯುತ್ತಿದೆ. ಇದರಲ್ಲಿ ಶೇ.50:50ರಲ್ಲಿ ನಿವೇಶನ ಪಡೆದ

ಪುಟ 2ಕ್ಕೆ

# ಅಬಕಾರಿ ಇಲಾಖೆಯಿಂದ ವಾರ್ಷಿಕ 34 ಸಾವಿರ ಕೋಟಿ ರೂ. ಆದಾಯ

## 40,000 ಕೋಟಿ ಸಂಗ್ರಹ ಅಂದಾಜು: ಸಚಿವ ಆರ್.ಬಿ.ತಿಮ್ಮಾಪುರ

**ಬೆಂಗಳೂರು:** 2025–26ನೇ ಸಾಲಿನ ಬಜೆಟ್‌ನಲ್ಲಿ ಅಬಕಾರಿ ಇಲಾಖೆಯಿಂದ 40,000 ಕೋಟಿ ಆದಾಯ ಸಂಗ್ರಹವಾಗಬಹುದು ಎಂದು ಅಂದಾಜಿಸಲಾಗಿತ್ತು. ಈಗಾಗಲೇ 34,000 ಕೋಟಿ ಸಂಗ್ರಹವಾಗಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.



ವಿಧಾನಸೌಧದಲ್ಲಿ ಮಂಗಳವಾರ ನಡೆದ ಇಲಾಖಾ ಪ್ರಗತಿ ಪರಿಶೀಲನಾ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ, ಬಜೆಟ್‌ನ ಅಂದಾಜಿಗಿಂತಲೂ ಹೆಚ್ಚು ಆದಾಯ ಗಳಿಸುತ್ತೇವೆ ಎಂದು ಹೇಳಿದರು.

ಮದ್ಯ ಮಾರಾಟ ಲೈಸೆನ್ಸ್ ನೀಡಲು ಲಂಚ ಪಡೆಯಲು ಅಧಿಕಾರಿಗಳು ನನ್ನ ಹೆಸರನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಹಾಗೆ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಅಬಕಾರಿ ಖಾತೆಯೇ ಅಂಥದ್ದು. ಈ ಹಿಂದೆ ಸಚಿವರಾಗಿದ್ದವರ ವಿರುದ್ಧವೂ ಆರೋಪಗಳು ಬಂದಿವೆ. ಈಗಲೂ ಬರುತ್ತಿವೆ. ಆದರೆ ಅವೆಲ್ಲಾ ಸುಳ್ಳು ಎಂದು ಅಬಕಾರಿ ಸಚಿವರು ತಿಳಿಸಿದರು.

ಸನ್ನದು ನೀಡುವಲ್ಲಿ ಮತ್ತು ನವೀಕರಣದಲ್ಲಿ ಹಲವು ಸುಧಾರಣಾ ಕ್ರಮಗಳನ್ನು ತಂದಿದ್ದೇನೆ. ಇದರಿಂದ ಹಲವರಿಗೆ ತೊಂದರೆ ಆದಂತಿದೆ. ಹೀಗಾಗಿ ಆರೋಪ ಮಾಡುತ್ತಿದ್ದಾರೆ. ಇಲಾಖೆಯ ವಿರುದ್ಧ ಆರೋಪ ಮಾಡಿದಂತಹ ಸಂಘಟನೆಯ ಮಾನ್ಯತೆಯ ಅವಧಿ ಮುಗಿದು, ಎಷ್ಟೋ ವರ್ಷಗಳಾಗಿವೆ. ಆ ಸಂಘಕ್ಕೆ ಮಾನ್ಯತೆಯೇ ಇಲ್ಲ ಎಂದರು.

ವಿಶೇಷ ಅಧಿವೇಶನದಲ್ಲಿ ನರೇಗಾ ಯೋಜನೆ ಬಗ್ಗೆ ಚರ್ಚಿಸುವುದು ಬಜೆಪಿ ಸದಸ್ಯರಿಗೆ ಬೇಡವಾಗಿತ್ತು. ಹೀಗಾಗಿ ನನ್ನ ಮೇಲಿನ ಆರೋಪಕ್ಕೆ ಅವರು ಜೋತುಬಿದ್ದರು. ಆದರೂ, ನಮ್ಮ ಸರ್ಕಾರ

ಪುಟ 2ಕ್ಕೆ


## ಕುರ್ಚಿಯಲ್ಲಿಯೇ ಕುಳಿತಿದ್ದಂತೆ ಸಾವು

**ಉಡುಪಿ:** ಯಾತ್ರಾರ್ಥಿಯೊಬ್ಬರು ಕುಳಿತ ಕುರ್ಚಿಯಲ್ಲಿಯೇ ಸಾವನಪ್ಪಿರುವ ಘಟನೆ ನಡೆದಿದೆ.

ನಗರದ ವಸತಿ ಗೃಹದ ಕೊಠಡಿಯಿಂದ ವ್ಯಕ್ತಿ ಹೊರಬಾರದಿರುವುದನ್ನು ಗಮನಿಸಿದ ಸಿಬ್ಬಂದಿ ಸಂಶಯಪಟ್ಟು ಬಾಗಿಲು ತೆರೆದು ನೋಡಿದಾಗ ವ್ಯಕ್ತಿ ಮೃತಪಟ್ಟಿರುವುದು ಕಂಡುಬಂದಿದೆ. ದಾವಣಗೆರೆಯ ನಿವಾಸಿ ಮಹಾಂತೇಶ ಎಂ.ಜಿ ಮೃತ ವ್ಯಕ್ತಿ. ಸಾವಿಗೆ ಸ್ಪಷ್ಟ ಕಾರಣ ತಿಳಿದುಬಂದಿಲ್ಲ.

## ಶಾಸಕ ಬಸವರಾಜ್‌ಗೆ ಹೈಕೋರ್ಟ್ ಶಾಕ್

**ಬೆಂಗಳೂರು:** ರೌಡಿ ಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಭೈರತಿ ಬಸವರಾಜ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಗಳವಾರ ಹೈಕೋರ್ಟ್ ವಜಾಗೊಳಿಸಿದೆ.



ನಿರೀಕ್ಷಣಾ ಜಾಮೀನು ಕೋರಿ ಭೈರತಿ ಬಸವರಾಜ್ ಸಲ್ಲಿಸಿದ್ದ ಅರ್ಜಿ

# ಸಿಎಂ ಪುತ್ರನಿಂದ ವರ್ಗಾವಣೆ ದಂಧೆ

## ಡಾ.ಯತೀಂದ್ರ ಅನಧಿಕೃತ ಸಚಿವ । ಮಾಜಿ ಸಂಸದ ಪ್ರತಾಪಸಿಂಹ ವಾಗ್ದಾಳಿ

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದಾರೆ ಎಂದು ಮಾಜಿ ಸಂಸದ ಪ್ರತಾಪಸಿಂಹ ಕಿಡಿಕಾರಿದರು.

ನಗರದಲ್ಲಿ ಮಂಗಳವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯ ಸರಕಾರದ ಆಡಳಿತದಲ್ಲಿ ಸಿಎಂ



ಪುತ್ರ ಹಸ್ತಕ್ಷೇಪ ಆರೋಪ ವಿಚಾರ ಕುರಿತು ಪ್ರತಿಕ್ರಿಯಿಸಿದರು. ಸಿಎಂ ಪುತ್ರ ಯತೀಂದ್ರ ಅನಧಿಕೃತ ವರ್ಗಾವಣೆ ಸಚಿವರಾಗಿದ್ದಾರೆ. ಗೃಹ ಸಚಿವ ಜಿ.ಪರಮೇಶ್ವರ್ ಮೈಸೂರಿಗೆ ಬಂದ ವೇಳೆ ಸತತವಾಗಿ ಐದು ವರ್ಷ ಆಯ್ಕೆ ಆಗಿರುವ ಶಾಸಕ ತನ್ವೀರ್‌ಸೇಠ್ ನಾನು ವೇದಿಕೆ ಮೇಲೆ ಬರಲ್ಲ. ಬಂದರೆ ಮುಕ್ತವಾಗಿ ಮಾತನಾಡಲು ಆಗಲ್ಲ ಎಂದು ಬೇಸರ ಹೊರಹಾಕಿದ್ದಾರೆ. ಈ ಬೇಸರಕ್ಕೆ ಏನೂ ಕಾರಣ ಇದೆ ಎಂಬುದು ಎಲ್ಲರಿಗೂ ಗೊತ್ತು. ಸಿಎಂ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ 6 ತಿಂಗಳಲ್ಲಿ ನಾನು ಕೊಡುವ ಲಿಸ್ಟ್ ಕ್ಲಿಯರ್ ಮಾಡು ಅಪ್ಪ ಎಂದು

ಪುಟ 2ಕ್ಕೆ

### ಸಿದ್ದರಾಮಯ್ಯ ಮನದ ಮಾತು

**ಅಧಿಕಾರ ಹಸ್ತಾಂತರ ಇಲ್ಲ ಎಂಬ ಯತೀಂದ್ರ ಹೇಳಿಕೆ ಸಿದ್ದರಾಮಯ್ಯ ಅವರ ಮನದ ಮಾತಾಗಿದೆ. ಸಿದ್ದರಾಮಯ್ಯ ಹೇಳಲು ಆಗದನ್ನು ಮಗನ ಮೂಲಕ ಹೇಳಿಸುತ್ತಿದ್ದಾರೆ. ಹೈಕಮಾಂಡ್ ಏನೂ ಹೇಳಿಲ್ಲ. ಅಂದರೆ ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಎಂದು ಹೇಳಿವಂತೆ ತಿಳಿಸಿದ್ದಾರೆ. ವೀರೇಂದ್ರ ಪಾಟೀಲ್ ನಂತರ ಕಾಂಗ್ರೆಸ್ ಗೆ ರಾಜ್ಯದಲ್ಲಿ ಯಾವ ಸ್ಥಿತಿ ಬಂತೋ ಅದೇ ಸ್ಥಿತಿ ಈಗಲು ಕಾಂಗ್ರೆಸ್ ಗೆ ಬರುತ್ತದೆ ಎಂದು ಪ್ರತಾಪ ಸಿಂಹ ಟೀಕಿಸಿದರು.**

ಮೊದಲ ಪುಟದಿಂದ

## 14ರಂದು ಹನುಮಾನ್ ಚಾಲಿಸ್

ತೆನಾಲಿಯೂ ಹನುಮ ಪ್ರತಿಮೆ ಸ್ಥಾಪನೆ ಆಗುತ್ತಿದೆ ಎಂದರು. ಹನುಮ ಪರಬ್ರಹ್ಮ ಸ್ವರೂಪ, ಶಿವನ ಅವಾತಾರ, ವಿಷ್ಣು, ಶಿವನಿಗೂ ಒಂದೇ ಎಂಬರ್ಥವನ್ನು ಹನುಮನ ಮೂಲಕ ಕಾಣಬಹುದು. ಮನಸ್ಸು ಮತ್ತು ಬುದ್ಧಿ ಎರಡು ಆಕ್ಯವಾಗಿರುವ ರೂಪವೇ ಹನುಮ ರೂಪ. ರಾಮಾಯಣ ಪೂರ್ತಿ ನೋಡಿದಾಗ ಮನೋಬುದ್ಧಿ ಐಕ್ಯ ಮಾಡಲಾಗಿದೆ. ಹೀಗಾಗಿ ಹನುಮನ ಪ್ರಾಣಯಾಮ ಮಾಡಿದರೆ ನೀವು ಯಾರು, ನಿಮ್ಮ ಆರೋಗ್ಯದ ಸ್ಥಿತಿ ಹೇಗಿದೆ ಎಂಬುದು ತಿಳಿದು ನಿಮಗೆ ಮತ್ತಷ್ಟು ಶಕ್ತಿ ಬರಲಿದೆ. ರಾವಣನ ಪಂಚಪ್ರಾಣವನ್ನು ಪಂಚಮುಖ ಹನುಮ ಸಂಹಾರಿಸಿದ್ದರಿಂದ ಪಂಚಮುಖಿ ಆಂಜನೇಯನ ಜನ್ಮವಾಯಿತು. 333ಕೋಟಿ ದೇವತೆಗಳೂ ನಮ್ಮಲಿ ಇಲ್ಲ. ಆದರೆ, ಅಷ್ಟೂ ಗುಣಗಳ ಇರುವ ಮನುಷ್ಯರಿದ್ದಾರೆ. ಹೀಗಾಗಿ ಅನೇಕ ಗುಣಗಳಿರುವ ಎಲ್ಲರೂ ಒಟ್ಟಿಗೆ ಸೇರಿ ಪ್ರಾರ್ಥಿಸಿದರೆ ಅದರ ಶಕ್ತಿಯೂ ಹೆಚ್ಚಾಗಲಿದೆ. ಈ ಕಾರಣದಿಂದ ಸಾಮೂಹಿಕ ಪಾರಾಯಣ ನಡೆಸಲಾಗುತ್ತಿದೆ ಎಂದರು.

ಗಣಪತಿ ಆಶ್ರಮದ ಆಡಳಿತಾಧಿಕಾರಿಯಾದ ಸಿದ್ಧಾರ್ಥ ಮಾತನಾಡಿ, ಗಣಪತಿ ಸಚ್ಚಿದಾನಂದ ಶ್ರೀಗಳು ಮಗುವಾಗಿರುವಾಗಲೇ ಅವರ ತಾಯಿಯವರು ಹನುಮನ ಚಾಲಿಸ ಪಾರಾಯಣ ಮಾಡಿದರು. ಹೀಗಾಗಿ ದೇಶದಲ್ಲಿ ಎಲ್ಲಿಯೂ ಇರದ 85 ಅಡಿ ಎತ್ತರದ ಆಂಜನೇಯಸ್ವಾಮಿ ಪ್ರತಿಮೆ ಸ್ಥಾಪಿಸಿದ್ದಾರೆ. ಜತೆಗೆ ಆಕಾಶ, ಭೂಮಿ ಹಾಗೂ ಪಾತಾಳ ಆಂಜನೇಯನ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಇಲ್ಲಿ ದೇವರಿಗೆ ತೆಂಗಿನ ಕಾಯಿ ಹರಕೆ ಕಟ್ಟಬಹುದಾಗಿದೆ ಎಂದು ತಿಳಿಸಿದರು. ಮೊದಲಿಗೆ 2016ರಲ್ಲಿ ಮೈಸೂರಿನಲ್ಲಿ ಹನುಮಾನ್ ಚಾಲಿಸ್ ಪಾರಾಯಣವನ್ನು ಯಶಸ್ವಿಯಾಗಿ ನಡೆಸಲಾಯಿತು. ಬಳಿಕ 2015ರಲ್ಲಿ ಆಂಧ್ರ ಪ್ರದೇಶದ ತೆನಾಲಿ ಗ್ರಾಮದ 3ಲಕ್ಷಕ್ಕೂ ಅಧಿಕ ಮಂದಿ ಸೇರಿ ಸಾಮೂಹಿಕ ಪಾರಾಯಣ ಯಶಸ್ವಿ ಮಾಡಿದ್ದರು. ಹೀಗಾಗಿ 10 ವರ್ಷದ ಬಳಿಕ ಮತ್ತೆ ಕಾರ್ಯಕ್ರಮ ನಡೆಯುತ್ತಿದೆ ಎಂದು ತಿಳಿಸಿದರು.

## ಬಾಲಕನ ಮೇಲೆ ಚಿರತೆ ದಾಳಿ

ಜೊತೆ ಯಲ್ಲಿದ್ದ ಭಕ್ತಾದಿಗಳು ಬಸ್ಸಿನ ಮೂಲಕ ಮಲೆ ಮಹದೇಶ್ವರ ಬೆಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಿದರು. ಪಾದಯಾತ್ರೆಯ ಮೂಲಕ ತೆರಳುತ್ತಿದ್ದ ಪಾದಯಾತ್ರಿಕರಿಗೆ ಒಂದು ಬೃಹತ್ ಗಾತ್ರದ ಚಿರತೆ ಹಾಗೂ ಒಂದು ಚಿಕ್ಕ ಚಿರತೆ ಕಾಣಿಸಿಕೊಂಡಿದೆ. ಪಾದಯಾತ್ರೆಯ ಮೂಲಕ ತೆರಳುತ್ತಿರುವ ಭಕ್ತಾದಿಗಳು ಅರಣ್ಯ ಪ್ರದೇಶ ಮೂಲಕ ಪಾದಯಾತ್ರೆ ಮಾಡುವ ಬದಲು ಮುಖ್ಯ ರಸ್ತೆಯ ಮೂಲಕ ಪಾದಯಾತ್ರೆ ಮಾಡಿದರೆ ಸುರಕ್ಷತೆ ಇರಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

## ವಿಧಾನಸೌಧದಲ್ಲೇ ಕಳ್ಳತನ!

ಠಾಣೆಗೆ ದೂರು ನೀಡಿದ್ದರು. ಸಚಿವರ ಕಚೇರಿಯಲ್ಲೇ ಕಳ್ಳತನ ನಡೆದ ಪ್ರಕರಣವನ್ನು ಗಂಭೀರವಾಗಿ ಸ್ವೀಕರಿಸಿದ ಪೊಲೀಸರು ಸಿಸಿಟಿವಿ ಪರಿಶೀಲನೆ ನಡೆಸಿದ್ದಾರೆ. ಪರಿಶೀಲನೆ ವೇಳೆ ವಿಧಾನಸೌಧದ ಆಡಳಿತಾತ್ಮಕ ಮತ್ತು ಭದ್ರತಾ ವಿಷಯಗಳಿಗೆ ಸಂಬಂಧಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆಯ ಡಿ ಗ್ರೂಪ್ ನೌಕರನ ಪಾತ್ರ ಗೊತ್ತಾಗಿದೆ. ನೌಕರ ಕೈಚೀಲ ಹಿಡಿದುಕೊಂಡು ಹೋಗುವುದು ಸಿಸಿಟಿವಿಯಲ್ಲಿ ಪತ್ತೆಯಾದ ಬೆನ್ನಲ್ಲೇ ವಿಧಾನಸೌಧ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಕಳ್ಳತನ ಪ್ರಕರಣವನ್ನು ಪೊಲೀಸರು ಬೇಧಿಸಿದ್ದರೂ ಈಗ ಹಲವು ಪ್ರಶ್ನೆಗಳು ಎದ್ದಿವೆ. ಪರಿಶೀಲನೆ ನಡೆಸದೇ ಚಿನ್ನಾಭರಣ, ನಗದನ್ನು ವಿಧಾನಸೌಧದ ಒಳಗಡೆ ಭದ್ರತಾ ಸಿಬ್ಬಂದಿ ಬಿಟ್ಟಿದ್ದು ಹೇಗೆ? ಮೆಟಲ್ ಡಿಟೆಕ್ಟರ್, ತಪಾಸಣೆ ಕೇವಲ ನೆಪಕ್ಕೆ ಮಾತ್ರ ಇದೆಯೇ? ಸಚಿವರ ಕಚೇರಿಯಲ್ಲೇ ಕಳ್ಳತನ ಭದ್ರತಾ ವೈಫಲ್ಯದ ಪ್ರತೀಕವೇ ಎಂಬ ಗಂಭೀರ ಪ್ರಶ್ನೆ ಎದ್ದಿದೆ.

## ಸಿಎಂ ಪುತ್ರನಿಂದ ವರ್ಗಾವಣೆ ದಂಧೆ

ಸಾರ್ವಜನಿಕವಾಗಿಯೇ ಹೇಳಿಕೆ ನೀಡಿದ ಯತೀಂದ್ರ ಸಿದ್ದರಾಮಯ್ಯ ಸಿಕ್ಕಿ ಬಿದ್ದಿದ್ದಾರೆ ಎಂದು ಟೀಕಿಸಿದರು. ಯತೀಂದ್ರರ ಲೆಟರ್ ಮೂಲಕ ಪೋಸ್ಟಿಂಗ್ ಆಗುತ್ತಿರುವುದಾಗಿ ಹೇಳುತ್ತಿದ್ದಾರೆ. ವಿದ್ಯಾವಂತರಾಗಿ ವರ್ಗಾವಣೆ ದಂಧೆ ತರುತ್ತಿದ್ದಾರೆ. ರಾಜಕೀಯದಿಂದ ಅಧಿಕಾರದ ಪಡಸಾಲೆಗೆ ಬಿಟ್ಟುಕೊಂಡ ಬಳಿಕ ತಲೆ ತಗ್ಗಿಸುವ ಸ್ಥಿತಿಗೆ ಹೋಗಿದ್ದಾರೆಂದು ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯಗೆ ಯತೀಂದ್ರ ಕೆಟ್ಟ ಹೆಸರು ತರುತ್ತಿದ್ದಾರೆ. ಸಿದ್ದರಾಮಯ್ಯ ತಲೆ ತಗ್ಗಿಸುವ ಕೆಲಸವನ್ನು ಯತೀಂದ್ರ ಮಾಡುತ್ತಿದ್ದಾರೆ. ಸಿಎಂ ಮೊದಲ ಪುತ್ರ ರಾಕೇಶ್ ಸಿದ್ದರಾಮಯ್ಯರಿಂದ ಸಿದ್ದರಾಮಯ್ಯಗೆ ಯಾವತ್ತೂ ಮುಜುಗರ ಆಗಿರಲಿಲ್ಲ. ರಾಕೇಶ್ ಸಿದ್ದರಾಮಯ್ಯ ಬದುಕಿದ್ದರೆ ಸಿದ್ದರಾಮಯ್ಯಗೆ ತಗ್ಗಿಸುವ ಸ್ಥಿತಿ ತರುತ್ತಿರಲಿಲ್ಲ. ಅಪ್ಪನ ಅಧಿಕಾರವನ್ನು ಅತಿ ಹೆಚ್ಚು ಯತೀಂದ್ರ ದುರುಪಯೋಗ ಮಾಡಿಕೊಂಡಿದ್ದಾರೆ. ಮಗನಿಂದ ಸಿದ್ದರಾಮಯ್ಯ ಹೆಜ್ಜೆ ಹೆಜ್ಜೆಗೆ ಮುಜುಗರಕ್ಕೆ ಒಳಗಾಗುತ್ತಿದ್ದಾರೆ. ರಾಜ್ಯದಲ್ಲಿ ಯತೀಂದ್ರ ಸೇಲ್ಸ್ ಟ್ಯಾಕ್ಸ್ ಕಡ್ಡಾಯವಾಗಿದೆ ಎಂದು ಆರೋಪಿಸಿದರು.

ಯತೀಂದ್ರ ಅವರೇ ಯಾರಿಗಾಗಿ ಇಷ್ಟು ಆಸ್ತಿ ಮಾಡುತ್ತಿದ್ದಿರಿ? ಮನೆ, ತೋಟ, ಆಸ್ತಿ, ಎಲ್ಲಾ ಇದೆ. ನಿಮ್ಮ ಅಣ್ಣನ ಕುಟುಂಬ ಆರ್ಥಿಕವಾಗಿ ಸದೃಢವಾಗಿದೆ. ಇನ್ನೂ ಯಾರಿಗಾಗಿ ಇಷ್ಟು ಆಸ್ತಿ ಮಾಡುತ್ತಿದ್ದಿರಿ ಹೇಳಿ?, ಎಲ್ಲರಿಗೂ ಗದರಿಸುವ ಸಿದ್ದರಾಮಯ್ಯ ತಮ್ಮ ಮಗನಿಗೆ ಈ ವಿಚಾರದಲ್ಲಿ ಗದ್ದರಿಸಲು ಆಗುತ್ತಿಲ್ಲವೇ ಎಂದು ಪ್ರಶ್ನಿಸಿದರು. ಯತೀಂದ್ರ ಬಾಯಲ್ಲಿ ಒಂದು ದಿನವಾದರೂ ಮೈಸೂರು ಅಭಿವೃದ್ಧಿ ಬಗ್ಗೆ ಮಾತು ಬಂದಿದೆಯೇ? ಎಂದು ಪ್ರಶ್ನಿಸಿದರು. ನಾಳೆ ಬೆಳಗ್ಗೆ ಬಿಬಿಎಂಪಿ, ಮೈಸೂರು ಪಾಲಿಕೆ ಚುನಾವಣೆ ನಡೆದೆ ಕಾಂಗ್ರೆಸ್ ಧೂಳೀಪಟ ಆಗುತ್ತದೆ. ಸ್ಥಳೀಯ ಸಂಸ್ಥೆ ಚುನಾವಣೆ ಮಾಡಲು ಕಾಂಗ್ರೆಸ್ ಗೆ ಧೈರ್ಯ ಇಲ್ಲ ಎಂದರು.

## ಚಂದನ್ ನಿವಾಸಕ್ಕೆ ಪರಮೇಶ್ವರ್ ಭೇಟಿ

ಹತ್ಯೆಗೀಡಾಗಿರುವ ಸುದ್ದಿ ಮನಸ್ಸಿಗೆ ಅತೀವ ನೋವನ್ನುಂಟು ಮಾಡಿದೆ. ಅಲ್ಲದೆ, ಆದಷ್ಟು ಬೇಗ ಮೃತ ಶರೀರ ತರಲು ಸಹಕರಿಸಲಾಗುವುದು ಎಂದು ತಿಳಿಸಿದರು. ಕರ್ನಾಟಕದಲ್ಲಿ ನೆಲೆಸಿರುವ ದುಃಖತಪ್ತ ಕುಟುಂಬದವರಿಗೆ ನೆರವು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಚಂದನ್ ಕುಮಾರ್ ಹತ್ಯೆ ಪ್ರಕರಣವನ್ನು ಸೂಕ್ತ ತನಿಖೆ ನಡೆಸಿ, ನ್ಯಾಯ ಒದಗಿಸುವಂತೆ ಕೇಂದ್ರ ವಿದೇಶಾಂಗ ಸಚಿವಾಲಯದ ಮೂಲಕ ಕೆನಡಾ ಸರ್ಕಾರವನ್ನು ಒತ್ತಾಯಿಸುತ್ತೇನೆ. ಎಲ್ಲ ಕನ್ನಡಿಗರ ಸುರಕ್ಷತೆಗೆ ಕರ್ನಾಟಕ ಸರ್ಕಾರವು ಕಟಿಬದ್ಧವಾಗಿದೆ ಎಂದು ಭರವಸೆ ನೀಡಿದರು.

## 40 ಮಂದಿಗೆ ನೋಟಿಸ್

40 ಮಂದಿಗೆ ನೋಟಿಸ್ ನೀಡಲಾಗಿದೆ. ಅವರು ನಿವೇಶನವನ್ನು ಕಾನೂನು ಪ್ರಕಾರವೇ ಪಡೆ ದಿದ್ದಾರೆಯೇ? ಅದಕ್ಕೆ ಪೂರಕ ದಾಖಲೆಗಳು ಅವರ ಬಳಿ ಇವೆಯೇ ಎಂಬಿತ್ಯಾದಿ ಕಾನೂನಾತ್ಮಕ ಪ್ರಶ್ನೆಗಳೊಂದಿಗೆ

ನೋಟಿಸ್ ನೀಡಲಾಗಿದೆ. ನೋಟಿಸ್‌ಗೆ ಉತ್ತರಿಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸ್ಪಷ್ಟಪಡಿಸಿದರು.

## ಹೈಕಮಾಂಡ್ ತೀರ್ಮಾನ

ಬದ್ಧರಾಗಿ ಇರುತ್ತೇವೆ ಅಂತ ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ 5 ವರ್ಷ ಇರ್ತಾರಾ ಎಂಬ ಪ್ರಶ್ನೆಗೆ ಅದರ ಬಗ್ಗೆ ಗೊತ್ತಿಲ್ಲ. ಹೈಕಮಾಂಡ್ ಹೇಳೋವರೆಗೂ ಸಿದ್ದರಾಮಯ್ಯ ಇರ್ತಾರೆ ಎಂದು ಹೇಳಿದರು.

## 34 ಸಾವಿರ ಕೋಟಿ ರೂ. ಆದಾಯ

ನರೇಗಾ ಕುರಿತು ಪರಿಣಾಮಕಾರಿ ಚರ್ಚೆ ನಡೆಸಿತು ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಬಸವರಾಜ್‌ಗೆ ಹೈಕೋರ್ಟ್ ಶಾಕ್

ಹೈಕೋರ್ಟ್ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಅವರಿದ್ದ ಪೀಠ ಆರೋಪಿಯ ಜಾಮೀನು ಅರ್ಜಿಯನ್ನು ವಜಾಗೊಳಿಸಿದರು. ಈ ಹಿಂದೆ ಬಿಜೆಪಿ ಶಾಸಕ ಭೈರತಿ ಬಸವರಾಜ್ ಅವರಿಗೆ ಜಾಮೀನು ನೀಡಲು ಸೆಷನ್ಸ್ ನ್ಯಾಯಾಲಯ ನಿರಾಕರಿಸಿತ್ತು. ಬಳಿಕ ಅವರು ಜಾಮೀನಿಗಾಗಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೀಗ, ಹೈಕೋರ್ಟ್ ಕೂಡ ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ.

ಜಾಮೀನು ಅರ್ಜಿ ವಜಾಗೊಂಡಿರುವುದರಿಂದ ಹಲವು ದಿನಗಳಿಂದ ತಲೆಮರೆಸಿಕೊಂಡಿರುವ ಭೈರತಿ ಬಸವರಾಜ್ ಅವರನ್ನು ಸಿಐಡಿ ಬಂಧಿಸುವ ಸಾಧ್ಯತೆ ಇದೆ. ಭೈರತಿ ಬಸವರಾಜ್ ಅವರು ವಿದೇಶಕ್ಕೆ ಪರಾರಿಯಾಗುವ ಶಂಕೆ ಹಿನ್ನೆಲೆಯಲ್ಲಿ ಅವರ ವಿರುದ್ಧ 'ಲುಕ್‌ಔಟ್' ನೋಟಿಸ್ ಸಹ ಜಾರಿ ಮಾಡಲಾಗಿದೆ.

# ಗುಂಡ್ಲುಪೇಟೆ: ಹಸಗೂಲಿ ಪಾರ್ವತಾಂಭೆ ಜಾತ್ರಾ ಮಹೋತ್ಸವ

ಗುಂಡ್ಲುಪೇಟೆ: ತಾಲ್ಲೂಕಿನ ಹಸಗೂಲಿ ಪಾರ್ವತಾಂಭೆ ಎಂದರೆ ಶಕ್ತಿ ದೇವತೆ ತಾಲ್ಲೂಕು ಅಲ್ಲದೆ ವಿವಿಧ ಜಿಲ್ಲೆಗಳಿಂದಲೂ ತಾಯಿಗೆ ಭಕ್ತ ಬಳಗ ಜಾಸ್ತಿ ಪ್ರತಿವರ್ಷವೂ ಮೂರನೇ ಕಾರ್ತೀಕ ಮಾಸದಲ್ಲಿ ಅದ್ದೂರಿಯಾಗಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ.

ಕಳೆದ ವರ್ಷ ಪೆ.10 ರಂದು ಸ್ವರ್ಣ ಕಲ್ಲಿನಲ್ಲಿ ಪಾರ್ವತಾಂಭೆಗೆ ನೂತನವಾಗಿ ದೇವಸ್ಥಾನ ನಿರ್ಮಿಸಲಾಗಿತ್ತು ಅದರಂತೆ ವರ್ಷ ತುಂಬಿದ ಹಿನ್ನಲೆ ಗ್ರಾಮದಲ್ಲಿ ಅದ್ದೂರಿಯಾಗಿ ಮೊದಲ ವರ್ಷದ ಆರಾಧನೆ ನಡೆಸಲಾಯಿತು.

**ಹಳ್ಳಿಕಾರ್ ಎತ್ತುಗಳ ನೋಡಲು ಮುಗಿಬಿದ್ದ ಜನರು:**





ಹಸಗೂಲಿ ಗ್ರಾಮ ರೈತ ಪರಂಪರೆಯೇ ಹೆಚ್ಚಿರುವ ಗ್ರಾಮ ಇಲ್ಲಿ ಅರಾಧನೆ ಹಿನ್ನಲೇ ಶ್ರೀ ಸಚ್ಚಿದಾನಂದ ಟ್ರಸ್ಟ್‌ನ ಅಧ್ಯಕ್ಷ ಬಸವರಾಜು ಅವರು ಹಳ್ಳಿಕಾರ್ ಜೋಡೆತ್ತುಗಳ ಪ್ರದರ್ಶನ ಏರ್ಪಡಿಸಿ ಮಾಜಿ ಬಿಗ್ ಬಾಸ್ ಸ್ಪರ್ಧಿ ವರ್ತೂರು ಸಂತೋಷ್ ಹಾಗೂ ಹಾಸ್ಯನಟ ಟೆನ್ನಿಸ್ ಕೃಷ್ಣ ಕರೆಸಿದ ಹಿನ್ನಲೆ ಹಳ್ಳಿಕಾರ್ ಸ್ಪರ್ಧೆ ನೋಡಲು ಜನರು ಹರಿದು ಬಂದರು ನುರಾರು ಜೊತೆ ಹಳ್ಳಿಕಾರ್ ಎತ್ತುಗಳು ಕಣ್ಮನ ಸೆಳೆದವು ವರ್ತೂರ್ ಸಂತೋಷ್ ನೋಡಲು ಜನ ಮುಗಿಬಿದ್ದರು.



**ಸಾವಿರಾರು ಜನರಿಗೆ ಪ್ರಸಾದ ವಿತರಣೆ:**

ಪಾರ್ವತಾಂಭೆ ದೇವಸ್ಥಾನದ ಮೊದಲ ವರ್ಷದ ಆರಾಧನೆ ಮಹೋತ್ಸವ ಕ್ಕೆ ತಾಲ್ಲೂಕಿನ ವಿವಿಧ ಗ್ರಾಮದಲ್ಲಿ ಆಗಮಿಸಿದ ಸಾವಿರಾರು ಭಕ್ತರಿಗೆ ಕಜ್ಜಾಯ ಊಟವನ್ನು ಪ್ರಸಾದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೂಡುಗೂರು ಮಠದ ಶ್ರೀ ಇಮ್ಮಡಿ ಉದ್ದಾನ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದರು

ಚಲನಚಿತ್ರ ಹಾಸ್ಯ ನಟ ಟೆನಿಸ್ ಕೃಷ್ಣ ಜಾನಪದ ಗಾಯಕ ಅಮ್ಮ ರಾಮಚಂದ್ರ. ಗ್ರಾಮದ ಹಿರಿಯ ಮುಖಂಡರು ಇನ್ನಿತರರು ಹಾಜರಿದ್ದರು

> ರೈತರ ಮಕ್ಕಳಿಗೆ ಹೆಣ್ಣು ಕೊಡಿ ಸಂಬಳದ ಆಸೆಗೆ ಬಿದ್ದು ಕೊಟ್ಯಾಂತರ ಜನಕ್ಕೆ ಅನ್ನ ಹಾಕುವ ರೈತರನ ತಾತ್ಸಾರ ಮಾಡಬೇಡಿ, ನಮಗೆ ಪಾಕಿಸ್ತಾನ ಚೀನಾ ದವರಿಗಿಂತ ನಮ್ಮ ಜೊತೆಯೇ ಇರುವ ಜನರು ಡೇಂಜರ್ ಕಂಡವರ ಬಗ್ಗೆ ಮಾತನಾಡುವುದನ್ನು ಬಿಟ್ಟು ಬದುಕಲು ಕಲಿಯಿರಿ, ಕೊಟ್ಯಾಂತರ ಹಣ ಮಾಡುವ ಬದಲು. ಹಳ್ಳಿಕಾರ್ ಕಟ್ಟಿ,ಬೆಳಸಿ ನನಗೆ ಜನರ ಪ್ರೀತಿ ನೋಡಿ ಸಂತೋಷವಾಯಿತು ಮುಂದಿನ ದಿನಗಳಲ್ಲಿ ಅನ್ನದಾನಕ್ಕೆ ನಾನು ಸಹಕಾರ ನೀಡುತ್ತೇನೆ.
>
> ▸▸ **ವರ್ತೂರು ಸಂತೋಷ್** ಹಳ್ಳಿಕಾರ್ ಒಡೆಯ ಮತ್ತು ಮಾಜಿ ಬಿಗ್ ಬಾಸ್ ಸ್ಪರ್ಧಿ

# ಕೇಂದ್ರ ಬಜೆಟ್: ದೇಶದ ಅಭಿವೃದ್ಧಿಗೆ ಪೂರಕ

## ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿಕೆ । ರಾಜ್ಯಕ್ಕೆ ಹೆಚ್ಚುವರಿ 7380 ಕೋಟಿ ಅನುದಾನ

ರಾಮನಗರ: ಬಲಿಷ್ಠ ರಾಷ್ಟ್ರಗಳು ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳ ಆರ್ಥಿಕ ಸ್ಥಿತಿ ಡೋಲಾಯಮಾನವಾಗಿದೆ. ಆದರೆ ಭಾರತದ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿದೆ. ಕೇಂದ್ರ ಸರ್ಕಾರದ ವಿತ್ತ ಮಂತ್ರಿ ನಿರ್ಮಲಾ ಸೀತಾರಾಮನ್ ಇತ್ತೀಚೆಗೆ ಮಂಡಿಸಿದ ಬಜೆಟ್ ಭಾರತದ ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸಲು ಪೂರಕವಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿದರು.

ನಗರದಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಬಜೆಟ್ ನಲ್ಲಿ ಯುವ ಸಮುದಾಯದ ಸ್ವಾವಲಂಬನೆಯ ಗುರಿ ಇದೆ. ಉದ್ಯೋಗ ಸೃಷ್ಟಿ, ಕೃಷಿ ಉತ್ಪಾದಕತೆ ಮತ್ತು ನಾಗರಿಕರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಒತ್ತು ಕೊಡಲಾಗಿದೆ ಎಂದರು.

**ವಿಶ್ವದ ಮೂರನೇ ಆರ್ಥಿಕ ಬಲಿಷ್ಠ ರಾಷ್ಟ್ರ**

ಭಾರತ ವಿಶ್ವದ ಮೂರನೇ ಆರ್ಥಿಕ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಲಿದೆ. 2047ನೇ ಇಸವಿಯನ್ನು ಗಮನದಲ್ಲಿರಿಸಿಕೊಂಡು ವಿತ್ತ ಸಚಿವರು, ಬಜೆಟ್ ಮಂಡಿಸಿದ್ದಾರೆ. ಅಂದರೆ ದೇಶ ಮತ್ತಷ್ಟು ಸಾಧಿಸುವ ಕನಸು ಇಟ್ಟು ಕೊಂಡು ಬಜೆಟ್ ರೂಪಿಸಿದ್ದಾರೆ. ಅಸ್ಥಿರ ಜಾಗತಿಕ ಪರಿಸ್ಥಿತಿಯಲ್ಲಿಯೂ ಕೇಂದ್ರ ಸರ್ಕಾರವು ಸುಮಾರು ಶೇ.7ರ?ಷ್ಟು ಆರ್ಥಿಕ ಬೆಳವಣಿಗೆಯನ್ನು ಸಾಧಿಸಿದೆ. 2026–27ರ ವೇಳೆಗೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ.4.3ಕ್ಕೆ ಇಳಿಸಲಾಗಿದೆ. ಇದು ಕಳೆದ ವರ್?ದ ಶೇ.4.5ಕ್ಕಿಂತ ಕಡಿಮೆಯಾಗಿದೆ. ಇನ್ನು ಸಾಲ ಮತ್ತು ಜಿಡಿಪಿ ಅನುಪಾತವನ್ನು ಶೇ.55.6ಕ್ಕೆ ಇಳಿಸಲಾಗಿದ್ದು, 2030–31ರ ವೇಳೆಗೆ ಇದನ್ನು ಶೇ.50ಕ್ಕೆ ತರುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. 16ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯಗಳಿಗೆ ಶೇ.41ರ?ಷ್ಟು ತೆರಿಗೆ ಪಾಲು ಮತ್ತು 1.4 ಲಕ್ಷ ಕೋಟಿ ಅನುದಾನ




ನೀಡಲಾಗುತ್ತಿದೆ. ಇದರ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಹೆಚ್ಚುವರಿಯಾಗಿ 7380 ಕೋಟಿ ಅನುದಾನ ಹರಿದು ಬರಲಿದೆ. ಯುಪಿಎ ಸರ್ಕಾರದಲ್ಲಿ 85 ಸಾವಿರ ಕೋಟಿ ಬಂದಿದ್ದರೆ, ಎನ್ ಡಿಎ ಸರ್ಕಾರದಲ್ಲಿ 6 ಲಕ್ಷ ಕೋಟಿ ಬಂದಿದೆ ಎಂದು ಹೇಳಿದರು.

**ಕ್ಯಾನ್ಸರ್ ಔಷಧಿಗಳ ಸುಂಕ ರದ್ದಿಗೆ ಶ್ಲಾಘನೆ**

ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಔಷಧಗಳು ದುಬಾರಿಯಾಗಿದ್ದವು. ತಾವು ಈ ವಿಚಾರದಲ್ಲಿ ವಿತ್ತ ಮಂತ್ರಿಗಳು ಮತ್ತು ಸಂಬಂಧಿಸಿದ ಇತರ ಇಲಾಖೆಗಳ ಸಚಿವರೊಡನೆ ಚರ್ಚಿಸಿದ್ದಾಗಿ, ಅದಕ್ಕೆ ಪೂರಕವೆಂಬಂತೆ ವಿತ್ತ ಮಂತ್ರಿಗಳು ಕ್ಯಾನ್ಸರ್ ಸೇರಿದಂತೆ 17 ಔ?ಧಗಳ ಮೇಲಿನ ಕಸ್ಟಮ್ಸ್ ಸುಂಕ ರದ್ದುಗೊಳಿಸಿದ್ದಾರೆ. ಅಲ್ಲದೆ 7 ಅಪರೂಪದ ಕಾಯಿಲೆಗಳ ಮೇಲಿನ ಆಮದು ಸುಂಕಕ್ಕೂ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದರು.

ದೇಶವನ್ನು ಜಾಗತಿಕ ಬಯೋಫಾರ್ಮಾ ಹಬ್ ಮಾಡಲು ಮುಂದಿನ 5 ವರ್?ಗಳಿಗಾಗಿ 10 ಸಾವಿರ ಕೋಟಿ ಮೀಸಲಿಡಲಾಗಿದೆ. ಪ್ರಮುಖ ನಗರಗಳ ನಡುವೆ ವೇಗದ ಸಂಪರ್ಕಕ್ಕಾಗಿ ಹೈದರಾಬಾದ್ – ಬೆಂಗಳೂರು, ಚೆನ್ನೈ – ಬೆಂಗಳೂರು ಮಾರ್ಗ ಸೇರಿದಂತೆ 7 ಹೊಸ ಹೈಸ್ಪೀಡ್ ರೈಲು ಕಾರಿಡಾರ್ ಗಳನ್ನು ಘೋಷಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ವಕ್ತಾರ ಮೋಹನ್ ವಿಶ್ವ, ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಮುಖಂಡರಾದ ಎಸ್. ಆರ್. ನಾಗರಾಜು, ರುದ್ರದೇವರು, ಶ್ರೀನಿವಾಸ್, ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಮುಖಂಡರಾದ ಡಾ.ಭರತ್ ಕೆಂಪಣ್ಣ, ಸುಗ್ಗನಹಳ್ಳಿ ರಾಮಕೃ?ಯ್ಯ ಮತ್ತಿತರರು ಇದ್ದರು.

### ರಾಜ್ಯವನ್ನು ಕಡೆಗಣಿಸಲಾಗಿಲ್ಲ

ರಾಜ್ಯದಲ್ಲಿರುವ ಕಾಂಗ್ರೆಸ್ ಪಕ್ಷದ ನಾಯಕರು ರಾಜ್ಯವನ್ನು ಕಡೆಗಣಿಸಲಾಗಿದೆ ಎಂದು ಹೇಳುತ್ತಿದ್ದಾಋಎ. ಆದರೆ ವಾಸ್ತವದಲ್ಲಿ ಇದು ಸರಿಯಲ್ಲ. 63 ಸಾವಿರ ಕೋಟಿ ರೂಗಳು ಡೆವಲ್ಯೂಷನ್ ಮೂಲಕ ಮತ್ತು 16 ಸಾವಿರ ಕೋಟಿ ರೂ ಗ್ರಾಂಟ್ ಇನ್ ಏಡ್ ಮೂಲಕ ಸಿಗುತ್ತಿದೆ. ಇದು ಕಳೆದ ವರ್ಷಕ್ಕಿಂತ ಹೆಚ್ಚು ಅನುದಾನ ಸಿಗುತ್ತದೆ ಎಂದರು.

ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಗೆ 500 ಕೋಟಿ ವೆಚ್ಚದಲ್ಲಿ 100 ಹಾಸಿಗೆ ಸಾಮರ್ಥ್ಯದ ಪಾಲಿ ಟ್ರಾಮಾ ಸೆಂಟರ್ ಮಂಜೂರಾಗಿದೆ. 5 ಸಾವಿರ ಹೊರ ರೋಗಿಗಳಿಗೆ ಚಿಕಿತ್ಸೆ ನೀಡುವ ಓಪಿಡಿ ಬ್ಲಾಕ್ ಗೆ 430 ಕೋಟಿ ಸೇರಿ ಒಟ್ಟು 930 ಕೋಟಿ ಮಂಜೂರಾಗಿದೆ ಎಂದರು.

### ಮೆಟ್ರೋ ದರ ಏರಿಕೆ ಬೇಡ
### ರಾಜ್ಯ ಸರ್ಕಾರ ಪತ್ರ ಬರೆಯಲಿ

ಬೆಂಗಳೂರಿನ ನಮ್ಮ ಮೆಟ್ರೋದ ದರ ಏರಿಕೆ ಸರಿಯಲ್ಲ ಎಂಬುದು ತಮ್ಮ ಅಭಿಪ್ರಾಯವಾಗಿದೆ. ಕಳೆದ ವರ್ಷವೇ ದರ ಹೆಚ್ಚಳವಾಗಿದೆ. ವಾರ್ಷಿಕ ದರ ಶೇಕಡ 5ರ?ಷ್ಟು ಹೆಚ್ಚಳ ಮಾಡಬೇಕೆಂಬ ನಿಯಮವೇ ಇದೆ. ರಾಜ್ಯ ಸರ್ಕಾರ ದರ ಹೆಚ್ಚಳ ನಿರಾಕರಿಸಿ ಬಿಎಂಆರ್ ಸಿಎಲ್ ಗೆ ಪತ್ರ ಬರೆದಲ್ಲಿ ದರ ಏರಿಕೆ ಆಗುವುದೇ ಇಲ್ಲ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು. ಪತ್ರ ಬರೆಯುವುದನ್ನು ಬಿಟ್ಟು, ಟೀಕೆ ಮಾಡುವುದು ಸರಿಯಲ್ಲ ಎಂದರು.

## ಸಿಸಿಬಿ ಕಾರ್ಯಾಚರಣೆ: ಥಾರ್ ವಶಕ್ಕೆ

ಮೈಸೂರು: ಮೈಸೂರು ನಗರ ಸಿಸಿಬಿ ಪೊಲೀಸರ ಕಾರ್ಯಾಚರಣೆ ನಡೆಸಿ ಓರ್ವ ಆರೋಪಿ ಸೆರೆ ಹಿಡಿದು 14ಲಕ್ಷ ಮೌಲ್ಯದ ಮಹೇಂದ್ರ ಥಾರ್ ವಾಹನವನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.



ನಗರದ ದೇವರಾಜ ಪೊಲೀಸ್ ಠಾಣಾ ಮೊ.ಸಂ.71/2025 ಕಲಂ.331(4), 305 ಬಿ.ಎನ್.ಎಸ್ ಪ್ರಕರಣದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಬೈರಾಕುರ ಹೆಬ್ಬಾಣಿ ಗ್ರಾಮದ ಆರೋಪಿ ಅರುಣ್ ಕುಮಾರ್ ಅಲಿಯಾಸ್ ಅರುಣ್ ಬಿನ್ ನರಸಿಂಹಯ್ಯ(33)ಯನ್ನು ದಸ್ತಗಿರಿ ಮಾಡಿ ಪ್ರಕರಣಕ್ಕೆ ಸಂಬಂದಿಸಿದಂತೆ 14ಲಕ್ಷ ಮೌಲ್ಯದ ಮಹೇಂದ್ರ ಥಾರ್ ವಾಹನವನ್ನು ವಶಪಡಿಸಿ ಕೊಂಡು ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ




ಒಳಪಡಿಸಲಾಗಿರುತ್ತದೆ. ಸದರಿ ಕಾರ್ಯಾಚರಣೆಯಲ್ಲಿ ಸಿಸಿಬಿಯ ಪೊಲೀಸ್ ಇನ್ಸ್ಪೆಕ್ಟರ್ ನಾರಾಯಣಸ್ವಾಮಿ, ಪಿ.ಎಸ್.ಐ ಎನ್. ಅನಿಲ್‌ಕುಮಾರ್, ಎ.ಎಸ್.ಐ ಆರ್.ಸುರೇಶ್ ಹಾಗೂ ಸಿಬ್ಬಂದಿಗಳಾದ ಸಿಹೆಚ್‌ಸಿ ಜಗದೀಶ್, ಸಿಹೆಚ್‌ಸಿ ಟಿ.ಪ್ರಕಾಶ್, ಸಿಹೆಚ್‌ಸಿ ಜಯರಾಮ್, ಸಿಪಿಸಿ ರಾಘವೇಂದ್ರ ಇತರರು ಇದ್ದರು.

## ಪ್ರವರ್ಗ ಬಿ ಸಮುದಾಯಕ್ಕೆ ನ್ಯಾಯ ಒದಗಿಸಿ

ಮೈಸೂರು: ಅವೈಜ್ಞಾನಿಕ ಒಳಮೀಸಲಾತಿ ಹಿಂಪಡೆದು ಪ್ರವರ್ಗ ಬಿ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿ ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿ ಒಕ್ಕೂಟದಿಂದ ಬೈಕ್ ರ್ಯಾಲಿ ಹಾಗೂ ಕಾಲ್ನಾಡಿಗೆ ಹೋರಾಟ ನಡೆಸಿದರು.

ಮಾನಸಗಂಗೋತ್ರಿ ಅಂಬೇಡ್ಕರ್ ಪ್ರತಿಮೆಗೆಯಿಂದ ಬೈಕ್ ರ್ಯಾಲ್ ಟೌನ್ ಹಾಲ್ ವರೆಗೂ ಮೆರವಣಿಗೆ ಅಲ್ಲಿಂದ ನೂತನ ಜಿಲ್ಲಾಧಿಕಾರಿ ಕಚೇರಿ ವರೆಗೆ ಕಾಲ್ನಾಡಿಗೆ ಮಾಡಿದರು. ಒಕ್ಕೂಟದ ಸಂಚಾಲಕ ಹಾಗೂ ಅತಿಥಿ ಉಪನ್ಯಾಸಕ ಡಾ.ಮನೋಜ್ ಮಾತನಾಡಿ, ನ್ಯಾ.ನಾಗಮೋಹನ್ ದಾಸ್ ವರದಿ ಅವೈಜ್ಞಾನಿಕವಾಗಿದೆ. ಹುದ್ದೆ ಭರ್ತಿ ವೇಳೆ ರೋಸ್ಟರ್ ಪದ್ಧತಿ ಆಧಾರದಲ್ಲಿ ಮೊದಲ ಸ್ಥಾನದಲ್ಲಿ ಪ್ರವರ್ಗ–ಎ(ಮಾದಿಗ), ಒಂಭತ್ತನೇ ಸ್ಥಾನದಲ್ಲಿ ಪ್ರವರ್ಗ ಬಿ(ಹೊಲೆಯಾ), 15ನೇ ಸ್ಥಾನದಲ್ಲಿ ಪ್ರವರ್ಗ ಸಿ (ಲಂಬಾಣಿ, ಕೊರಮ, ಕೊರಚ, ಅಲೆಮಾರಿ) ಸೇರಿಸಲಾಗಿದೆ. ಇದರಿಂದಾಗಿ ಪ್ರವರ್ಗ ಬಿ ಸಮುದಾಯ 30 ವರ್ಷ ಹಿಂದಕ್ಕೆ ತಳ್ಳಲ್ಪಡುತ್ತದೆ. ಹಿಂದೆ ಎಸ್ಸಿ ವಿಭಾಗದಲ್ಲಿ ಎಲ್ಲರೂ ಒಳಪಟ್ಟು ಅಂಕದ ಆಧಾರದ ಮೇಲೆ ನೇಮಕಾತಿ ನಡೆಯುತ್ತಿದ್ದವು. ಈ ಬದಲಾವಣೆಯಿಂದ



ನೌಕರಿಯಿಂದ ವಂಚಿತರಾಗುತ್ತಿದ್ದೇವೆಂದರು.

ಅಲ್ಲದೆ ಪ್ರವರ್ಗ 1ರಲ್ಲಿ ಹುದ್ದೆ ಭರ್ತಿಯಾಗದಿದ್ದರೆ ಅದನ್ನು ಸಾಮಾನ್ಯ ವರ್ಗಕ್ಕೆ ಸೇರಿಸಲಾಗುತ್ತಿದ್ದು ಇಂತಹ ಅನೇಕ ಅವೈಜ್ಞಾನಿಕ ಅಂಶಗಳಿರುವ ಒಳ ಮೀಸಲಾತಿ ಕೈ ಬಿಡಬೇಕು. ಪ್ರಕರಣ ನ್ಯಾಯಾಲಯದಲ್ಲಿರುವ ಹಿನ್ನೆಲೆಯಲ್ಲಿ ಈಗ ಒಳಮೀಸಲಾತಿ ಆಧಾರದ ಮೇಲೆ ನೇಮಕಾತಿ ತಡೆಹಿಡಿಯಬೇಕು. ಇದನ್ನು ಸರ್ಕಾರ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಉತ್ತರ ನೀಡುತ್ತೇವೆಂದರು. ಮಾಜಿ ಪುರುಷೋತ್ತಮ್, ಮಂಜುನಾಥ್ ಭೀಮ್ ಸೇನೆ, ಪರಮಾನಂದ್, ಚನ್ನಕೇಶವ್, ಶೇಖರ್ ಬುದ್ಧ, ಡಾ.ರಮೇಶ್, ಲಿಂಗರಾಜು, ಪ್ರದೀಪ್ ಮುಮ್ಮಡಿ, ಕೃಷ್ಣಮೂರ್ತಿ, ದಿಲೀಪ್ ನರಸಯ್ಯ ಉಪಸ್ಥಿತರಿದ್ದರು.

**ಸ್ಮಾರ್ಟ್ ತಂತ್ರಜ್ಞಾನ, ಸುರಕ್ಷಿತ ಆಯ್ಕೆಗಳು, ಎಐನ ಸುರಕ್ಷಿತ, ಜವಾಬ್ದಾರಿಯುತ ಬಳಕೆ ಅನ್ವೇಷಿಸುವ ಕಾರ್ಯಕ್ರಮ**

# ಅಧಿಕೃತ ಆಪ್ ಸ್ಟೋರ್ ಬಳಸಿ: ನಂದೀಶ್ ಕುಮಾರ್

ಮೈಸೂರು: ಕೃತಕ ಬುದ್ಧಿಮತ್ತೆ ಜೀವನವನ್ನು ಹೆಚ್ಚು ಚತುರ, ವೇಗವಾದ ಮತ್ತು ಹೆಚ್ಚು ಪರಿಣಾಮಕಾರಿಯಾಗಿಸುವ ಯುಗದಲ್ಲಿ ನಾವಿದ್ದೇವೆ. ಅದು ಮೋಸವನ್ನೂ ಹಿಂದಿನಿಗಿಂತ ಹೆಚ್ಚು ನಂಬಿಕೆ ಮೂಡಿಸುವಂತೆ ಮಾಡಬಹುದು. ಹೀಗಾಗಿ ಅಧಿಕೃತ ಅಪ್ ಸ್ಟೋರ್ ಗಳನ್ನು ಮಾತ್ರ ಬಳಸಿ ಎಂದು ಸೈಬರ್ ಕ್ರೈಂ ಇನ್ಸ್ಪೆಕ್ಟರ್ ನಂದೀಶ್ ಕುಮಾರ್ ಹೇಳಿದರು.

ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಭಾಂಗಣದಲ್ಲಿ ಇಂಟರ್ನೆಟ್ ದಿನ ಸ್ಮಾರ್ಟ್ ತಂತ್ರಜ್ಞಾನ, ಸುರಕ್ಷಿತ ಆಯ್ಕೆಗಳು, ಎಐನ ಸುರಕ್ಷಿತ ಮತ್ತು ಜವಾಬ್ದಾರಿಯುತ ಬಳಕೆಯನ್ನು ಅನ್ವೇಷಿಸುವುದರ ಕುರಿತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇನ್ಸ್ಟಾಗ್ರಾಮ್, ಫೇಸ್ ಬುಕ್ ನಂತಹ ಸೋಶಿಯಲ್ ಮೀಡಿಯಾ ಪ್ಲಾಟ ಮ್ಸ್‌ನಲ್ಲಿ ಕೂಡ ಅತಿ ಹೆಚ್ಚು ಜನರು ಮೋಸ ಹೋಗುತ್ತಿದ್ದಾರೆ. ಆದುದರಿಂದ ಜನರಿಗೆ ವಿವಿಧ ಕಾರ್ಯಕ್ರಮಗಳ ಮೂಲಕ ಸೈಬರ್ ಕ್ರೈಂ ಬಗ್ಗೆ



ಶಾಲಾ ಮಟ್ಟದಿಂದಲೂ ಸೋಶಿಲ್ ಮೀಡಿಯಾ ಎಐನ ಬಗ್ಗೆ ಮಾಹಿತಿಯನ್ನು ತಿಳಿಸಬೇಕಿದೆ. ಸೋಶಿಲ್ ಮೀಡಿಯಾ ಪ್ಲಾಟರ್ಮ್ಸ್‌ನಲ್ಲಿ ಪರ್ಸನಲ್ ವಿಷಯಗಳನ್ನು ಹಂಚಿಕೊಳ್ಳಬಾರದು, ಎಐ ನಿಂದ ಇನ್ಸ್ಟಾಗ್ರಾಮ್ ನಲ್ಲಿ ಬರುವ ರೀಲ್ಸ್‌ಗಳ ಮೂಲಕ ಲಿಂಕ್ ಗಳನ್ನು ಅತಿ ಹೆಚ್ಚು ಫಾರ್ವರ್ಡ್ ಮಾಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಜಾಸ್ತಿ ಆಗುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಕಡಿಮೆ ಸೈಬರ್ ಕ್ರೈಂ ಅಪರಾಧದಲ್ಲಿ ತಮಿಳುನಾಡು 1ಸ್ಥಾನದಲ್ಲಿದ್ದರೆ ರಾಜ್ಯ 5ನೇ ಸ್ಥಾನದಲ್ಲಿದೆ. ನಗರದಲ್ಲಿ ಇತ್ತೀಚಿನ ದಿನಗಳಲ್ಲಿ 48ಕೋಟಿ ವಂಚನೆಯಾಗಿದೆ. ಆದರಿಂದ ಯಾವುದೇ ಒಟಿಪಿ ಅಥವಾ ರಹಸ್ಯ ಮಾಹಿತಿಯನ್ನು ಎಂದಿಗೂ ಹಂಚಿಕೊಳ್ಳಬಾರದು. ಆನ್‌ಲೈನ್‌ನಲ್ಲಿ ಅತಿಯಾದ ಹಂಚಿಕೆಯನ್ನು ತಪ್ಪಿಸುವುದು, ಆ?ಯಪ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಗೌಪ್ಯತಾ ಸೆಟ್ಟಿಂಗ್ಗಳನ್ನು ಬಳಸಬೇಕು ಎಂದರು. ಸಹಾಯಕ ಪ್ರಾಧ್ಯಾಪಕಿ ಶಿಲ್ಪಾ ಮಾತನಾಡಿ ಇಂಟರ್ನೆಟ್ ಮತ್ತು ಅದರ ಸುರಕ್ಷಿತ ಮತ್ತು ಜವಾಬ್ದಾರಿಯುತ ಬಳಕೆಯ ಬಗ್ಗೆ ಬಳಕೆದಾರರನ್ನು ಜಾಗೃತಗೊಳಿಸಬೇಕು ಎಂದರು. ಸೈಬರ್ ನೈರ್ಮಲ್ಯಕ್ಕಾಗಿ ಉತ್ತಮ ಅಭ್ಯಾಸಗಳನ್ನು ಉತ್ತೇಜಿಸಿ ಪ್ರಮುಖ ಸೈಬರ್ ಬೆದರಿಕೆಗಳು ಮತ್ತು ತಗ್ಗಿಸುವಿಕೆ ತಂತ್ರಗಳ ಬಗ್ಗೆ ಬಳಕೆದಾರರಿಗೆ ಶಿಕ್ಷಣ ನೀಡಬೇಕು ಎಂದು ತಿಳಿದರು. ಆಡಳಿತ ಉಪ ಕಾರ್ಯದರ್ಶಿ ಬಿ.ಎಂ.ಸವಿತ, ಅಭಿವೃದ್ಧಿ ಉಪಕಾರ್ಯದರ್ಶಿ ಭೀಮಪ್ಪ, ಮುಖ್ಯ ಯೋಜನಾ ಅಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಮುಖ್ಯ ಲೆಕ್ಕಧಿಕಾರಿ ಸಿದ್ದಗಂಗಮ್ಮ, ಸೈಬರ್ ಕ್ರೈಂ ಇನ್ಸ್ಪೆಕ್ಟರ್ ಮಹೇಶ್, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು

# ನಿಲ್ಲದ ಪ್ರಸಾದ್: ಪ್ರತಿಭಟನೆ



ಮೈಸೂರು: ಚಾಮುಂಡಿ ಬೆಟ್ಟದಲ್ಲಿ ನಡೆಯುತ್ತಿರುವ ಪ್ರಸಾದ್ ಯೋಜನೆಯಡಿ ಅಭಿವೃದ್ಧಿ ಕಾಮಗಾರಿ ಸ್ಥಗಿತಗೊಳಿಸುವಂತೆ ಮೈಸೂರು ಕನ್ನಡ ವೇದಿಕೆಯಿಂದಲೂ ಪ್ರತಿಭಟನೆ ನಡೆಸಿ ಖಂಡಿಸುವ ಕೆಲಸ ಮುಂದುವರೆಯಿತು.

ವೇದಿಕೆ ಅಧ್ಯಕ್ಷ ಬಾಲಕೃಷ್ಣ ನೇತೃತ್ವದಲ್ಲಿ ಬೆಟ್ಟದ ಮೇಲೆ ಪ್ರತಿಭಟನೆ ಧರಣಿ ಮಾತನಾಡಿದ ಅವರು, ಅಭಿವೃದ್ಧಿ ಹೆಸರಿನಲ್ಲಿ ಬೆಟ್ಟದ ಪಾರಂಪರಿಕತೆಗೆ ಧಕ್ಕೆ ತರಲು ಸರ್ಕಾರ ಹೊರಟಿದೆ. ಅಧಿಕಾರಿಗಳೂ ಕೂಡ ಸರ್ಕಾರದ ಹೇಳಿದಂತೆ ಅವರ ಕೈಗೊಂಬೆಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯುವಂತೆ ನಿಯಮ ಉಲ್ಲಂಘನೆ ಮಾಡಿ ಕಾಮಗಾರಿ ಮಾಡಲು ಹೊರಟಿದ್ದಾರೆ. ಚಾಮುಂಡಿ ಬೆಟ್ಟ ಸುತ್ತ ಅರಣ್ಯ ಪ್ರದೇಶವಾಗಿದ್ದು, ಇಲ್ಲಿ ಯಾವುದೇ ಕಾಮಗಾರಿ ಮಾಡುವ ಮುನ್ನ ಅರಣ್ಯ ಇಲಾಖೆಯ ಅನುಮತಿ ಪಡೆಯಬೇಕು. ಆದರೆ, ಚಾಮುಂಡಿ ಬೆಟ್ಟ ಅಧಿಕಾರಿಗಳು ತೊಘಲಕ್ ದರ್ಬಾರ್ ಮಾಡುತ್ತಿದ್ದು, ಇವರ ತಾಳಕ್ಕೆ ಜನಪ್ರತಿನಿಧಿಗಳು ಕುಣಿಯುತ್ತಿದ್ದು, ಸ್ಥಳೀಯರ ಹೋರಾಟಕ್ಕೂ ಮನ್ನಣೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಪ್ರಸಾದ ಯೋಜನೆ ಹೆಸರಿನಲ್ಲಿ ಹಣ ಲೂಟಿ ಮಾಡಿ ಪರಿಸರ ಹಾಳು ಮಾಡಲು ಹೊರಟಿದ್ದಾರೆ. ಈಗಾಗಲೇ ಮಡಿಕೇರಿಯಲ್ಲಿ ಆದಾ ಘಟನೆಗಳು ಮಳೆ ಭೂಕುಸಿತ ಮಾಸುವ ಮುನ್ನವೇ ಬೆಟ್ಟದ ಕಾಮಗಾರಿ ಕೈಗೆತ್ತಿಕೊಂಡಿರುವುದು ಖಂಡನೀಯ ಎಂದರು. ನಾಲಾ ಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಸಾಯಿ ಚಾಮರಾಜು, ಪ್ಯಾಲೇಸ್ ಬಾಬು,ಹರೀಶ್ ಚಿನ್ನಪ್ಪ, ಶಿವುಗೌಡ, ಮಾದಪ್ಪಸುನೀಲ್,ಗೋಪಿ,ಗೈಡ್ ಸ್ವಾಮಿ,ಚೆಲುವರಾಯ ಸ್ವಾಮಿ , ಹೊಣ ಕೆರೆ ಕೆರೆ ಸ್ವಾಮಿ, ಎಲ್ ಐ ಸಿ ಸಿದ್ದಪ್ಪ, ಗೋವಿಂದರಾಜು, ಬೀಡಾ ಬಾಬು, ರಮೇಶ್, ಮನೋಹರ್, ನಟರಾಜು, ರೈತ ಪರ್ವ ಅಧ್ಯಕ್ಷ ಅರುಣ್ ಕುಮಾರ್, ಪ್ರಧಾನ ಕಾರ್ಯ ದರ್ಶಿ ಡಾ.ಉಮಾಪತಿ ಇದ್ದರು.

# ರಾಜ್‌ಕುಮಾರ್ ರಸ್ತೆ ದುಸ್ಥಿತಿ ಸರಿಪಡಿಸದಿದ್ದರೆ ಹೋರಾಟ

ಮೈಸೂರು: ನಗರದ ಟೆರೆಸಿಯನ್ ಕಾಲೇಜು ಸಿಗ್ನಲ್ ಲೈಟ್‌ನಿಂದ ಮಹದೇವಪುರಕ್ಕೆ ಸಂಪರ್ಕ ಕಲ್ಪಿಸುವ ಹಾಗೂ ಮೇರು ನಟ ಡಾ.ರಾಜ್‌ಕುಮಾರ್ ಹೆಸರನ್ನು ಹೊಂದಿರುವ ಸುಮಾರು 3 ಕಿ.ಮೀ ಉದ್ದದ ರಸ್ತೆಯ ಒಂದು ಕಡೆ ಸುಮಾರು 20 ಅಡಿಯಷ್ಟು ಭಾಗ ಹದಗೆಟ್ಟಿದೆ. ಇದನ್ನು ಸರಿಪಡಿಸಬೇಕೆಂದು ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾರೂ ಸ್ಪಂದಿಸುತ್ತಿಲ್ಲ. ಹೀಗಾಗಿ ಇನ್ನು 15 ದಿನಗಳೊಳಗೆ ದುರಸ್ತಿ ಪಡಿಸದಿದ್ದಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಈ ರಸ್ತೆಗೆ ಹೊಂದಿಕೊಂಡ ವಿವಿಧ ಬಡಾವಣೆಗಳ ವಾಸಿಗಳು ಎಚ್ಚರಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮೊದಲಿಗೆ ಪ್ರೊ.ಸಿ.ಬಿ. ಬಸವರಾಜ್ ಮಾತನಾಡಿ, ಈ ರಸ್ತೆಗೆ ಡಾ. ರಾಜ್‌ಕುಮಾರ್ ರಸ್ತೆ ಎಂದು ಹೆಸರಿಟ್ಟಿದ್ದರೂ ಅದರ ಹದಗೆಟ್ಟ ಭಾಗದ ಕಾರಣ ರಾಜ್‌ಕುಮಾರ್ ಹೆಸರಿಗೆ ಅಪಮಾನವಾಗುತ್ತಿದೆ. ಈ ರಸ್ತೆಯಲ್ಲಿ ಒಂದು ಕಡೆ ಭೂವಿವಾದದ ಕಾರಣ ಸುಮಾರು 2000 ಮಿಟರ್‌ನಷ್ಟು ದೂರ ಡಾಂಬರ್ ಹಾಕಿಲ್ಲ. ಈ ಭಾಗದಲ್ಲಿ ಹಿರಿಯ ನಾಗರಿಕರು ಹಾಗೂ ಮಹಿಳೆಯರು, ಮಕ್ಕಳು ಆತಂಕದಿಂದಲೇ ಸಾಗುವಂತಾಗುತ್ತಿದೆ. ಅನೇಕರು ಕೆಳಗೆ ಬಿದ್ದು ಗಾಯಗೊಂಡ ಘಟನೆಯೂ ಉಂಟು.




ಹೀಗಿದ್ದರೂ ಸಂಬಂಧಿಸಿದವರು ಕ್ರಮ ಕೈಗೊಂಡಿಲ್ಲ ಎಂದು ಬೇಸರಿಸಿದರು.

ವನ್ಯಜೀವಿ ಸಂರಕ್ಷಕ ಪ್ರದೀಪ್ ಮಾತನಾಡಿ, ರಸ್ತೆಯ ಈ ಭಾಗದ ದುಸ್ಥಿತಿ ಕಾರಣ ಬಹುತೇಕ ವಾಹನಗಳು ಕಿರಿದಾದ ಕಾವೇರಿ ಮುಖ್ಯ ರಸ್ತೆಯಲ್ಲಿ ಸಾಗುತ್ತಿವೆ. ಇದರಿಂದ ಆ ಭಾಗದ ಜನತೆಗೆ ಕಿರಿಕಿರಿಯುಂಟಾಗುತ್ತಿದೆ. ರಾಜ್‌ಕುಮಾರ್ ರಸ್ತೆಯ ದುಸ್ಥಿತಿ ಬಗ್ಗೆ ಗಮನ ಸೆಳೆದರೆ ಶಾಸಕ ತನ್ವೀರ್‌ಸೇಠ್ ನ್ಯಾಯಾಲಯದಲ್ಲಿರುವ ವಿವಾದ ಕಾರಣವೆನ್ನುತ್ತಾರೆ. ಆದರೆ ಇದನ್ನು ಬಗೆಹರಿಸುವುದು ಅವರಿಗೆ ಕಷ್ಟದ ಕೆಲಸವಲ್ಲ. ಆದ್ದರಿಂದ ಕೂಡಲೇ ಸಮಸ್ಯೆ ಬಗೆಹರಿಸಬೇಕೆಂದು ಮನವಿ ಮಾಡಿದರು. ಇನ್ನಿತರ ಹಿರಿಯ ನಿವಾಸಿಗಳಾದ ಮಲ್ಲಿಕಾರ್ಜುನ್, ಕೆಇಬಿ ಬಸವರಾಜು, ಜಯಶಂಕರ್ ಸ್ವಾಮಿ, ಮೈಕ್ ಪ್ರಕಾಶ್ ಮೊದಲಾದವರು ಸಹಾ ಮಾತನಾಡಿ, ಶೀಘ್ರ ಈ ರಸ್ತೆ ದುರಸ್ತಿ ಮಾಡದಿದ್ದರೆ ತೀವ್ರ ಹೋರಾಟ ನಡೆಸುವ ಎಚ್ಚರಿಕೆ ನಿಡಿದರು.

## 13ರಂದು ಸರಳ ವಿವಾಹ ಕಾರ್ಯಕ್ರಮ

ರಾಮನಗರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಸರಳ ವಿವಾಹ ಕಾರ್ಯಕ್ರಮವು ಫೆ. 13ರ ಶುಕ್ರವಾರ ಸಂಜೆ 5 ಗಂಟೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದ ಸುಲ್ತಾನ್ ಪ್ಯಾಲಸ್‌ನಲ್ಲಿ ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ, ಭಾರಿ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರ ಅಭಿವೃದ್ಧಿ ಹಾಗೂ ಬೆಂಗಳೂರು ನಗರ ಉಸ್ತುವಾರಿ ಸಚಿವರಾದ ಡಿ.ಕೆ.ಶಿವಕುಮಾರ್, ಸಾರಿಗೆ, ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಸತಿ ಇಲಾಖೆ ಸಚಿವರಾದ ಜಮೀನ್ ಅಹಮ್ಮದ್ ಖಾನ್, ಪೌರಾಡಳಿತ ಇಲಾಖೆ ಸಚಿವರಾದ ರಹೀಂ ಖಾನ್ ಅವರು ಘನ ಉಪಸ್ಥಿತಿ ವಹಿಸುವರು. ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅಧ್ಯಕ್ಷತೆ ವಹಿಸುವರು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ. ಎನ್. ಮಂಜುನಾಥ್, ವಿಧಾನ ಪರಿಷತ್ ಸದಸ್ಯರು ಹಾಗೂ ಮುಖ್ಯ ಸಚೇತಕರಾದ ಸಲೀಂ ಅಹಮ್ಮದ್, ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾದ ಎಚ್.ಸಿ. ಬಾಲಕೃಷ್ಣ, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿ.ಪಿ. ಯೋಗೇಶ್ವರ್, ಮೈಸೂರಿನ ನರಸಿಂಹ ರಾಜ ಕ್ಷೇತ್ರದ ಶಾಸಕರಾದ ತನ್ವೀರ್ ಶೇಠ್, ಶಿವಾಜಿ ನಗರದ ಶಾಸಕರಾದ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಶಾಸಕರಾದ ಪುಟ್ಟಣ್ಣ, ಎಸ್. ರವಿ, ರಾಮೋಜಿಗೌಡ, ಸುಧಾಮ್ ದಾಸ್, ರಾಜ್ಯ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಚ್.ಎಂ. ರೇವಣ್ಣ, ಬಿ.ಎಂ.ಐ.ಸಿ.ಪಿ.ಎ ಅಧ್ಯಕ್ಷರಾದ ರಘುನಂದನ್ ರಾಮಣ್ಣ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ.ಎನ್. ನಟರಾಜು ಗಾಣಕಲ್, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು, ರಾಮನಗರ ನಗರಸಭೆ ಅಧ್ಯಕ್ಷರಾದ ಕೆ. ಶೇಷಾದ್ರಿ (ಶಶಿ) ಭಾಗವಹಿಸುವರು.

# ಮ.ಬೆಟ್ಟಕ್ಕೆ ಜಿಲ್ಲಾಧಿಕಾರಿ ಭೇಟಿ

## ಜಾತ್ರೆ ಸಿದ್ಧತೆ ಪರಿಶೀಲನೆ: ಪಾದಯಾತ್ರಿಕರ ಸುರಕ್ಷತೆಗೆ ಸೂಚನೆ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದಲ್ಲಿ 5 ದಿನಗಳ ಕಾಲ ನಡೆಯಲಿರುವ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ, ಕಾವೇರಿ ನದಿ ದಾಟಿ ಪಾದಯಾತ್ರೆ ಬರುವ ಬಸವನಕಡ ಪ್ರದೇಶಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಭೇಟಿ ನೀಡಿ ಪರಿಶೀಲಿಸಿದರು.

ಮಲೆಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿ ಶಿವರಾತ್ರಿ ಜಾತ್ರಾ ಸಿದ್ಧತೆಗಳನ್ನು ಪರಿಶೀಲಿಸಿದರು. ಫೆಬ್ರವರಿ 14ರಿಂದ 18ರವರೆಗೆ ನಡೆಯಲಿರುವ ಶಿವರಾತ್ರಿ ಜಾತ್ರೆಗೆ ಕರ್ನಾಟಕ ಮತ್ತು ತಮಿಳುನಾಡಿನಿಂದ ಲಕ್ಷಾಂತರ ಭಕ್ತರು ಪಾದಯಾತ್ರೆಯ ಮೂಲಕ ಆಗಮಿಸುವುದರಿಂದ, ಕನಕಪುರ?ರಾಮನಗರ?ಚನ್ನಪಟ್ಟಣ?ಮಾಗಡಿ ಪ್ರದೇಶಗಳಿಂದ ಕಾವೇರಿ ನದಿ ಸಂಗಮದ ಮೂಲಕ ಬಸವನಕಡ ತಲುಪಿ ಅರಣ್ಯ





ಮಾರ್ಗವಾಗಿ ಎಲ್ಲೇಮಾಳ, ಶಾಗ್ಯ, ಹಲಗಾಪುರ, ತೋಮಿಯಾರ್ ಪಾಳ್ಯ, ಡಿ.ಎಮ್. ಸಮುದ್ರ ಮಾರ್ಗವಾಗಿ ಕ್ಷೇತ್ರಕ್ಕೆ ತೆರಳುವ ಈ ಸಾಂಪ್ರದಾಯಿಕ ಮಾರ್ಗದ ಸುರಕ್ಷತೆ ಮತ್ತು ವ್ಯವಸ್ಥೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಕೆ.ಆರ್.ಎಸ್ ಜಲಾಶಯದಿಂದ ನೀರಿನ ಪ್ರಮಾಣ ಕಡಿಮೆ ಇರುವ ಹಿನ್ನೆಲೆಯಲ್ಲಿ, ಕಾವೇರಿ ನದಿಯನ್ನು ದಾಟುವ ಸ್ಥಳದಲ್ಲಿ ಭಕ್ತರ ಸುರಕ್ಷತೆಗೆ ಹೆಚ್ಚುವರಿ ಸಿಬ್ಬಂದಿ ನಿಯೋಜನೆ ಮಾಡುವ ಸಂಬಂಧ ಸೂಚಿಸಲಾಯಿತು. ಅರಣ್ಯ ಪ್ರದೇಶದಲ್ಲಿ ಪಾದಯಾತ್ರೆ ಮಾಡುವ ಭಕ್ತರಿಗಾಗಿ ಅರಣ್ಯ ಇಲಾಖೆ ಹೆಚ್ಚಿನ ಗಸ್ತು ತಂಡ ನಿಯೋಜಿಸಲು ಸೂಚನೆ ನೀಡಿದರು.

ಗ್ರಾಮ ಪಂಚಾಯಿತಿ ವತಿಯಿಂದ ಶುದ್ಧ ಕುಡಿಯುವ ನೀರು, ಬೆಳಕು ಮತ್ತು ಮೂಲ ಸೌಲಭ್ಯಗಳ ವ್ಯವಸ್ಥೆಯನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಎಸ್‌ಟಿಆರ್‌ಎಫ್ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗಳನ್ನು ಮುಂಜಾಗ್ರತ ಕ್ರಮವಾಗಿ ನಿಯೋಜಿಸುವ ಸಂಬಂಧ ತಿಳಿಸಿದರು. ಪಾದಯಾತ್ರಿಕರು ಬೆಳಕು ಇರುವ ಸಮಯದಲ್ಲಷ್ಟೇ ಅರಣ್ಯ ಪ್ರದೇಶದಲ್ಲಿ ಸಂಚರಿಸಲು ವಿನಂತಿ ಮಾಡಲಾಗಿದೆ. ಪಾದಯಾತ್ರೆಯ ಮಾರ್ಗದಲ್ಲಿ ಆರೋಗ್ಯ ಇಲಾಖೆಯ ತುರ್ತು ಚಿಕಿತ್ಸಾ ಕೇಂದ್ರಗಳು, ವೈದ್ಯರು ಹಾಗೂ ಸಿಬ್ಬಂದಿಗಳ ನಿಯೋಜನೆ ಮಾಡಲು ಸೂಚಿಸಿದರು. ನಿರೀಕ್ಷೆಗೂ ಮೀರಿ ಭಕ್ತರು ಹೆಚ್ಚು ಸಂಖ್ಯೆಯಲ್ಲಿ ಆಗಮಿಸುವ ಸಾಧ್ಯತೆ ಇದೆ. ಪಾದಯಾತ್ರಿಕರ ಆಚಾರ?ವಿಚಾರಗಳಿಗೆ ಧಕ್ಕೆಯಾಗದಂತೆ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಭಕ್ತಾದಿಗಳು ಕೂಡ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗೂ ಅರಣ್ಯ ಇಲಾಖೆಗೆ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಕೊಳ್ಳೇಗಾಲ ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್, ಸುರೇಂದ್ರ, ಪ್ರಾಧಿಕಾರದ ಕಾರ್ಯದರ್ಶಿ ರಘು, ತಹಸೀಲ್ದಾರ್ ಚೈತ್ರ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಜಾನುವಾರುಗಳ ಅಸ್ವಾಭಾವಿಕ ಮರಣ ಹಿನ್ನೆಲೆ

## ಮುನ್ನೆಚ್ಚರಿಕೆ ಕ್ರಮಕ್ಕಾಗಿ ಅಧಿಕಾರಿಗಳ ಸಮಿತಿ ರಚಿಸಿ ಜಿಲ್ಲಾಧಿಕಾರಿ ಆದೇಶ

ಚಾಮರಾಜನಗರ, ಹನೂರು ತಾಲ್ಲೂಕಿನ ಶೆಟ್ಟಹಳ್ಳಿ ಹಾಗೂ ಪಳನೀಮೇಡು ಗ್ರಾಮಗಳಲ್ಲಿ ಜಾನುವಾರುಗಳು ಅಸ್ವಾಭಾವಿಕವಾಗಿ ಮರಣ ಹೊಂದಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಈ ರೀತಿಯ ದುರ್ಘಟನೆಗಳು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿ ಜಿಲ್ಲಾಧಿಕಾರಿ ಶ್ರೀರೂಪ ಆದೇಶಿಸಿದ್ದಾರೆ.

ಕೊಳ್ಳೇಗಾಲ ಉಪವಿಭಾಗಾಧಿಕಾರಿ ಅವರು ಸಮಿತಿಯ ಅಧ್ಯಕ್ಷರಾಗಿದ್ದು, ಚಾಮರಾಜನಗರ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕರು, ಕೊಳ್ಳೇಗಾಲ, ಚಾಮರಾಜನಗರ ಆರಕ್ಷಕ ಉಪ ಅಧೀಕ್ಷಕರು, ಜಿಲ್ಲೆಯ ಎಲ್ಲಾ ತಹಶೀಲ್ದಾರರು, ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಾಯಕ ನಿರ್ದೇಶಕರು ಸಮಿತಿಯ ಸದಸ್ಯರಾಗಿರುತ್ತಾರೆ. ಜಿಲ್ಲೆಯ ಎಲ್ಲಾ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಸಮಿತಿಯು ಜಿಲ್ಲೆಯಲ್ಲಿನ ಗ್ರಾಮಗಳಲ್ಲಿ ಜಾನುವಾರುಗಳು ಅಸ್ವಾಭಾವಿಕವಾಗಿ ಮರಣ ಹೊಂದಿರುವ ಬಗ್ಗೆ ವರದಿಯಾದಲ್ಲಿ ತಕ್ಷಣವೇ ತುರ್ತು ಅಗತ್ಯ ಕ್ರಮಗಳನ್ನು ಕೈಗೊಂಡು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಬೇಕು. ಈ ರೀತಿಯಲ್ಲಿ ಮೃತಪಟ್ಟ ಜಾನುವಾರುಗಳ ಮರಣೋತ್ತರ ಪರೀಕ್ಷಾ ವರದಿಯು ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬರುವವರೆಗೆ ಹಾಲಿ ಮೃತಪಟ್ಟಿರುವ ಗ್ರಾಮಗಳಲ್ಲಿನ ಜಾನುವಾರುಗಳ ಚಲನ ವಲನಗಳನ್ನು ನಿಬರ್ಂಧಿಸಲು ಕ್ರಮವಹಿಸಬೇಕು. ಜಿಲ್ಲೆಯ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ರಚಿಸಲಾಗಿರುವ ಸಮಿತಿಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಸ್ಥಳದಲ್ಲಿದ್ದು ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

## 12ರಂದು ವಿದ್ಯುತ್ ವ್ಯತ್ಯಯ

ರಾಮನಗರ: 220/66/11 ಕೆವಿ ಚನ್ನಪಟ್ಟಣ ಸ್ವೀಕರಣ ಕೇಂದ್ರದ ಮಾರ್ಗದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದೆ. ಚನ್ನಪಟ್ಟಣ ನಗರ, ಮಹದೇಶ್ವರನಗರ, ಅಂಬೇಡ್ಕರ್‌ನಗರ, ಕೆ.ಎಚ್.ಬಿ, ಟಿಪ್ಪುನಗರ, ಅಪ್ಪಗೆರೆ, ಮಂಗಳವಾರಪೇಟೆ, ಚಿಕ್ಕಮಳ್ಳೂರು, ಬ್ರಹ್ಮಣೀಪುರ, ಹೊಂಗನೂರು, ಕೂಡ್ಲೂರು, ಎಸ್.ಎಸ್.ಮಿಲ್, ಮುದುಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಫೆ.12 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂನ ರಾಮನಗರ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಫ್‌ಸಿಸಿ ತ್ರಿ–ಸರಣಿ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಫೆ. 10 (ಆರ್‌ಕೆ)– ಮೈಸೂರಿನ ಬೆಮೆಲ್ ವಸತಿ ಮಂಡಳಿಯ ಕ್ರೀಡಾ ಮೈದಾನದಲ್ಲಿ ಭಾನುವಾರ ಎಫ್‌ಸಿಸಿ ಕ್ರಿಕೆಟ್ ಸಮಿತಿ ವತಿಯಿಂದ ತ್ರಿ–ಸರಣಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ಎಫ್‌ಸಿಸಿ ಕ್ರಿಕೆಟ್, ಬೆಮೆಲ್ ಕ್ರಿಕೆಟ್ ಮತ್ತು ತ್ರಿವೇಣಿ ಇಂಜಿನಿಯರಿಂಗ್ ಕ್ರಿಕೆಟ್ ತಂಡಗಳು ಪಂದ್ಯಾವಳಿಯಲ್ಲಿ ಭಾಹವಹಿಸಿದ್ದವು. ಅದರಲ್ಲಿ ಬೆಮೆಲ್ ತಂಡ ವಿಜೇತರಾಗಿ ಹೊರ ಬಂದು, ತ್ರಿವೇಣಿ ತಂಡ ರನ್ನರ್ ಆಫ್ ಹಾಗೂ ಎಫ್‌ಸಿಸಿ ತಂಡವು ಎರಡನೇ ರನ್ನರ್ ಆಫ್ ಸ್ಥಾನ ಪಡೆದುಕೊಂಡವು.

ಮುಖ್ಯ ಅತಿಥಿಗಳಾಗಿ ಎಎಎಲ್ ಮೈಸೂರು ಡೆಪ್ಯೂಟಿ ಜನರಲ್ ಮ್ಯಾನೇಜರ್ ಸತ್ಯಪ್ರಕಾಶ್, ಬಿಇಎಂಎಲ್‌ಮ ಸಾರ್ವಜನಿಕ ಸಂಪರ್ಕ ಅಧಿಕಾರಿ ಅನಿಲ್ ಕುಮಾರ್, ಇಂಜಿನ್ ಹೆಚ್‌ಆರ್ ಮುಖ್ಯಸ್ಥ ಸರೋಜ್ ಕುಮಾರ್, ಬೆಮೆಲ್ ಕ್ರೀಡಾ ಸಮಿತಿಯ ಗಿರೀಶ್, ತ್ರಿವೇಣಿ ಪಿಟಿಬಿ ಡೆಪ್ಯೂಟಿ ಜನರಲ್ ಮ್ಯಾನೇಜರ್ ಕೇಶವ ಮೂರ್ತಿ, ಯೂನಿಯನ್ ಅಧ್ಯಕ್ಷ ಸುಮಂತ್, ಪ್ರೊಡಕ್ಷನ್ ಮ್ಯಾನೇಜರ್ ಪ್ರವೀಣ್, ಅಮನ್ ಕುಮಾರ್, ಲಿಂಗರಾಜು, ಅರುಣ್ ಕುಮಾರ್, ಮಧು, ಅಶೋಕ್, ರವಿಕುಮಾರ್ ಹಾಗೂ ಇತರರು ಪಾಲ್ಗೊಂಡಿದ್ದರು.

# ಸುತ್ತುಗೋಡೆ ನಿರ್ಮಾಣಕ್ಕೆ ಗುದ್ದಲಿಪೂಜೆ



ಚಾಮರಾಜನಗರ, ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಆವರಣದಲ್ಲಿ 14 ಲಕ್ಷ ರೂ ವೆಚ್ಚದಲ್ಲಿ ಸುತ್ತುಗೋಡೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಇದೇವೇಳೆ ಅವರು ಮಾತನಾಡಿ, ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿಯ ಆವರಣಕ್ಕೆ ಸುತ್ತುಗೋಡೆ ಅವಶ್ಯಕವಿದ್ದು, ಗುತ್ತಿಗೆದಾರರು ಕಾಮಗಾರಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಡ್ರೋನ್ ಸರ್ವೆ ಕಾರ್ಯವನ್ನು ಶಾಸಕರು ವೀಕ್ಷಿಸಿದರು. ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಚುಡಾ ಸದಸ್ಯರಾದ ರಾಜು, ಪುಟ್ಟಸ್ವಾಮಿ, ರಾಜೇಂದ್ರ (ದ್ವಾರ್ಕಿ), ಆಯುಕ್ತೆ ಸೀಮಾ, ಸಹಾಯಕ ನಿರ್ದೇಶಕ ರಿತೇಶ್, ಗುತ್ತಿಗೆದಾರ ಪ್ರಕಾಶ್, ಕಚೇರಿಯ ಸಿಬ್ಬಂದಿವರ್ಗ ಹಾಜರಿದ್ದರು.

### 10ನೇ ವಾರ್ಡ್‌ಗೆ ಪೌರಾಯುಕ್ತ ಪರಶುರಾಮಛಲವಾದಿ ಭೇಟಿ

## ಸಮಸ್ಯೆ ಬಗೆಹರಿಸುವ ಭರವಸೆ

ಚಾಮರಾಜನಗರ: ನಗರದ 10ನೇ ವಾರ್ಡ್‌ನ ಬುದ್ಧನಗರಕ್ಕೆ ನಗರಸಭಾ ಪೌರಾಯುಕ್ತ ಪರಶುರಾಮ ಛಲವಾದಿ ಭೇಟಿ ನೀಡಿ ಪರಿಶೀಲಿಸಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ವಾರ್ಡ್‌ನ ಯುವ ಮುಖಂಡ ಭಾನುಪ್ರಕಾಶ್ ವಾರ್ಡ್‌ನಲ್ಲಿ ಕಸವಿಲೇವಾರಿ ಆಗುತ್ತಿಲ್ಲ, ಚರಂಡಿ ಸ್ವಚ್ಚತೆಗೊಳಿಸಿಲ್ಲ. ಒಳಚರಂಡಿ ಮುಚ್ಚಲು ಹಾಕಿಲ್ಲ, ಕುಡಿಯುವ ನೀರಿನ ಸಮಸ್ಯೆ ಇದೆ. ಕೂಡಲೇ ಸರಿಪಡಿಸಿಕೊಡುವಂತೆ ವಾರ್ಡ್‌ಗೆ ಭೇಟಿ ನೀಡಿದ ಪೌರಾಯುಕ್ತರ ಗಮನಕ್ಕೆ ತಂದರು. ವಾರ್ಡ್‌ನ ಪರಿಶೀಲಿಸಿ, ನಿವಾಸಿಗಳಿಂದ ಆಹವಾಲು ಸ್ವೀಕರಿಸಿದ ಪೌರಾಯುಕ್ತ ಪರಶುರಾಮ ಛಲವಾದಿ ಮಾತನಾಡಿ, ವಾರ್ಡ್ ನಿವಾಸಿಗಳ ದೂರಿನ ಮೇರಿಗೆ ವಾರ್ಡ್ ಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದೇನೆ ಕಸದ ವಿವೇವಾರಿ ಆಗದಿರುವುದು, ಚರಂಡಿ ಸ್ವಚ್ಚತೆ ಮಾಡಿಲ್ಲ. ಒಳಚರಂಡಿ ಮುಚ್ಚಲು ಹಾಕಿಲ್ಲದಿರುವುದನ್ನು ನಾನು ಕಣ್ಣಾರೆ ವೀಕ್ಷಣೆ ಮಾಡಿದ್ದೇನೆ. ನಿವಾಸಿಗಳು ಕೂಡ ತಮ್ಮ ಗಮನಕ್ಕೆ ತಂದಿದ್ದಾರೆ. ಆದಷ್ಟು ಬೇಗ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಹೇಳಿದರು.



### ಬಂಡೀಪುರದಲ್ಲಿ ಆರಂಭ

# ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ಶೃಂಗಸಭೆ ಕಾರ್ಯಾಗಾರ

ಚಾಮರಾಜನಗರ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಪ್ರಸಿದ್ಧ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೇಲುಕಾಮನಹಳ್ಳಿಯಲ್ಲಿ ಅಂತರಾಷ್ಟ್ರೀಯ ಬಿಗ್ ಕ್ಯಾಟ್ಸ್ ಅಲಯನ್ಸ್ ಶೃಂಗಸಭೆಯಲ್ಲಿಂದು ಕಾರ್ಯಾಗಾರ ಹಾಗೂ ಕ್ಷೇತ್ರ ಭೇಟಿ ಕಾರ್ಯಕ್ರಮ ಆರಂಭಗೊಂಡಿತು.

ಭಾರತದಲ್ಲಿ ಮೊದಲ ಬಾರಿಗೆ ಬಿಗ್ ಕ್ಯಾಟ್ ಮೈತ್ರಿ ಶೃಂಗಸಭೆ ರಾಜ್ಯದ ಬಂಡೀಪುರ ಹಾಗೂ ನಾಗರಹೊಳೆಯಲ್ಲಿ ನಡೆಯುತ್ತಿದ್ದು, ಬಂಡೀಪುರದಲ್ಲಿಂದು ವನ್ಯಜೀವಿ ಮತ್ತು ಸಂರಕ್ಷಣೆ ಕುರಿತ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರ ಹಾಗೂ ಕ್ಷೇತ್ರ ಭೇಟಿಗಾಗಿ 23 ದೇಶಗಳ 39 ಪ್ರತಿನಿಧಿಗಳು ಪಾಲ್ಗೊಂಡರು.

ಬಂಡೀಪುರ ಹುಲಿ ಯೋಜನೆ ಕೇಂದ್ರ ಸ್ಥಾನವಾದ ಮೇಲುಕಾಮನಹಳ್ಳಿಯ ಸಭಾ ಭವನದಲ್ಲಿ ಆಯೋಜಿತವಾಗಿದ್ದ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅಂತರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ನ ನಿರ್ದೇಶಕರಾದ ಡಾ. ಎಸ್.ಪಿ. ಯಾದವ್ ಅವರು ದೊಡ್ಡ ಬೆಕ್ಕುಗಳ ಸಂತತಿ ವೃದ್ಧಿ



ಮತ್ತು ಸಂರಕ್ಷಣೆ ಮಾಡುವ ನಾಯಕತ್ವವನ್ನು ಭಾರತ ವಹಿಸಿಕೊಂಡಿದೆ. ಹುಲಿ, ಸಿಂಹ, ಚಿರತೆ, ಹಿಮ ಚಿರತೆ, ಜಾಗ್ವಾರ್, ಪೂಮ, ಚೀತಾದಂತಹ ಏಳು ದೊಡ್ಡ ಬೆಕ್ಕಿನ ರಕ್ಷಣೆ ಮಾಡುವ ನಿರ್ಣಯಕ್ಕೆ 24 ದೇಶಗಳು ಸಹಿ ಮಾಡಿವೆ ಎಂದು ತಿಳಿಸಿದರು.

ದೊಡ್ಡ ಬೆಕ್ಕು ಸಂತತಿ ಉಳಿವಿಗೆ ಭಾರತ ನಾಯಕತ್ವ ವಹಿಸಿಕೊಳ್ಳಲು ಪ್ರಮುಖ ಕಾರಣವೆಂದರೆ ಪ್ರಪಂಚದ ಶೇ. 70ರಷ್ಟು ಹುಲಿಗಳು ನಮ್ಮಲ್ಲಿವೆ. ಶೇ. 35ರಷ್ಟು ಚಿರತೆಗಳಿವೆ. ಭಾರತ ವೈವಿಧ್ಯತೆಯಲ್ಲಿ ಸಮೃದ್ಧತೆ ಹೊಂದಿದ ರಾಷ್ಟ್ರವಾಗಿದ್ದು, ಏಳು ದೊಡ್ಡ ಬೆಕ್ಕಿನ ಪ್ರಭೇದದಲ್ಲಿ ಐದು ಪ್ರಭೇದಗಳು ಭಾರತದಲ್ಲಿವೆ ಎಂದರು. ಭಾರತ ಸರ್ಕಾರ ಹುಲಿ ಸೇರಿದಂತೆ ದೊಡ್ಡ ಬೆಕ್ಕುಗಳ ಪ್ರಭೇದ ಸಂರಕ್ಷಣೆಗೆ ಉತ್ತಮ ಯೋಜನೆ ಹಾಕಿಕೊಂಡು ಶ್ರಮಿಸುತ್ತಿದೆ ಎಂದರು.

ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ಮತ್ತು ಕರ್ನಾಟಕದ ಚೀಫ್ ವೈಲ್ಡ್ ಲೈಫ್ ವಾರ್ಡನ್) ಸುಭಾಷ್ ಮಾಲ್ಖೇಡೆ, ಪ್ರಧಾನ ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿ ಬಿಶ್ವಜಿತ್ ಮಿಶ್ರಾ, ಎನ್.ಟಿ.ಸಿಎ ಡಿಐಜಿ ವೈಭವ್ ಮಾಥುರ್, ಎಪಿಪಿಸಿಎಫ್ ಮನೋರಂಜನ್, ಮೈಸೂರು ಹುಲಿ ಯೋಜನೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಪಿ.ರಮೇಶ್‌ಕುಮಾರ್, ಚಾಮರಾಜನಗರ ವಲಯದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪ್ರಭಾಕರನ್ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಅಂತರಾಷ್ಟ್ರೀಯ ಬಿಗ್ ಕ್ಯಾಟ್ ಶೃಂಗಸಭೆ ಆಯೋಜನೆ ಸಂಬಂಧ ಮಾಹಿತಿ ನೀಡಿದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಪ್ರಭಾಕರನ್ ಅವರು ಶೃಂಗಸಭೆಯಲ್ಲಿ ಕಾರ್ಯಾಗಾರ ಹಾಗೂ ಕ್ಷೇತ್ರ ಭೇಟಿಯಂತಹ ಕಾರ್ಯಕ್ರಮಗಳು ಇವೆ. ದೊಡ್ಡ ಬೆಕ್ಕು ಜಾತಿಗೆ ಸೇರಿದ ಪ್ರಾಣಿಗಳ ಸಂರಕ್ಷಣೆ, ಮಾನವ ಸಂಘರ್ಷ ಸಮಸ್ಯೆಗಳಿಗೆ ಪರಿಹಾರ ಇನ್ನಿತರ ಮಹತ್ವದ ವಿಷಯಗಳ ಕುರಿತು ವಿವಿಧ ದೇಶಗಳಿಂದ ಆಗಮಿಸಿರುವ ಪ್ರತಿನಿಧಿಗಳೊಂದಿಗೆ ಜ್ಞಾನ ವಿನಿಮಯ ನಡೆಯಲಿದೆ. ಹುಲಿ ಸಂರಕ್ಷಣೆಗೆ ಕೈಗೊಂಡ ಪರಿಣಾಮಕಾರಿ ಕ್ರಮಗಳು ಹೊರ ದೇಶದವರು ಅಳವಡಿಸಿಕೊಂಡಿರುವ ಕ್ರಮಗಳ ಕುರಿತ ಮಾಹಿತಿ ವಿನಿಮಯ ಸಹ ನಡೆಯಲಿದೆ ಎಂದು ತಿಳಿಸಿದರು.

# ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿಸುವಾಗ ಎಚ್ಚರವಹಿಸಿ



**ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಅಧ್ಯಕ್ಷ- ಹೆಚ್.ಎಸ್.ಶ್ರೀನಿಧಿ ಹೇಳಿಕೆ**

ಚಾಮರಾಜನಗರ,ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿಸುವಾಗ ಎಚ್ಚರವಹಿಸಬೇಕು. ವಸ್ತುಗಳ ಮೇಲಿನ ದಿನಾಂಕವನ್ನು ಪರಿಶೀಲಿಸಬೇಕು. ಖರೀದಿಸುವ ವಸ್ತುವು ನಿಗಧಿತ ದಿನಾಂಕವನ್ನು ಮೀರಿದ್ದರೆ ಆ ವಸ್ತುವು ತನ್ನ ಗುಣವನ್ನು ಕಳೆದುಕೊಂಡಿರುತ್ತದೆ ಎಂದು ಚಾಮರಾಜನಗರ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಹೆಚ್.ಎಸ್. ಶ್ರೀನಿಧಿ ತಿಳಿಸಿದರು.

ನಗರದ ಶ್ರೀಗಂಧ ಮಹಿಳಾ ಅಭಿವೃದ್ದಿ ಸಂಘ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ, ಕಾನೂನು ಮಾಪನ ಶಾಸ್ತ್ರ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಸರ್ಕಾರಿ ಪ್ರೌಢಶಾಲೆ ದೊಡ್ಡರಾಯಪೇಟೆ ಇವರ ಸಹಯೋಗದಲ್ಲಿ ತಾಲ್ಲೂಕಿನ ದೊಡ್ಡರಾಯಪೇಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಮಂಗಳವಾರ ನಡೆದ "ಗ್ರಾಹಕ ಹಕ್ಕುಗಳು ಮತ್ತು ಜಾಗೃತಿ ಕುರಿತು" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನು ಜನಿಸಿದ ದಿನದಿಂದ ಗ್ರಾಹಕನೆಂದು ತಿಳಿದಿರಬೇಕು. ಯಾವುದೇ ವಸ್ತುಗಳನ್ನು ಅಂಗಡಿಗಳಲ್ಲಿ ಕೊಂಡುಕೊಳ್ಳುವಾಗ ಅಳತೆ ನೋಡಿ ಕೊಳ್ಳಬೇಕು. ಜೊತೆಗೆ ರಶೀತಿ ಪಡೆಯಬೇಕು. ಎಂದು ಹೇಳಿದರು. ಭಾರತ ಸರ್ಕಾರವು 1986 ರಂದು ಒಂದು ಕಾನೂನು ಹೊರಡಿಸಿ ನಮ್ಮ ದೇಶದ ಗ್ರಾಹಕರಿಗೆ ವ್ಯಾಪಾರ ಮಾಡುವಾಗ ಅವಗಾಗುವ ಅನೇಕ , ಮೋಸ ವಂಚನೆ ಹಾಗೂ ಸೇವೆಗಳಲ್ಲಿ ನ್ಯೂನ್ಯತೆ ಗಳನ್ನು ಸರಿಪಡಿಸುವ ಈ ನಿಟ್ಟಿನಲ್ಲಿ ಗ್ರಾಹಕರಿಗೆ ಶೀಘ್ರ ನ್ಯಾಯ ಒದಗಿಸುವ ದೃಷ್ಟಿಯಿಂದ ಗ್ರಾಹಕರ ಸಂರಕ್ಷಣಾ ಕಾಯ್ದೆ 1986ನ್ನು ಜಾರಿಗೆ ತಂದಿದೆ ಮೋಸದಿಂದ ಗ್ರಾಹಕರ ರಕ್ಷಣೆಗಾಗಿ ಕಾನೂನುಗಳನ್ನು ರೂಪಿಸುವ ಉದ್ದೇಶದಿಂದ ಗ್ರಾಹಕ ಸಂರಕ್ಷಣೆ ಕಾನೂನು 2019 ತಂದಿದ್ದು ಈ ಕಾಯ್ದೆಯು ದಿನಾಂಕ 24-07-2020ರಂದು ಜಾರಿಗೆ ಬಂದಿರುತ್ತದೆ ಇಂತಹ ಮಾಹಿತಿಗಳನ್ನು ವಿದ್ಯಾರ್ಥಿಗಳು ತಿಳಿದಿರಬೇಕು ಎಂದು ಹೇಳಿದರು. ಜಿಲ್ಲಾ ಗ್ರಾಹಕ ವ್ಯಾಜ್ಯ ಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಭಾರತಿ ಮಾತನಾಡಿ ವಿದ್ಯಾರ್ಥಿಗಳು ಶಾಲೆಯ ಮುಂಭಾಗದಲ್ಲಿ ಮಾರಾಟ ಮಾಡುವ ತಿಂಡಿಗಳನ್ನು ತಿನ್ನುವ ಮೊದಲು ಅದು ಉತ್ತಮ ಗುಣಮಟ್ಟದ ಪದಾರ್ಥವ ಎಂದು ತಿಳಿಯಬೇಕು. ನಂತರ ಪ್ಯಾಕಿನ ಮೇಲೆ ದಿನಾಂಕವನ್ನು ನೋಡಬೇಕು ನಂತರ ಪಡೆಯಬೇಕು. ಯಾವುದೇ ವಸ್ತುಗಳನ್ನು ಕೊಳ್ಳಬೇಕಾದರೆ ರಶೀತಿಯನ್ನು ಪಡೆದರೆ ಮಾತ್ರ ದಾವೆ ಹೂಡಲು ಸಾಧ್ಯವಾಗುತ್ತದೆ ಎಂದರು.


ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಸಂಯೋಜಕರಾದ ಶಿವರಾಜಮ್ಮ, ಮಾತನಾಡಿ ಶಾಲೆಯ ವಿದ್ಯಾರ್ಥಿಗಳಲ್ಲಿ ಹರಿವು ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳು ಸಹ ಗ್ರಾಹಕರೇ ಅಂಗಡಿಗಳಲ್ಲಿ ಖರೀದಿಸುವ ವಸ್ತುಗಳಿಗೆ ರಶೀತಿಯನ್ನು ಪಡೆದರೆ ಉತ್ತಮ ಎಂದು ಹೇಳಿದರು.

ಪ್ರೌಢಶಾಲಾ ಮುಖ್ಯ ಶಿಕ್ಷಕಿ ವನಜಾಕ್ಷಿ ಎನ್.ವಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ಶ್ರೀಗಂಧ ಮಹಿಳಾ ಅಭಿವೃದ್ಧಿ ಸಂಘದ ಅಧ್ಯಕ್ಷೆ ಉಮಾ ವಹಿಸಿದ್ದರು ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ರೇಣ್ಣಣ್ಣ, ಕೆಂಪಣ್ಣ, ಜಗನ್ ಮೋಹನ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ತುಂಡಾದ ಕೆಎಸ್ಆರ್‌ಟಿಸಿ ಬಸ್ ಆಕ್ಸೆಲ್

ಗುಂಡ್ಲುಪೇಟೆ: ತ್ರಿಯಂಬಕಪುರ ಗೇಟ್ ಬಳಿ ಆಕ್ಸೆಲ್ ತುಂಡಾಗಿ ನಿಂತ ಸಾರಿಗೆ ಬಸ್ ಸಾರಿಗೆ ಬಸ್ ಆಕ್ಸೆಲ್ ತುಂಡಾಗಿ ಅದೃಷ್ಟವಶಾತ್ ಅನಾಹುತ ತಪ್ಪಿದ ಘಟನೆ ಗುಂಡ್ಲುಪೇಟೆ ತಾಲೂಕಿನ ತ್ರಿಯಂಬಕಪುರ ಗೇಟ್ ಬಳಿ ಮಂಗಳವಾರ ಬೆಳಗ್ಗೆ ನಡೆದಿದೆ.

ಚಾಮರಾಜನಗರ ಕಡೆಯಿಂದ ಗುಂಡ್ಲುಪೇಟೆ ಕಡೆಗೆ ತೆರಳುತ್ತಿದ್ದ ಕೆಎಸ್ಆರ್ ಟಿಸಿ ಬಸ್ ನ ಆಕ್ಸೆಲ್ ಏಕಾಏಕಿ ತುಂಡಾಗಿ ಕೆಟ್ಟು ನಿಂತಿದ್ದರಿಂದ ಶಾಲಾ- ಕಾಲೇಜು ವಿದ್ಯಾರ್ಥಿಗಳು, ಕಚೇರಿ ಕೆಲಸಕ್ಕೆ ತೆರಳುವವರು ಪರದಾಡಿದರು. ಬಸ್ ವೇಗದ ಚಾಲನೆಯಲ್ಲಿಲ್ಲದ ಪರಿಣಾಮ ತಪ್ಪಿದ ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಸೂಕ್ತ ನಿರ್ವಹಣೆ ಇಲ್ಲದ ಬಸ್ ಗಳನ್ನು ಕಾರ್ಯಾಚರಣೆ ನಡೆಸುತ್ತಿರುವುದಕ್ಕೆ ಪ್ರಯಾಣಿಕರ ಆಕ್ರೋಶ ಹೊರಹಾಕಿದರು.



## ಸುನೀಲ್ ಕುಮಾರ್ ವಿರುದ್ಧ ಸುಳ್ಳು ಮೊಕ್ಕದ್ದಮೆ ದಾಖಲು: ಲಕ್ಷ್ಮಣ್



ಮೈಸೂರು: ಎಚ್.ಡಿ. ಕೋಟೆ ಕಸಹಾ ಹೋಬಳಿಯ ಸರ್ವೆ ನಂಬರ್ 80/2 ರಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಸುನಿಲ್ ಕುಮಾರ್ ಎಂಬುವವರ 5 ಎಕರೆ ಜಮೀನಿಗೆ ನುಗ್ಗಿದ ಕೆಲವರು ತೀವ್ರ ಹಲ್ಲೆ ನಡೆಸಿ, ತಾವೇ ತಂದಿದ್ದ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ವಿರೋಪಗೊಳಿಸಿ, ಸುನಿಲ್ ಕುಮಾರ್ ವಿರುದ್ಧ ಅಟ್ರಾಸಿಟಿ ಕಾಯ್ದೆ ಅಡಿಯಲ್ಲಿ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದು ಎಚ್.ಡಿ. ಕೋಟೆ ಜಿಪಂ ಮಾಜಿ ಸದಸ್ಯ ಎಚ್.ಸಿ.ಲಕ್ಷ್ಮಣ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜಮೀನಿಗೆ ಸಂಬಂಧಿಸಿದಂತೆ ಸುನಿಲ್ ಕುಮಾರ್ ಹಾಗೂ ಮೋಸೆಸ್ ಎಂಬುವವರ ನಡುವೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಬಾಕಿ ಇದೆ. ಆದರೂ ಸಹಾ ಒಂದು ಸಮುದಾಯಕ್ಕೆ ಸೇರಿದ ಕಟ್ಟೆ ಮನುಗನಹಳ್ಳಿಯ ರವಿಕುಮಾರ್, ಜಯಣ್ಣ, ಪ್ರವೀಣ್, ಮಧು ಮತ್ತು ಕಿರಣ್, ಎಂಬುವವರು ಇದೇ ತಿಂಗಳ 4 ರಂದು ಜಮೀನಿಗೆ ಏಕಾಏಕಿ ನುಗ್ಗಿ ಸುನೀಲ್ ಕುಮಾರ್ ಅವರ ಮೇಲೆ ತೀವ್ರ ಹಲ್ಲೆ ನಡೆಸಿ, ಅಂಬೇಡ್ಕರ್ ಭಾವಚಿತ್ರ ತಾವೇ ವಿರೂಪಗೊಳಿಸಿ, ದೂರು ನೀಡಿದ್ದಾರೆ ಎಂದು ದೂರಿದರು. ಇದೇ ವೇಳೆ ಕೆಲ ದಲಿತ ಮುಖಂಡರು ಮಾತನಾಡಿ, ಕೆಲವರು ಅಟ್ರಾಸಿಟಿ ಕೇಸ್ ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ದಲಿತ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತಿದೆ. ಆರೋಪಿಗಳು ತಾವೇ ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ್ದನ್ನು ತಾವೆಲ್ಲ ನೋಡಿದ್ದೇವೆ. ಹೀಗಾಗಿ ಸುನಿಲ್ ಕುಮಾರ್ ವಿರುದ್ಧ ದಾಖಲಿಸಿಕೊಂಡಿರುವ ದೂರು ರದ್ದು ಪಡಿಸಬೇಕು, ಆರೋಪಿಗಳ ವಿರುದ್ಧ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ್ದಕ್ಕಾಗಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಡಿಎಸ್‌ಎಸ್‌ನ ಸೋಮಣ್ಣ, ಇನ್ನಿತರ ಮುಖಂಡರಾದ ಶ್ರೀಧರ್, ಪುಟ್ಟರಾಜು, ಜವರಯ್ಯ, ಕೃಷ್ಣ ಹಾಗೂ ಲೋಕೇಶ್ ಹಾಜರಿದ್ದರು.

## ಅಹಿಂದ ವರ್ಗಕ್ಕೆ 300 ಕೋಟಿ ಆಗ್ರಹ

ಮೈಸೂರು: ಫೆ.10ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಅಹಿಂದ ವರ್ಗಕ್ಕೆ ಹೆಚ್ಚಿನ ಆದ್ಯತೆ ನೀಡಿ, ಅಹಿಂದ ವರ್ಗದ ಎಲ್ಲಾ ನಿಗಮ ಮಂಡಳಿಗೆ ಕನಿಷ್ಠ 300 ಕೋಟಿ ಅನುದಾನ ನೀಡುವಂತೆ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟ ಮನವಿ ಮಾಡಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಗೌರವಾಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಅಹಿಂದ ವರ್ಗದ ಜನರಿಂದ ಅಧಿಕಾರಕ್ಕೆ ಬಂದಿದ್ದು, ಈ ಹಿನ್ನೆಲೆಯಲ್ಲಿ ಅಹಿಂದ ವರ್ಗಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಈ ಸಮುದಾಯಗಳು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆರ್ಥಿಕ ಸೌಲಭ್ಯವನ್ನು ನೀಡುವ ಮೂಲಕ ಸಬಲೀಕರಣ ಮಾಡಬೇಕಿರುವುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ ಹಿಂದುಳಿದ ಎಲ್ಲಾ ನಿಗಮ ಮಂಡಳಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗದ ನಿಗಮ ಮಂಡಳಿಗೆ ಹೆಚ್ಚಿನ ಅನುದಾನ ಮೀಸಲಿಡಬೇಕೆಂದು ಆಗ್ರಹಿಸಿದರು. ಪ್ರಮುಖವಾಗಿ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತ ನಿಗಮಗಳಿಂದ ನೀಡುವ ನೇರ ಸಾಲ ಯೋಜನೆಯನ್ನು ಗರಿಷ್ಠ 2 ಲಕ್ಷಕ್ಕೆ ಹೆಚ್ಚಳ ಮಾಡಬೇಕು, ಮಹಿಳಾ ಸಬಲೀಕರಣಕ್ಕೆ ಅನುಕೂಲವಾಗುವಂತೆ ಪತ್ಯೇಕ ಅನುದಾನ ಘೋಷಿಸಬೇಕು, ಯುವಕ, ಯುವತಿಯರು ಸ್ವಯಂ ಉದ್ಯೋಗದಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಶೇ.75ರಷ್ಟು ಸಹಾಯ ಧನದಡಿ ನಿವೇಶನ ಹಾಗೂ ಕೈಗಾರಿಕೆ ಸ್ಥಾಪಿಸಲು ನಿಗಮದಿಂದ ಸಾಲ ನೀಡುವ ಯೋಜನೆ ರೂಪಸಬೇಕು. ಉನ್ನತ ಶಿಕ್ಷಣಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ ಅನುದಾನ ಘೋಷಿಸಬೇಕುಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಬಿ.ಜಿ.ಕೇಶವ, ಡಾ.ಶಾಂತರಾಜೇ ಅರಸ್, ಗೀತಾ, ಮೀನಾಕ್ಷಿ, ಸಿದ್ದರಾಜು, ಶ್ರೀಕಾಂತ ಯಾದವ್, ರವಿಕುಮಾರ್, ಮಹದೇವಪ್ಪ, ಮಹೇಶ್, ಲಕ್ಷ್ಮೀ, ಪವಿತ್ರ ಉಪಸ್ಥಿತರಿದ್ದರು.



# ಗ್ರಾಪಂಗಳಲ್ಲಿ ವಿಶೇಷ ತೆರಿಗೆ ಅಭಿಯಾನ

## ಹೆಚ್ಚಿನ ಪ್ರಗತಿ ಸಾಧಿಸಲು ಜಿ.ಪಂ. ಸಿ.ಇ.ಒ ಮೋನಾ ರೋತ್ ಸೂಚನೆ

ಚಾಮರಾಜನಗರ: ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಬುಧವಾರ ಹಾಗೂ ಶುಕ್ರವಾರಗಳಂದು ವಿಶೇಷ ತೆರಿಗೆ ವಸೂಲಾತಿ ಅಭಿಯಾನವನ್ನು ಪರಿಣಾಮ ಕಾರಿಯಾಗಿ ಆಯೋಜಿಸಲಾಗಿದ್ದು, ಪ್ರತಿದಿನ ಅಭಿಯಾನದ ಮೂಲಕ ತೆರಿಗೆ ವಸೂಲಿ ಮಾಡಿ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ 30 ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳೊಂದಿಗೆ ತೆರಿಗೆ ವಸೂಲಾತಿ ಸಂಬಂಧ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಸಾರ್ವಜನಿಕರು ಕುಡಿಯುವ ನೀರು, ಅಂಗಡಿ ಮಳಿಗೆ, ವಿದ್ಯುಚ್ಛಕ್ತಿ, ವಸತಿ ಹಾಗೂ ಸರ್ಕಾರಿ-ಸಾರ್ವಜನಿಕ ಆಸ್ತಿಗಳಿಗೆ ಸಂಬಂಧಿಸಿದಂತೆ ತೆರಿಗೆ ಪಾವತಿಸಬೇಕಾಗಿದ್ದು, ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿರುವ ಸರ್ಕಾರಿ ಆಸ್ತಿಗಳಿಗೆ ಅನುಗುಣವಾಗಿ ತೆರಿಗೆ ವಸೂಲಾತಿ ಮಾಡಬೇಕು ಎಂದರು.

ತೆರಿಗೆ ವಸೂಲಾತಿ ಅಭಿಯಾನದ ಮೂಲಕ ಪ್ರತಿನಿತ್ಯದ ಆನ್‌ಲೈನ್ ಪ್ರಗತಿಯನ್ನು ಪರಿಶೀಲನೆ ಮಾಡಲಾಗಿದ್ದು, ತೆರಿಗೆ ವಸೂಲಾತಿಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಂಡರೂ ಸಹ ಕೆಲ ಗ್ರಾಮ ಪಂಚಾಯಿತಿಗಳು ನಿಗದಿತ ಗುರಿ ಸಾಧಿಸದೇ ತೆರಿಗೆ ವಸೂಲಾತಿಯಲ್ಲಿ ಹಿನ್ನಡೆ ಅನುಭವಿಸಿವೆ. ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ಗ್ರಾಮ ಪಂಚಾಯಿತಿವಾರು ನಿಗದಿಪಡಿಸಲಾಗಿರುವ ಬೇಡಿಕೆಗನುಗುಣವಾಗಿ ಶೇ.100ರಷ್ಟು ತೆರಿಗೆ ವಸೂಲಾತಿ ಮಾಡಬೇಕು. ಈ ಸಂಬಂಧ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನೊಳಗೊಂಡಂತೆ ಪ್ರತಿ ಬುಧವಾರ ಹಾಗೂ ಶುಕ್ರವಾರಗಳಂದು ವಿಶೇಷ ತೆರಿಗೆ ವಸೂಲಾತಿ ಅಭಿಯಾನವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.



### ಶೇ.100ರಷ್ಟು ಪ್ರಗತಿ ಸಾಧಿಸಿ

**ತೆರಿಗೆ ವಸೂಲಾತಿಯಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸಿದಲ್ಲಿ ಮಾತ್ರ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲು ಅವಕಾಶವಿದ್ದು, ಹಾಗೂ ಹಲವು ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗಳಿಗೆ ವರ್ಷಾನುಗಟ್ಟಲೆ, ತಿಂಗಳುಗಳ ಕಾಲ ವೇತನ ಪಾವತಿ ಬಾಕಿ ಇರುವುದರಿಂದ ಇಂತಿಷ್ಟು ಮೊತ್ತದ ತೆರಿಗೆ ವಸೂಲಾತಿಯನ್ನು ಕಡ್ಡಾಯವಾಗಿ ವಸೂಲಿ ಮಾಡುವ ಮೂಲಕ ಯಾವುದೇ ಗ್ರಾಮ ಪಂಚಾಯಿತಿ ಸಿಬ್ಬಂದಿಯ ವೇತನವು ಬಾಕಿ ಉಳಿಯದಂತೆ ಕ್ರಮವಹಿಸುವ ಸಲುವಾಗಿ ತೆರಿಗೆ ವಸೂಲಾತಿ ಮಾಡಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.**

ಇದೇ ವೇಳೆ ಉದ್ಯೋಗ ಖಾತರಿ ಯೋಜನೆ, ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆ ಹಾಗೂ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಪರಿಶೀಲಿಸಲಾಯಿತು. ಉದ್ಯೋಗ ಖಾತರಿ ಯೋಜನೆ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಗಳಡಿ ಹಣಪಾವತಿಗೆ ಸಂಬಂಧಿಸಿದಂತೆ ಡ್ಯಾಂಗಲ್ ಬಗೆಗಿನ ತಾಂತ್ರಿಕ ಸಮಸ್ಯೆಗಳನ್ನು ಶೀಘ್ರದಲ್ಲಿ ಪರಿಹರಿಸಬೇಕು. ಅನುದಾನ ವ್ಯಪಗತವಾಗದಂತೆ ಕಾಲಕಾಲಕ್ಕೆ ಹಣಪಾವತಿಗೆ ಅಗತ್ಯ ಕ್ರಮ ವಹಿಸಬೇಕು. ಏನಾದರೂ ಸಮಸ್ಯೆಗಳಿದ್ದಲ್ಲಿ ಸಂಬಂಧಿಸಿದ ತಾಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಜಿಲ್ಲಾ ಪಂಚಾಯಿತಿಯ ಗಮನಕ್ಕೆ ತರುವಂತೆ ಜಿ.ಪಂ. ಸಿಇಒ ಅವರು ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

### ಕುಡಿಯುವ ನೀರಿಗೆ ಪರ್ಯಾಯ ವ್ಯವಸ್ಥೆ ಮಾಡಿ

**ಹನೂರು ತಾಲೂಕು ವ್ಯಾಪ್ತಿಯ ಕೌದಳ್ಳಿ, ಶೆಟ್ಟಳ್ಳಿ, ಮಾರ್ಟಳ್ಳಿ, ಕುರಟ್ಟಿ ಹೊಸೂರು, ಎಲ್ಲೇಮಾಳ, ಅಜ್ಜೀಪುರ ಹಾಗೂ ಯಳಂದೂರು ತಾಲೂಕಿನ ಮದ್ದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ತುರ್ತು ಕ್ರಮವಹಿಸಬೇಕು. ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಾಸಗಳು ಉಂಟಾದಲ್ಲಿ ಗ್ರಾಮಸ್ಥರು ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಗಳಾಗದಂತೆ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರಿನ ಸರಬರಾಜನ್ನು ಪೂರೈಸಲು ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದರು.**

## ಮಕ್ಕಳ ಪಾಲನಾ ಸಂಸ್ಥೆಗಳ ಕಡ್ಡಾಯ ನೋಂದಣಿಗೆ ಸೂಚನೆ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲಾ ವ್ಯಾಪ್ತಿಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳು ಕಡ್ಡಾಯವಾಗಿ ಬಾಲನ್ಯಾಯ ಕಾಯ್ದೆ-2015ರ ಸೆಕ್ಷನ್ 41 ರಡಿಯಲ್ಲಿ ನೋಂದಣಿಯಾಗಬೇಕು ಹಾಗೂ ನೋಂದಣಿಯಾಗಿರುವ ಸಂಸ್ಥೆಗಳು ಪ್ರತಿ 5 ವರ್ಷಕ್ಕೊಮ್ಮೆ ನವೀಕರಣಗೊಳ್ಳಬೇಕಾಗಿರುತ್ತದೆ ಹಾಗೂ ಕೆಲವು ಸಂಸ್ಥೆಗಳು ನೊಂದಣಿಯಾಗದೆ 18 ವರ್ಷದೊಳಗಿನ ಅನಾಥ, ನಿರ್ಗತಿಕ, ಏಕಪೋಷಕ, ಪರಿತ್ಯಕ್ತ, ಹಾಗೂ ಇನ್ನಿತರೆ ಸಮಸ್ಯೆಗಳಿಂದ ರಕ್ಷಣೆ-ಪೋಷಣೆಗೆ ಅವಶ್ಯಕತೆ ಇರುವ ಮಕ್ಕಳನ್ನು ಸಂಸ್ಥೆಗಳಲ್ಲಿ ದಾಖಲಿಸಿಕೊಂಡಿದಲ್ಲಿ ಅಂತಹ ಸಂಸ್ಥೆಗಳು ಬಾಲನ್ಯಾಯ ಕಾಯ್ದೆ-2015ರ ಸೆಕ್ಷನ್ 41 ರಡಿಯಲ್ಲಿ ನೊಂದಣಿಯಾಗಬೇಕಾಗಿರುವುದರಿಂದ 2026ರ ಫೆಬ್ರವರಿ ಅಂತ್ಯದೊಳಗೆ ನೋಂದಣಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕು.



ಒಂದು ವೇಳೆ ಇಂತಹ ಸಂಸ್ಥೆಗಳು ನೋಂದಣಿಗೆ ಪ್ರಸ್ತಾವನೆಯನ್ನು ಸಲ್ಲಿಸದಿದ್ದಲ್ಲಿ ನೋಂದಣಿಯಾಗದ ಸಂಸ್ಥೆಗಳ ವಿರುದ್ಧ ಸೆಕ್ಷನ್ (42) ರಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಇಂತಹ ಸಂಸ್ಥೆಗಳು ಕಂಡುಬಂದಲ್ಲಿ ಅಧಿಕಾರಿಗಳು / ಸಾರ್ವಜನಿಕರು ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಠಡಿ ಸಂಖ್ಯೆ-307, 2ನೇ ಮಹಡಿ, ಜಿಲ್ಲಾಡಳಿತ ಸಂಕೀರ್ಣ, ಬಿ.ಎಂ ರೋಡ್, ಬೆಂಗಳೂರು ದಕ್ಷಿಣ ಜಿಲ್ಲೆ. ದೂ. ಸಂಖ್ಯೆ: 080-29655500 ಇಲ್ಲಿ ಸಂಪರ್ಕಿಸಬೇಕೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಡಿವ ನೀರಿಗೆ ಕೊರತೆ ಆಗದಂತೆ ಕ್ರಮ ಕೈಗೊಳ್ಳಿ: ಡಿಸಿ

ಮೈಸೂರು: ಬೇಸಿಗೆ ಕಾಲ ಆರಂಭವಾಗಿದ್ದು, ಜಿಲ್ಲೆಯಲ್ಲಿ ಕುಡಿವ ನೀರಿನ ಕೊರತೆ ಆಗದಂತೆ, ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೆಆರ್‌ಎಸ್, ಕಬಿನಿ ಅಣೆಕಟ್ಟುಗಳಲ್ಲಿ ಇರುವ ನೀರಿನ ಲಭ್ಯತೆಯ ಮಾಹಿತಿ ಪಡೆದ ಅವರು, ಜೂನ್ ಅಂತ್ಯದವರೆಗೆ ಈಗ ಅಣೆಕಟ್ಟುಗಳಲ್ಲಿ ಇರುವ ನೀರಿನ ಪ್ರಮಾಣ ಸಾಕಾಗುತ್ತದೆ. ಒಂದು ವೇಳೆ, ಕುಡಿಯುವ ನೀರಿನ ಅಗತ್ಯ ಬಿದ್ದರೆ ಕಬಿನಿ ಅಣೆಕಟ್ಟಿನಿಂದ ಚಾನೆಲ್ ಮೂಲಕ ನೀರನ್ನು ಕಾಲಕಾಲಕ್ಕೆ ಹರಿಸಿ, ಕುಡಿಯುವ ನೀರನ್ನು ಪೂರೈಸುವಂತೆ ಕಬಿನಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರತಿವಾರ ಸಭೆ ನಡೆಸಿ ಸೂಚನೆ ನೀಡಿ: ತಹಶೀಲ್ದಾರರು ತಾಲೂಕು ಮಟ್ಟದಲ್ಲಿ ಪ್ರತಿ ವಾರ ಕುಡಿಯುವ ನೀರಿನ ನಿರ್ವಹಣೆ ಕುರಿತು ಗ್ರಾಮೀಣ ಕುಡಿಯುವ ನೀರಿನ ಇಲಾಖೆ ಅಧಿಕಾರಿಗಳು ಹಾಗೂ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಸೇರಿ ಸಭೆ ನಡೆಸಬೇಕು ಎಂದು ಸೂಚನೆ ನೀಡಿದರು. ಚಳಿಗಾಲ ಮುಗಿದು, ಈಗಾಗಲೇ ಬೇಸಿಗೆ ಕಾಲ ಆರಂಭವಾಗಿದೆ. ತಾಪಮಾನ ಹೆಚ್ಚಾಗಿ ಕಾಳ್ಗಿಚ್ಚು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಅರಣ್ಯ ಇಲಾಖೆ ಹಾಗೂ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೈಗೊಳ್ಳಬೇಕು. ಕಳೆದ ವರ್ಷ ಚಾಮುಂಡಿ ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಈ ಬಾರಿ ಅಂತಹ ಸನ್ನಿವೇಶಗಳು ಸಂಭವಿಸಿದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ ಎಂದು ಸೂಚನೆ ನೀಡಿದರು.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಯುಕೇಶ್ ಕುಮಾರ್ ಅವರು ಮಾತನಾಡಿ, ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಬರಬಹುದಾದ ಗ್ರಾಮಗಳನ್ನು ಗುರುತಿಸಿಕೊಳ್ಳಿ. ಕುಡಿಯುವ ನೀರಿನ ಸಮಸ್ಯೆ ಉಂಟಾದ ನಂತರ ಕ್ರಮ ವಹಿಸುವ ಬದಲು, ಮೊದಲೇ ಕ್ರಮ ವಹಿಸಬೇಕು. ನೀರಿನ ನಲ್ಲಿಗಳಿಗೆ ಆಫ್ ಅಂಡ್ ಆನ್ ಕ್ಯಾಪ್ಗಳನ್ನು ಅಳವಡಿಸಬೇಕು ಎಂದು ಸೂಚನೆ ನೀಡಿದ ಅವರು ಅಗತ್ಯವಿದ್ದರೆ ಕೊಳವೆ ಬಾವಿಗಳನ್ನು ಕೊರಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಕ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೇರಿ ಇತರರು ಉಪಸ್ಥಿತರಿದ್ದರು.

## ಫೆ.12 ಮುಷ್ಕರ ಬೆಂಬಲಿಸುವಂತೆ ಮನವಿ



ಮೈಸೂರು: ಕೇಂದ್ರದ ಕಾರ್ಮಿಕ, ರೈತ ವಿರೋಧೀ ಧೋರಣೆ ವಾಪಸಿಗೆ ಆಗ್ರಹಿಸಿ ಫೆ.12 ರಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಮೈಸೂರಿನ ಜನತೆ, ಕಾರ್ಮಿಕರು ಬೆಂಬಲ ನೀಡುವಂತೆ ಜಂಟೀ ಸಮಿತಿ ಹಾಗೂ ಇನ್ನಿತರ ಸಂಘಟನೆಗಳ ಮುಖಂಡರು ಜಂಟಿ ಸುದ್ದಿಗೋಷ್ಠಿಯಲ್ಲಿ ನಗರದ ಜನತೆಗೆ ಮನವಿ ಮಾಡಿದರು.

ಮೊದಲಿಗೆ ಕಾರ್ಮಿಕ ಮುಖಂಡ ಎನ್.ಕೆ. ದೇವದಾಸ್ ಮಾತನಾಡಿ, ಅಂದು ಬೆಳಗ್ಗೆ 10ಕ್ಕೆ ವಿವಿಧ ಕಾರ್ಖಾನೆಗಳ ಕಾರ್ಮಿಕರು, ದಸಂಸ, ರೈತ ಸಂಘಟನೆಗಳವರು ನಗರದ ಗಾಂಧಿ ಚೌಕದಲ್ಲಿ ಸಮಾವೇಶಗೊಳ್ಳಲಿದ್ದಾರೆ. ಬಳಿಕ ಅಲ್ಲಿಂದ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಬೃಹತ್ ಮೆರವಣಿಗೆ ಹೊರಟು ಮತ್ತು ಗಾಂಧಿ ಚೌಕಕ್ಕೇ ಬಂದು ಸೇರಲಿದ್ದಾರೆ. ಇಲ್ಲಿ ನಂತರ ಕಾರ್ಮಿಕ ಮುಖಂಡರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ ಕೇಂದ್ರದ ಧೋರಣೆ ಖಂಡಿಸಲಿದ್ದಾರೆಂದರು. ಜನವಿರೋಧೀ ಮಸೂದೆಗಳಾದ 4 ಲೇಬರ್ ಕೋಡ್ ರದ್ದುಗೊಳಿಸಬೇಕು, ನರೇಗಾ ಯೋಜನೆ ಪುನರ್ ಸ್ಥಾಪಿಸಿ, ವಿಜಿ ಗ್ರಾಮ್ ಜಿ ಕಾಯ್ದೆ ರದ್ದುಗೊಳಿಸಬೇಕು, ಭೂ ಸ್ವಾಧೀನ ಕಾಯ್ದೆ, ಎಪಿಎಂಸಿ, ಜಾನುವಾರು ಸಂರಕ್ಷಣಾ ಕಾಯ್ದೆಗಳನ್ನು ಹಿಂಪಡೆಯಬೇಕು, ಬೀಜ ಮಸೂದೆ ಹಿಂಪಡೆಯಬೇಕು, ವಿಮಾ ತಿದ್ದುಪಡಿ ಕಾಯ್ದೆ ರದ್ದಾಗಬೇಕು, 2025 ರ ಆಗಸ್ಟ್ ತಿಂಗಳಲ್ಲಿ ಕನಿಷ್ಠ ವೇತನ ಹೆಚ್ಚಳ ಕುರಿತು ಕನಿಷ್ಠ ವೇತನ ಸಲಹಾ ಮಂಡಳಿ ನೀಡಿರುವ ಶಿಫಾರಸ್ಸಿನ ಅಂತಿಮ ಅಧಿಸೂಚನೆ ಹೊರಡಿಸಬೇಕು ಎಂದು ಈ ವೇಳೆ ಆಗ್ರಹಿಸಲಾಗುವುದೆಂದರು. ಇನ್ನಿತರ ಕಾರ್ಮಿಕ, ದಲಿತ, ರೈತ ಮುಖಂಡರಾದ ಚಂದ್ರಶೇಖರ ಮೇಟಿ, ಬಾಲಾಜಿರಾವ್, ಬಸವರಾಜ್, ಯಶೋಧರ್, ಶಂಭುಲಿಂಗಸ್ವಾಮಿ ಹಾಜರಿದ್ದರು.

**ಲೇಖನ ಸಮಾಗ್ರಿಗಳು, ಜೆರಾಕ್ಸ್ ಮಿಷನ್ ಗಳು ಬೆಂಕಿಗಾಹುತಿ**

# ಜೆರಾಕ್ಸ್ ಅಂಗಡಿಯಲ್ಲಿ ಆಕಸ್ಮಿಕ ಬೆಂಕಿ

ಎಚ್.ಡಿ.ಕೋಟೆ: ಪಟ್ಟಣದ ಪುರಸಭೆ ಸಮೀಪದ ಶ್ರೀವಿನಾಯಕ ಸ್ಟೇಷನರಿ ಹಾಗೂ ಜೆರಾಕ್ಸ್ ಅಂಗಡಿಯಲ್ಲಿ ಕಾಣಿಸಿಕೊಂಡ ಆಕಸ್ಮಿಕ ಬೆಂಕಿಯಿಂದ ಅಂದಾಜು 18-20 ಲಕ್ಷ ರೂ.ನಷ್ಟ ಸಂಭವಿಸಿದೆ.

ಹನುಮಂತನಗರ ನಿವಾಸಿ ಲೋಕೇಶ್ ಏಳು ವರ್ಷಗಳಿಂದ ಅಂಗಡಿ ನಡೆಸುತ್ತಿದ್ದು, ಶಾಲಾ, ಕಾಲೇಜು ವಿದ್ಯಾರ್ಥಿಗಳ ಪಠ್ಯಪುಸ್ತಕ, ಲೇಖನ ಸಾಮಾಗ್ರಿಗಳು, ಕಚೇರಿಗಳಿಗೆ ಬೇಕಾಗುವ ದಾಖಲೆಗಳು, ನ್ಯಾಯಾಲಯ, ಕಂದಾಯ ಇಲಾಖೆ, ಬ್ಯಾಂಕ್ ಸೇರಿದಂತೆ ಇತರೆ ಇಲಾಖೆಗಳ ಅರ್ಜಿ ನಮೂನೆಗಳು ಹಾಗೂ ದಾಖಲೆಗಳನ್ನು ಸಂಗ್ರಹಿಸಿಡುವ ಫೈಲ್ ಗಳು, ಕವರ್ ಗಳನ್ನು ಮಾರಾಟ ಮಾಡುತ್ತಿದ್ದರು.

ಮಂಗಳವಾರ ರಾತ್ರಿ 10.30ರಲ್ಲಿ ಅಂಗಡಿಯಲ್ಲಿ ಶಾರ್ಟ್ ಸರ್ಕ್ಯೂಟ್ ಸಂಭವಿಸಿದ್ದು, ಬೆಂಕಿಯ ಕೆನ್ನಾಲಿಗೆ ಅಂಗಡಿಯನ್ನೆಲ್ಲ ಆವರಿಸಿದೆ. ನೋಟ್ ಪುಸ್ತಕಗಳು ಇದ್ದಿದ್ದರಿಂದ ಬೆಂಕಿ ತೀವ್ರವಾಗಿ ಹರಡಿಕೊಂಡಿದೆ. ಅಂಗಡಿಯಲ್ಲಿದ್ದ ಮೂರು ಜೆರಾಕ್ಸ್ ಮಷಿನ್, ಒಂದು ೦-3 ಕಲರ್ ಜೆರಾಕ್ಸ್ ಮಷಿನ್ ಸುಟ್ಟು ಕರಕಲಾಗಿರುವುದರಿಂದ ದೊಡ್ಡಮ ಟ್ಟದ ಆರ್ಥಿಕ ನಷ್ಟ ಸಂಭವಿಸಿದೆ. ಬೆಂಕಿ ಉರಿಯುತ್ತಿದ್ದನ್ನು ಗಮನಿಸಿದ ಅಂಗಡಿ ಎದುರಿಗಿರುವ ಕೆನರಾ ಬ್ಯಾಂಕ್ ಭದ್ರತಾ ಸಿಬ್ಬಂದಿ, ಅಂಗಡಿ ಮಾಲೀಕ ಹಾಗೂ ಅಗ್ನಿಶಾಮಕ ದಳ ಕಚೇರಿಗೆ ದೂರವಾಣಿ ಮೂಲಕ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾ ಗಮಿಸಿದ ಅಗ್ನಿಶಾಮಕ ಸಹಾಯಕ ಠಾಣಾ ಧಿಕಾರಿ ಎಂ. ಜಿ.ಸೋಮಣ್ಣ, ಅಶೋಕ್, ಗಣೇಶ್ ಮಾದರ್, ಸಿಬ್ಬಂದಿಗಳಾದ ಮುನಿಸಿದ್ದ ನಾಯಕ, ಪ್ರಕಾಶ, ಯಲ್ಲಪ್ಪ, ರಾಹುಲ್, ಬಾಲಕೃಷ್ಣ, ಸುನಿಲ್ ಕುಮಾರ್, ಹೇಮಂತ್ ಕುಮಾರ್ ಬೆಂಕಿ ನಂದಿಸಿದ್ದಾರೆ. ಘಟನೆಯ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಆರಕ್ಷಕ ವೃತ್ತ ನಿರೀಕ್ಷಕ ಗಂಗಾಧರ್, ಸಿಬ್ಬಂದಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.



# ಸುನೀಲ್ ಕುಮಾರ್ ವಿರುದ್ಧ ಸುಳ್ಳು ಮೊಕ್ಕದ್ದಮೆ ದಾಖಲು: ಲಕ್ಷ್ಮಣ್




**ಮೈಸೂರು:** ಎಚ್.ಡಿ. ಕೋಟೆ ಕಸಹಾ ಹೋಬಳಿಯ ಸರ್ವೆ ನಂಬರ್ 80/2 ರಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಸುನಿಲ್ ಕುಮಾರ್ ಎಂಬುವವರ 5 ಎಕರೆ ಜಮೀನಿಗೆ ನುಗ್ಗಿದ ಕೆಲವರು ತೀವ್ರ ಹಲ್ಲೆ ನಡೆಸಿ, ತಾವೇ ತಂದಿದ್ದ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ವಿರೋಪಗೊಳಿಸಿ, ಸುನಿಲ್ ಕುಮಾರ್ ವಿರುದ್ಧ ಅಟ್ರಾಸಿಟಿ ಕಾಯ್ದೆ ಅಡಿಯಲ್ಲಿ ಸುಳ್ಳು ದೂರು ಸಲ್ಲಿಸಿದ್ದಾರೆ ಎಂದು ಎಚ್.ಡಿ. ಕೋಟೆ ಜಿಪಂ ಮಾಜಿ ಸದಸ್ಯ ಎಚ್.ಸಿ.ಲಕ್ಷ್ಮಣ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಜಮೀನಿಗೆ ಸಂಬಂಧಿಸಿದಂತೆ ಸುನಿಲ್ ಕುಮಾರ್ ಹಾಗೂ ಮೋಸೆಸ್ ಎಂಬುವವರ ನಡುವೆ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥ ಬಾಕಿ ಇದೆ. ಆದರೂ ಸಹಾ ಒಂದು ಸಮುದಾಯಕ್ಕೆ ಸೇರಿದ ಕಟ್ಟೆ ಮನುಗನಹಳ್ಳಿಯ ರವಿಕುಮಾರ್, ಜಯಣ್ಣ, ಪ್ರವೀಣ್, ಮಧು ಮತ್ತು ಕಿರಣ್, ಎಂಬುವವರು ಇದೇ ತಿಂಗಳ 4 ರಂದು ಜಮೀನಿಗೆ ಏಕಾಏಕಿ ನುಗ್ಗಿ ಸುನೀಲ್ ಕುಮಾರ್ ಅವರ ಮೇಲೆ ತೀವ್ರ ಹಲ್ಲೆ ನಡೆಸಿ, ಅಂಬೇಡ್ಕರ್ ಭಾವಚಿತ್ರ ತಾವೇ ವಿರೂಪಗೊಳಿಸಿ, ದೂರು ನೀಡಿದ್ದಾರೆ ಎಂದು ದೂರಿದರು. ಇದೇ ವೇಳೆ ಕೆಲ ದಲಿತ ಮುಖಂಡರು ಮಾತನಾಡಿ, ಕೆಲವರು ಅಟ್ರಾಸಿಟಿ ಕೇಸ್ ದುರ್ಬಳಕೆ ಮಾಡಿಕೊಳ್ಳುತ್ತಿರುವುದರಿಂದ ದಲಿತ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತಿದೆ. ಆರೋಪಿಗಳು ತಾವೇ ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ್ದನ್ನು ತಾವೆಲ್ಲ ನೋಡಿದ್ದೇವೆ. ಹೀಗಾಗಿ ಸುನಿಲ್ ಕುಮಾರ್ ವಿರುದ್ಧ ದಾಖಲಿಸಿಕೊಂಡಿರುವ ದೂರು ರದ್ದು ಪಡಿಸಬೇಕು, ಆರೋಪಿಗಳ ವಿರುದ್ಧ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ್ದಕ್ಕಾಗಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಡಿಎಸ್ಎಸ್‌ನ ಸೋಮಣ್ಣ, ಇನ್ನಿತರ ಮುಖಂಡರಾದ ಶ್ರೀಧರ್, ಪುಟ್ಟರಾಜು, ಜವರಯ್ಯ, ಕೃಷ್ಣ ಹಾಗೂ ಲೋಕೇಶ್ ಹಾಜರಿದ್ದರು.

# ರಾಜ್ ಕುಮಾರ್ ರಸ್ತೆ ದುಸ್ಥಿತಿ ಸರಿಪಡಿಸದಿದ್ದರೆ ಹೋರಾಟ




**ಮೈಸೂರು:** ನಗರದ ಟೆರೆಸಿಯನ್ ಕಾಲೇಜು ಸಿಗ್ನಲ್ ಲೈಟ್‌ನಿಂದ ಮಹದೇವಪುರಕ್ಕೆ ಸಂಪರ್ಕ ಕಲ್ಪಿಸುವ ಹಾಗೂ ಮೇರು ನಟ ಡಾ.ರಾಜ್‌ಕುಮಾರ್ ಹೆಸರನ್ನು ಹೊಂದಿರುವ ಸುಮಾರು 3 ಕಿ.ಮೀ ಉದ್ದದ ರಸ್ತೆಯ ಒಂದು ಕಡೆ ಸುಮಾರು 20 ಅಡಿಯಷ್ಟು ಭಾಗ ಹದಗೆಟ್ಟಿದೆ. ಇದನ್ನು ಸರಿಪಡಿಸಬೇಕೆಂದು ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾರೂ ಸ್ಪಂದಿಸುತ್ತಿಲ್ಲ. ಹೀಗಾಗಿ ಇನ್ನು 15 ದಿನಗಳೊಳಗೆ ದುರಸ್ತಿ ಪಡಿಸದಿದ್ದಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಈ ರಸ್ತೆಗೆ ಹೊಂದಿಕೊಂಡ ವಿವಿಧ ಬಡಾವಣೆಗಳ ವಾಸಿಗಳು ಎಚ್ಚರಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮೊದಲಿಗೆ ಪ್ರೊ.ಸಿ.ಬಿ. ಬಸವರಾಜ್ ಮಾತನಾಡಿ, ಈ ರಸ್ತೆಗೆ ಡಾ. ರಾಜ್‌ಕುಮಾರ್ ರಸ್ತೆ ಎಂದು ಹೆಸರಿಟ್ಟಿದ್ದರೂ ಅದರ ಹದಗೆಟ್ಟ ಭಾಗದ ಕಾರಣ ರಾಜ್‌ಕುಮಾರ್ ಹೆಸರಿಗೆ ಅಪಮಾನವಾಗುತ್ತಿದೆ. ಈ ರಸ್ತೆಯಲ್ಲಿ ಒಂದು ಕಡೆ ಭೂ ವಿವಾದದ ಕಾರಣ ಸುಮಾರು 2000 ಮಿಟರ್‌ನಷ್ಟು ದೂರ ಡಾಂಬರ್ ಹಾಕಿಲ್ಲ. ಈ ಭಾಗದಲ್ಲಿ ಹಿರಿಯ ನಾಗರಿಕರು ಹಾಗೂ ಮಹಿಳೆಯರು, ಮಕ್ಕಳು ಆತಂಕದಿಂದಲೇ ಸಾಗುವಂತಾಗುತ್ತಿದೆ. ಅನೇಕರು ಕೆಳಗೆ ಬಿದ್ದು ಗಾಯಗೊಂಡ ಘಟನೆಯೂ ಉಂಟು. ಹೀಗಿದ್ದರೂ ಸಂಬಂಧಿಸಿದವರು ಕ್ರಮ ಕೈಗೊಂಡಿಲ್ಲ ಎಂದು ಬೇಸರಿಸಿದರು.

ವನ್ಯಜೀವಿ ಸಂರಕ್ಷಕ ಪ್ರದೀಪ್ ಮಾತನಾಡಿ, ರಸ್ತೆಯ ಈ ಭಾಗದ ದುಸ್ಥಿತಿ ಕಾರಣ ಬಹುತೇಕ ವಾಹನಗಳು ಕಿರಿದಾದ ಕಾವೇರಿ ಮುಖ್ಯ ರಸ್ತೆಯಲ್ಲಿ ಸಾಗುತ್ತಿವೆ.

ಇದರಿಂದ ಆ ಭಾಗದ ಜನತೆಗೆ ಕಿರಿಕಿರಿಯುಂಟಾಗುತ್ತಿದೆ. ರಾಜ್‌ಕುಮಾರ್ ರಸ್ತೆಯ ದುಸ್ಥಿತಿ ಬಗ್ಗೆ ಗಮನ ಸೆಳೆದರೆ ಶಾಸಕ ತನ್ವೀರ್‌ಸೇಠ್ ನ್ಯಾಯಾಲಯದಲ್ಲಿರುವ ವಿವಾದ ಕಾರಣವೆನ್ನುತ್ತಾರೆ.

ಆದರೆ ಇದನ್ನು ಬಗೆಹರಿಸುವುದು ಅವರಿಗೆ ಕಷ್ಟದ ಕೆಲಸವಲ್ಲ. ಆದ್ದರಿಂದ ಕೂಡಲೇ ಸಮಸ್ಯೆ ಬಗೆಹರಿಸಬೇಕೆಂದು ಮನವಿ ಮಾಡಿದರು. ಇನ್ನಿತರ ಹಿರಿಯ ನಿವಾಸಿಗಳಾದ ಮಲ್ಲಿಕಾರ್ಜುನ್, ಕೆಇಬಿ ಬಸವರಾಜು, ಜಯಶಂಕರ್ ಸ್ವಾಮಿ, ಮೈಕ್ ಪ್ರಕಾಶ್ ಮೊದಲಾದವರು ಸಹಾ ಮಾತನಾಡಿ, ಶೀಘ್ರ ಈ ರಸ್ತೆ ದುರಸ್ತಿ ಮಾಡದಿದ್ದರೆ ತೀವ್ರ ಹೋರಾಟ ನಡೆಸುವ ಎಚ್ಚರಿಕೆ ನಿಡಿದರು.

## ಮಕ್ಕಳ ಪಾಲನಾ ಸಂಸ್ಥೆಗಳ ಕಡ್ಡಾಯ ನೋಂದಣಿಗೆ ಸೂಚನೆ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲಾ ವ್ಯಾಪ್ತಿಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳು ಕಡ್ಡಾಯವಾಗಿ ಬಾಲನ್ಯಾಯ ಕಾಯ್ದೆ-2015ರ ಸೆಕ್ಷನ್ 41 ರಡಿಯಲ್ಲಿ ನೋಂದಣಿಯಾಗಬೇಕು ಹಾಗೂ ನೋಂದಣಿಯಾಗಿರುವ ಸಂಸ್ಥೆಗಳು ಪ್ರತಿ 5 ವರ್ಷಕ್ಕೊಮ್ಮೆ ನವೀಕರಣಗೊಳ್ಳಬೇಕಾಗಿರುತ್ತದೆ ಹಾಗೂ ಕೆಲವು ಸಂಸ್ಥೆಗಳು ನೊಂದಣಿಯಾಗದೆ 18 ವರ್ಷದೊಳಗಿನ ಅನಾಥ, ನಿರ್ಗತಿಕ, ಏಕಪೋಷಕ, ಪರಿತ್ಯಕ್ತ, ಹಾಗೂ ಇನ್ನಿತರೆ ಸಮಸ್ಯೆಗಳಿಂದ ರಕ್ಷಣೆ-ಪೋಷಣೆಗೆ ಅವಶ್ಯಕತೆ ಇರುವ ಮಕ್ಕಳನ್ನು ಸಂಸ್ಥೆಗಳಲ್ಲಿ ದಾಖಲಿಸಿಕೊಂಡಿದಲ್ಲಿ ಅಂತಹ ಸಂಸ್ಥೆಗಳು ಬಾಲನ್ಯಾಯ ಕಾಯ್ದೆ-2015ರ ಸೆಕ್ಷನ್ 41 ರಡಿಯಲ್ಲಿ ನೊಂದಣಿಯಾಗಬೇಕಾಗಿರುವುದರಿಂದ 2026ರ ಫೆಬ್ರವರಿ ಅಂತ್ಯದೊಳಗೆ ನೋಂದಣಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಒಂದು ವೇಳೆ ಇಂತಹ ಸಂಸ್ಥೆಗಳು ನೋಂದಣಿಗೆ ಪ್ರಸ್ತಾವನೆಯನ್ನು ಸಲ್ಲಿಸದಿದ್ದಲ್ಲಿ ನೋಂದಣಿಯಾಗದ ಸಂಸ್ಥೆಗಳ ವಿರುದ್ಧ ಸೆಕ್ಷನ್ (42) ರಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಇಂತಹ ಸಂಸ್ಥೆಗಳು ಕಂಡುಬಂದಲ್ಲಿ ಅಧಿಕಾರಿಗಳು / ಸಾರ್ವಜನಿಕರು ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಠಡಿ ಸಂಖ್ಯೆ-307, 2ನೇ ಮಹಡಿ, ಜಿಲ್ಲಾಡಳಿತ ಸಂಕೀರ್ಣ, ಬಿ.ಎಂ ರೋಡ್, ಬೆಂಗಳೂರು ದಕ್ಷಿಣ ಜಿಲ್ಲೆ. ದೂ. ಸಂಖ್ಯೆ: 080-29655500 ಇಲ್ಲಿ ಸಂಪರ್ಕಿಸಬೇಕೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾಲತಾಣಗಳ ಜೀಕಿನಲ್ಲಿ ಬ್ರೇಕಿಲ್ಲದ ಪಯಣ






| ಪುಷ್ಪ ಪ್ರಸಾದ್

ತನ್ನೊಡಲ ತಲ್ಲಣಗಳ ಕೇಳುವವರು ಯಾರು? ತನ್ನೆದೆಯ ಪಿಸುಮಾತುಗಳ ಆಲಿಸುವವರು ಯಾರು? ಅಂತರ್ಗತ ಭಾವಗಳಿಗೆ ಸ್ಪಂದಿಸುವ, ಕೇಳುವ ಹೃದಯಗಳು ಇದ್ದರೆ ಹೃದಯದ ಕಾವು, ಒಡಲ ಉರಿ ಸಮಾಧಾನಗೊಂಡೀತು. ಜಾಗತಿಕ ವೈಭವದಲ್ಲಿ ಜಾಲತಾಣಗಳ ಮೆರವಣಿಗೆ ಅಪೂರ್ವ ಸಂತುಷ್ಟತೆ ಮೆರೆಯುತ್ತಿದ್ದು, ಪಿಸುಮಾತುಗಳ ಸಮ್ಮಿಲನಕ್ಕೆ ಬೆಸುಗೆ ಮೂಡಿಸಿವೆ. ಆದರೆ ಬೆಸುಗೆಗಳ ಸೇತುವೆಯಲ್ಲಿ ಕಾಮಸೇತುಗಳೇ ಆರ್ಭಟಗೊಂಡದ್ದು ಪಿಸುಮಾತುಗಳ ಜಗದಲ್ಲಿ ವಿಕೃತ ಧಾಟಿ ಎನಿಸಿದೆ. ಇದಕ್ಕೆ ಜಾಲತಾಣಗಳೇ ವೇದಿಕೆಯಾಗಿರುವುದು ಸತ್ಯ. ಈ ಯುಗದ ತಂತ್ರಜ್ಞಾನ ಪರಿಧಿಗಳಲ್ಲಿ ಅಭಿವ್ಯಕ್ತಿ ಎನ್ನುವುದು ಒಂದು ರೀತಿ ಮಾಧ್ಯಮಗಳ ಸರಕು.


ಜಾಲತಾಣಗಳ ಜೀಕಿನಲ್ಲಿ ಬ್ರೇಕಿಲ್ಲದ ಪಯಣ ಮೋಡಿ ಮಾಡಿಬಿಟ್ಟಿದೆ. ಮೂರು ಹೊತ್ತೂ ರೋಗಿಗಳಿಗೆ ಗುಳಿಗೆ ಕೊಡುವಂತೆ ಅಥವಾ ಪ್ರತಿ ಹೊತ್ತೂ ಸ್ಟೋರೇಜ್ ರೂಮಿನ ಬಾಗಿಲು ತೆಗೆದು ನೋಡುವಂತೆ ಸೋಶಿಯಲ್ ಮೀಡಿಯಾಗಳಿಗೆ ಇಣುಕಿ ಇಣುಕಿ ಬರುವುದು. ಅವನದ್ದು ವಿಪರೀತ ಕಳಕಳಿ, ಅವಳದ್ದು ವಿನಮ್ರ ಬೇಡಿಕೆ. ಎಲ್ಲವ ತೊರೆಯೆಂದು ಅಭಿವ್ಯಕ್ತತೆಯ ಕಚಗುಳಿ ಆಸೆಯ ಜೊಲ್ಲು, ಕೇಳಿಕೆಯ ಕರ್ಣ ಬಯಕೆಯ ಮಿತ್ರ. ವಿಪ್ಲವಗಳ ಕೂಗಿಗೆ ಶರಧಿಗಟ್ಟಿ ನಿಂತಸಾಲು ಓಗೊಡುವ ಒಗ್ಗಟ್ಟಿಗೆ ಓಕೆ ಇಲ್ಲಿ. ಅಭಿಲಾಷಿತ ಅಭಿವ್ಯಕ್ತ ಸಾಗರದುದ್ದಕ್ಕೂ ಬೇಕು ಬೇಡಗಳ, ಅನಿಸಿಕೆಗಳ ಮಹಾಪೂರ.

ಅಭಿವ್ಯಕ್ತತೆಗೂ ಒಂದು ಸೀಮೆ ಇರಬೇಕು ಅಲ್ಲವೇ? ಅನಿಸಿದ್ದನ್ನೆಲ್ಲ ಇನ್ಸ್ಟಾಗ್ರಾಮ್, ಫೇಸ್ಬುಕ್ ನಲ್ಲಿ ಪ್ರಚಾರ ಮಾಡಿದರೆ ಹೇಗೆ. ಅಪ್ಪನಿಗೆ ತನ್ನ ಮಕ್ಕಳು ಫೋನ್‌ನಲ್ಲಿ ತುಂಬಾ ಚತುರರೆಂಬ ಹೆಮ್ಮೆ, ಅಮ್ಮ ಅದನ್ನೊಂದು ದೊಡ್ಡ ಸಾಧನೆಯೆಂಬಂತೆ ಬೀಗಿ ಬೀಗಿ ಹೇಳಿಕೊಳ್ಳುವುದು. ಅದರಲ್ಲೂ ಮಕ್ಕಳಿಗೆ ಹೇಳಿ ರೀಲ್ಸ್ ಮಾಡಿಸುವುದು, ಅದನ್ನು ಜಾಲತಾಣಗಳಲ್ಲಿ ಪೋಸ್ಟ್ ಹಾಕಿ ಆಹಾ ನನ್ನ ಮಗಳ/ಮಗನ ರೀಲ್ಸ್ ನೋಡಿ ಅಂತ ಸಿಕ್ಕ ಸಿಕ್ಕವರಿಗೆಲ್ಲಾ ಟ್ಯಾಗ್ ಮಾಡಿ ನಲಿಯವುದು. ಅಷ್ಟೇ ಅಲ್ಲದೆ ಜಾಲತಾಣಗಳ ಮುಂದೆ ಸಂತೆಯಲ್ಲಿ ಮಾರಾಟಕಿಟ್ಟ ತರಕಾರಿಯಂತೆ ಪ್ರತಿಯೊಂದನ್ನು ಅಲ್ಲಿ ಹಾಕಿ ಯಾವುದೋ ಗೊತ್ತುಗುರಿಯಿಲ್ಲದ ಅಪರಿಚಿತರಿಗೆ ಸುಗಮ ಹಾದಿ ಮಾಡಿಕೊಡುವುದು ಎಷ್ಟು ಸರಿ ಎಂಬುದನ್ನು ನಾವೇ ಅರ್ಥೈಯಿಸಿಕೊಳ್ಳಬೇಕಾಗಿದೆ.

?ಇನ್ನೂ ಕಾರ್ಟೂನ್ ನೋಡುವುದರಿಂದ ಶುರುವಾದ ಮಕ್ಕಳ ಅಂತರ್ಜಾಲ ಪ್ರವೇಶ ಅಪ್ಪ-ಅಮ್ಮಂದಿರ ಕಣ್ಣು ತಪ್ಪಿಸಿ ಅಶ್ಲೀಲ ಚಿತ್ರ ವೀಕ್ಷಣೆವರೆಗೆ ಬಂದು ನಿಲ್ಲುತ್ತದೆ. ಇನ್ನು ಆನ್ಲೈನ್ ಗೇಮ್ಸ್ ಲೂಡೋದಿಂದ ಹಿಡಿದು ಆತ್ಮಹತ್ಯೆಯಂತಹ ಭಯಾನಕ ಗೇಮ್ಸ್ ಚಟಗಳಿಗೆ ಮಾರುಹೋಗಿ ಆತ್ಮಹತ್ಯೆ ಮಾಡಿಕೊಳ್ಳುವ ತನಕ ಬರುತ್ತಿದೆ, ಮಕ್ಕಳು ದೊಡ್ಡವರಾಗುತ್ತಿದ್ದಂತೆ ಫೇಸ್ಬುಕ್, ವಾಟ್ಸಾಪ್, ತ್ರೆಡ್, ಇತ್ಯಾದಿ ಬ್ಲಾಗುಗಳೆಂಬ ಹುಲಿ, ಸಿಂಹದ ಬಾಯೊಳಗೆ ನುಗ್ಗುತ್ತಾರೆ. ಡೇಟಿಂಗ್, ಸೆಕ್ಸ್ ಚಾಟ್, ತಡ ರಾತ್ರಿ ಅಪ್‌ಲೋಡ್‌ಗಳು ಮುಂತಾದವುಗಳಿಗೆ ಅಪ್ಪ ಅಮ್ಮಂದಿರ ಊಹೆಗೂ ನಿಲುಕದ ಆಳದ ಕೂಪಕ್ಕೆ ಮಕ್ಕಳು ಬಿದ್ದು ಹೋಗಿರುತ್ತಾರೆ. ಜಾಲತಾಣಗಳ ಮುಂದೆ ನಮ್ಮನ್ನು ನಾವು ತೆರೆದುಕೊಳ್ಳುವ ಮೊದಲು ಸಾಧ್ಯಾಸಾಧ್ಯತೆಗಳನ್ನು ವಿವೇಚಿಸುವುದು ಇಂದಿನ ಅಗತ್ಯವಾಗಬೇಕು.

ಏಕೆಂದರೆ ಒಮ್ಮೆ ಆಡಿದ ಮಾತು ಮರಳಿ ಬಾರದೆನ್ನುವುದು ಸತ್ಯ. ಬುದ್ಧಿಯ ಲಗಾಮು ನಮ್ಮ ಕೈಯಲ್ಲಿರಬೇಕು. ಯಾವುದನ್ನು ಹೇಳಬೇಕು, ಯಾರಿಗೆ ಹೇಳಬೇಕು, ಎಷ್ಟು ಹೇಳಬೇಕು, ಯಾವಾಗ ಹೇಳಬೇಕು ಈ ನಾಲ್ಕು ಅಂಶಗಳ ಅಂಕುಶ ಇಲ್ಲಿ ತುಂಬಾ ಅಗತ್ಯ. ಇನ್ನು ಕಡಿವಾಣ ಎನ್ನುವ ಪದಪುಂಜಕ್ಕೆ ಮನಸ್ಸಿನ ಮಿಡಿತವೇ ವ್ಯಾಕರಣ. ಚಿತ್ರಿಸುವುದು ಕಲೆ, ವಿಕೃತಿಸುವುದು ಸುಡುವ ಬೆಂಕಿ. ಬೆಂಕಿಗಳ ಗಾಳಿ ಗುದ್ದಿನಲ್ಲಿ ಜಾಲತಾಣಗಳು ಹೌಸ್‌ಫುಲ್ ಪ್ರದರ್ಶನಗೊಳ್ಳುತ್ತಿವೆ. ಬೆಂಕಿಯ ಗುಣ ಕರಕಲಾಗಿಸುವುದು. ಸುಕೃತಿಗಳು ಪ್ರಸರತೆಯಲ್ಲಿ ಇವೆ ನಿಜ, ಸುಭೋದಕಗಳ ವಿಷಯ ವ್ಯಾಪ್ತಿ ಕಡಿಮೆ ಅಥವಾ ಅಪ್ರಿಯಗೊಳ್ಳುವ ಸರಕು ಎನ್ನಬಹುದು.

ಬರೀ ಅಷ್ಟೇ ಅಲ್ಲ, ವಿಚಾರ, ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಸಾಮಾಜಿಕ ಜಾಲತಾಣಗಳ ಮೇಲೇ ಅವಲಂಬಿತರಾಗುವುದು ಎಷ್ಟು ಸರಿ ಎಂದು ನಮಗೆ ನಾವೇ ಕೇಳಿಕೊಳ್ಳಬೇಕಾಗಿದೆ. ವೈಯಕ್ತಿಕ ಬದುಕು ಕೂಡ ಆನ್ ಲೈನ್, ಎಐ, ಅಭಿವ್ಯಕ್ತಿ, ಇತ್ಯಾದಿ ನೆಪದಲ್ಲಿ ಬಹಿರಂಗ ಸ್ವರೂಪ ಪಡೆದಿರುವುದು ವಿಷಾದಕರ.



ತಂದೆ ತಾಯಿಯರು ತಮ್ಮ ಮಕ್ಕಳ ಅಂತರ್ಜಾಲ ಬಳಕೆ ಮತ್ತು ಅವರ ಖಾಸಗಿ ಬದುಕಿನಲ್ಲಿ ಪ್ರವೇಶವಾಗಿರಬಹುದಾದ ಅಪರಿಚಿತ ಮತ್ತು ಅಪಾಯಕಾರಿ ವೈರಸ್ಸುಗಳನ್ನು ಆಗಾಗ ಅವರಿಗೆ ಆಪ್ತ ಸಮಾಲೋಚನೆಯೆಂಬ ಆಯಂಟಿ ವೈರಸ್ಸನ್ನು ಅಪ್‌ಲೋಡ್ ಮಾಡುವ ಮೂಲಕ ಸ್ಕ್ಯಾನ್ ಮಾಡಿ ಅನಗತ್ಯವಾದುದನ್ನು ಡಿಲೀಟ್ ಮಾಡುತ್ತಲೇ ಇರಬೇಕು.

## ಸೈಲೆನ್ಸ್ ಜನರೇಶನ್ ಟು ಬೀಟಾ ಜನರೇಶನ್ ಬದಲಾಗುತ್ತಿರುವ ಪೀಳಿಗೆಗಳು:

# ಜೆನ್-ಜಿ ಸೃಷ್ಟಿಸುತ್ತಿರುವ ಹೊಸ ಜಗತ್ತು

"ನಮ್ಮ ಕಾಲದಲ್ಲಿ ಹೀಗಿರಲಿಲ್ಲ..." ? ಈ ವಾಕ್ಯ ಪ್ರತಿಯೊಬ್ಬರ ಮನೆಯಲ್ಲೂ ಕೇಳಿಬರುವ ಸಾಮಾನ್ಯ ಮಾತು. ಹಿರಿಯರು ಮತ್ತು ಕಿರಿಯರ ನಡುವಿನ ಆಲೋಚನಾ ಕ್ರಮ, ಜೀವನಶೈಲಿ ಮತ್ತು ತಂತ್ರಜ್ಞಾನದ ಬಳಕೆಯಲ್ಲಿರುವ ವ್ಯತ್ಯಾಸವನ್ನೇ ನಾವು 'ಪೀಳಿಗೆಯ ಅಂತರ' (Generation Gap) ಎನ್ನುತ್ತೇವೆ. ಇಂದು ನಾವು ಐದು ವಿಭಿನ್ನ ಆಲೋಚನಾ ಕ್ರಮಗಳ ಮಧ್ಯೆ ಬದುಕುತ್ತಿದ್ದೇವೆ. ಈ ಪೀಳಿಗೆಗಳು ಯಾರು? ಅವರು ಜಗತ್ತನ್ನು ಹೇಗೆ ನೋಡುತ್ತಿದ್ದಾರೆ ಮತ್ತು ಇಂದಿನ ಜಗತ್ತಿನ ಮೇಲೆ ಅವರು ಬೀರುತ್ತಿರುವ ಪ್ರಭಾವ ಎಂತಹದ್ದು? ಎಂಬ ಸುದೀರ್ಘ ವಿಶ್ಲೇಷಣೆ ಇಲ್ಲಿದೆ.

**ಪೀಳಿಗೆಗಳನ್ನು ವ್ಯಾಖ್ಯಾನಿಸುವುದು ಯಾರು ಮತ್ತು ಹೇಗೆ?**

ಪೀಳಿಗೆಗಳನ್ನು ಯಾರು ಅಧಿಕೃತವಾಗಿ ಹೆಸರಿಸುತ್ತಾರೆ ಎಂಬ ಪ್ರಶ್ನೆಗೆ ಯಾವುದೇ ಒಂದು ಜಾಗತಿಕ ಸಂಸ್ಥೆಯ ಉತ್ತರವಿಲ್ಲ. ಆದರೆ, ಅಮೆರಿಕದ 'ಪ್ಯೂ ರಿಸರ್ಚ್ ಸೆಂಟರ್' ನಂತಹ ಸಾಮಾಜಿಕ ಸಂಶೋಧನಾ ಸಂಸ್ಥೆಗಳು ಮತ್ತು ಜನಸಂಖ್ಯಾಶಾಸ್ತ್ರಜ್ಞ ಮಾರ್ಕ್ ಮೆಕ್ರಿಂಡಲ್ ಅಂತಹ ತಜ್ಞರು ಇದನ್ನು ನಿರ್ಧರಿಸಿಸುತ್ತಾರೆ. ಸಾಮಾನ್ಯವಾಗಿ 15 ರಿಂದ 20 ವರ್ಷಗಳ ಅವಧಿಯನ್ನು ಒಂದು ಪೀಳಿಗೆ ಎಂದು ಪರಿಗಣಿಸಲಾಗುತ್ತದೆ. ಈ ವಿಂಗಡಣೆಗೆ ಆ ಕಾಲದಲ್ಲಿ ನಡೆದ ಪ್ರಮುಖ ಐತಿಹಾಸಿಕ ಘಟನೆಗಳು (ಯುದ್ಧಗಳು, ಆರ್ಥಿಕ ಕುಸಿತ), ತಾಂತ್ರಿಕ ಕ್ರಾಂತಿ (ಇಂಟರ್ನೆಟ್ ಉಗಮ) ಮತ್ತು ಸಾಮಾಜಿಕ ಬದಲಾವಣೆಗಳು ಆಧಾರವಾಗಿರುತ್ತವೆ.

ವಿವಿಧ ಪೀಳಿಗೆಗಳು ಮತ್ತು ಅವುಗಳ ವಿಶಿಷ್ಟ ಗುಣಲಕ್ಷಣಗಳು

ಇಂದಿನ ಸಮಾಜದಲ್ಲಿ ನಾವು ಕಾಣುವ ವಿವಿಧ ಪೀಳಿಗೆಗಳ ಪರಿಚಯ ಮತ್ತು ಅವುಗಳ ನಡುವಿನ ವ್ಯತ್ಯಾಸಗಳು ಇಲ್ಲಿವೆ:

1. **ಸೈಲೆಂಟ್ ಜನರೇಷನ್ (Silent Generation: 1928-1945):** ಇವರು ಎರಡನೇ ಮಹಾಯುದ್ಧದ ಸಮಯದಲ್ಲಿ ಜನಿಸಿದವರು. ಕಷ್ಟಪಟ್ಟು ದುಡಿಯುವುದು, ಶಿಸ್ತು ಮತ್ತು ವ್ಯವಸ್ಥೆಗೆ ಗೌರವ ಕೊಡುವುದು ಇವರ ಮುಖ್ಯ ಗುಣ. ಇವರು ಆರ್ಥಿಕ ಸಂಕಷ್ಟಗಳನ್ನು ಕಂಡವರಾದ್ದರಿಂದ ಉಳಿತಾಯಕ್ಕೆ ಹೆಚ್ಚಿನ ಒತ್ತು ನೀಡುತ್ತಾರೆ.
2. **ಬೇಬಿ ಬೂಮರ್ಸ್ (Baby Boomers: 1946?1964):** ಯುದ್ಧದ ನಂತರದ ಜನಸಂಖ್ಯಾ ಸ್ಫೋಟದ ಸಮಯದಲ್ಲಿ ಜನಿಸಿದವರು. ಇವರು ಸಾಂಪ್ರದಾಯಿಕ ಉದ್ಯೋಗ ನಂಬಿದವರು ಮತ್ತು ಕುಟುಂಬದ ಸ್ಥಿರತೆಗೆ ಪ್ರಾಮುಖ್ಯತೆ ನೀಡುತ್ತಾರೆ. ಸಂವಹನಕ್ಕಾಗಿ ಇವರು ಮುಖಾಮುಖಿ ಭೇಟಿ ಅಥವಾ ಫೋನ್ ಕರೆಗಳನ್ನು ಇಷ್ಟಪಡುತ್ತಾರೆ ಹಾಗೂ ದೂರದರ್ಶನ ಮತ್ತು ಪತ್ರಿಕೆಗಳಂತಹ ಸಾಂಪ್ರದಾಯಿಕ ಮಾಧ್ಯಮಗಳನ್ನು ಅವಲಂಬಿಸಿದ್ದಾರೆ.
3. **ಜನರೇಷನ್ ಎಕ್ಸ್ (Gen X: 1965-1980):** ಇವರು ಕಂಪ್ಯೂಟರ್ ಯುಗದ ಆರಂಭವನ್ನು ಕಂಡವರು. ಪೋಷಕರಿಬ್ಬರೂ ಕೆಲಸಕ್ಕೆ ಹೋಗುತ್ತಿದ್ದ ಕಾಲದಲ್ಲಿ ಬೆಳೆದ ಇವರು ಸ್ವತಂತ್ರವಾಗಿ ಕೆಲಸ ಮಾಡಲು ಇಷ್ಟಪಡುತ್ತಾರೆ ಮತ್ತು ಕೆಲಸ ಹಾಗೂ ವೈಯಕ್ತಿಕ ಜೀವನದ ನಡುವಿನ ಸಮತೋಲನವನ್ನು ಬಯಸುತ್ತಾರೆ. ಇಮೇಲ್ ಇವರ ಆದ್ಯತೆಯ ಸಂವಹನ ಮಾಧ್ಯಮವಾಗಿದೆ.




4. **ಮಿಲೆನಿಯಲ್ಸ್ ಅಥವಾ ಜನರೇಷನ್ ವೈ (Millennials/Gen Y: 1981?1996):** ಇಂಟರ್ನೆಟ್ ಮತ್ತು ಮೊಬೈಲ್ ಕ್ರಾಂತಿಯೊಂದಿಗೆ ಬೆಳೆದ ಇವರು ಹಳೆಯ ಸಂಪ್ರದಾಯ ಮತ್ತು ಹೊಸ ತಂತ್ರಜ್ಞಾನದ ನಡುವಿನ ಸೇತುವೆಯಿದ್ದಂತೆ. ಇವರು ಆತ್ಮವಿಶ್ವಾಸ ಮತ್ತು ವೈವಿಧ್ಯತೆಗೆ ಹೆಚ್ಚಿನ ಬೆಲೆ ಕೊಡುತ್ತಾರೆ. ಇವರು ಸಂವಹನಕ್ಕಾಗಿ ಎಸ್ಎಂಎಸ್ ಮತ್ತು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಾರೆ.
5. **ಜನರೇಷನ್ ಜೆಡ್ ಅಥವಾ ಜೆನ್-ಜಿ (Gen Z: 1997-2012):** ಇವರು 'ಡಿಜಿಟಲ್ ನೇಟಿವ್ಸ್'. ಇವರು ಹುಟ್ಟಿದಾಗಿನಿಂದಲೂ ಕೈಯಲ್ಲಿ ಸ್ಮಾರ್ಟ್‌ಫೋನ್ ನೋಡಿದವರು. ಸಾಮಾಜಿಕ ಪ್ರಜ್ಞೆ, ತಾಂತ್ರಿಕ ವೇಗ ಮತ್ತು ಸೃಜನಶೀಲತೆ ಇವರ ಶಕ್ತಿ. ಇವರು ವೀಡಿಯೋ ಸಂದೇಶಗಳು ಮತ್ತು ಇನ್‌ಸ್ಟಂಟ್ ಮೆಸೇಜಿಂಗ್ ಆಪ್‌ಗಳನ್ನು ಹೆಚ್ಚಾಗಿ ಬಳಸುತ್ತಾರೆ.
6. **ಜನರೇಷನ್ ಆಲ್ಫಾ (Generation Alpha: 2013-2025):** ಇವರು ಸಂಪೂರ್ಣವಾಗಿ 21ನೇ ಶತಮಾನದಲ್ಲಿ ಜನಿಸಿದ ಮೊದಲ ಪೀಳಿಗೆ. ಕೃತಕ ಬುದ್ಧಿಮತ್ತೆ (ಎಐ) ಮತ್ತು ವಾಯ್ಸ್ ಅಸಿಸ್ಟೆಂಟ್‌ಗಳೊಂದಿಗೆ ಬೆಳೆಯುತ್ತಿರುವ ಇವರು ಜಾಗತಿಕವಾಗಿ ಹೆಚ್ಚು ಕನೆಕ್ಟೆಡ್ ಆಗಿದ್ದಾರೆ. ಐಪ್ಯಾಡ್ ಮತ್ತು ಡಿಜಿಟಲ್ ಗೇಮಿಂಗ್ ಇವರ ಕಲಿಕೆಯ ಭಾಗವಾಗಿದೆ.
7. **ಜನರೇಷನ್ ಬೀಟಾ (Generation Beta: 2025?2039):** ಇವರು ಭವಿಷ್ಯದ ಪೀಳಿಗೆ. ಇವರು ರೋಬೋಟಿಕ್ಸ್, ಮುಂದುವರಿದ ಎಐ ಮತ್ತು ಬಾಹ್ಯಾಕಾಶ ಪ್ರಜ್ಞೆಯ ಯುಗದಲ್ಲಿ ಬದುಕಲಿದ್ದಾರೆ. ಸಂವಹನಕ್ಕಾಗಿ ಇವರು ಹೋಲೋಗ್ರಾಮ್‌ಗಳಂತಹ ಅತ್ಯಾಧುನಿಕ ತಂತ್ರಜ್ಞಾನ ಬಳಸುವ ಸಾಧ್ಯತೆಯಿದೆ.

ಜೆನ್-ಜಿ (Gen Z): ಶಕ್ತಿಗಳು, ದೌರ್ಬಲ್ಯಗಳು ಮತ್ತು ಜಾಗತಿಕ ಪ್ರಭಾವ

ಇಂದಿನ ಜಗತ್ತಿನ ಚರ್ಚೆಯ ಕೇಂದ್ರಬಿಂದುವಾಗಿರುವ ಜೆನ್-ಜಿ ಪೀಳಿಗೆಯು ತನ್ನದೇ ಆದ ವಿಶಿಷ್ಟ ಸವಾಲುಗಳನ್ನು ಎದುರಿಸುತ್ತಿದೆ.

* **ಶಕ್ತಿಗಳು:** ತಾಂತ್ರಿಕ ಪರಿಣಿತಿ ಇವರ ರಕ್ತದಲ್ಲೇ ಇದೆ. ಪರಿಸರ ಬದಲಾವಣೆ, ಮಾನವ ಹಕ್ಕುಗಳ ಬಗ್ಗೆ ಇವರು ಹಿಂದಿನ ಪೀಳಿಗೆಗಳಿಗಿಂತ ಹೆಚ್ಚು ಧ್ವನಿ ಎತ್ತುತ್ತಾರೆ. ಸೋಷಿಯಲ್ ಮೀಡಿಯಾ ಮೂಲಕ 'ಕಂಟೆಂಟ್ ಕ್ರಿಯೇಟರ್'ಗಳಾಗಿ ಹೊಸ ಉದ್ಯೋಗಗಳನ್ನು ಸೃಷ್ಟಿಸಿಕೊಂಡಿದ್ದಾರೆ.
* **ದೌರ್ಬಲ್ಯ ಮತ್ತು ಸವಾಲುಗಳು:** ಸದಾ ಡಿಜಿಟಲ್ ಜಗತ್ತಿನಲ್ಲಿ ಇರುವುದರಿಂದ ಇವರಲ್ಲಿ ಏಕಾಂಗಿತನ ಮತ್ತು ಆತಂಕ (Anxiety) ಹೆಚ್ಚಾಗಿದೆ. ರೀಲ್ಸ್ ಯುಗದಲ್ಲಿ ಇವರಿಗೆ ದೀರ್ಘಕಾಲ ಒಂದು ವಿಷಯದ ಮೇಲೆ ಗಮನ ಕೇಂದ್ರೀಕರಿಸುವುದು (Attention Span) ಕಷ್ಟವಾಗುತ್ತಿದೆ.
* **ಜಾಗತಿಕ ಪ್ರಭಾವ:** ಇವರು ಕೇವಲ ಸಂಬಳಕ್ಕಾಗಿ ಕೆಲಸ ಮಾಡುವುದಿಲ್ಲ, ಬದಲಾಗಿ ಕೆಲಸದ ನಮ್ಯತೆ (Flexibility) ಮತ್ತು ಮಾನಸಿಕ ಆರೋಗ್ಯಕ್ಕೆ ಬೆಲೆ ಕೊಡುತ್ತಾರೆ. ಇವರ 'ಇಕೋ-ಫ್ರೆಂಡ್ಲಿ' ಹಠದಿಂದಾಗಿ ಇಂದು ಉದ್ಯಮಗಳು ಪರಿಸರ ಪೂರಕವಾಗಿ ಬದಲಾಗುತ್ತಿವೆ.

ಜನರೇಷನ್ ಆಲ್ಫಾ (Generation Alpha): ಸವಾಲುಗಳು ಮತ್ತು ಸಾಮರ್ಥ್ಯ

ಜೆನ್-ಜಿ ನಂತರ ಬಂದ ಈ ಪೀಳಿಗೆಯನ್ನು 'ಐಪ್ಯಾಡ್ ಕಿಡ್ಸ್' ಎಂದೂ ಕರೆಯಲಾಗುತ್ತದೆ.

* **ಸಾಮರ್ಥ್ಯ:** ಇವರು ಎಐ ಟ್ಯೂಟರ್‌ಗಳ ಮೂಲಕ ಕಲಿಯುತ್ತಿದ್ದಾರೆ ಮತ್ತು ಸಣ್ಣ ವಯಸ್ಸಿನಲ್ಲೇ ಜಾಗತಿಕ ಸಂಸ್ಕೃತಿಗಳಿಗೆ ತೆರೆದುಕೊಂಡಿದ್ದಾರೆ.
* **ಸವಾಲುಗಳು:** ಇವರ ಅತಿ ದೊಡ್ಡ ಸಮಸ್ಯೆ 'ದೈಹಿಕ ಚಟುವಟಿಕೆಯ ಕೊರತೆ'. ಕೋವಿಡ್-19 ಕಾಲದಲ್ಲಿ ಇವರ ಶಾಲಾ ಜೀವನ ಆರಂಭವಾದ್ದರಿಂದ, ಇವರ ಸಾಮಾಜಿಕ ಕೌಶಲಗಳು (Social Skills) ತುಸು ಕಡಿಮೆ ಇರಬಹುದು ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

**ಆರ್ಥಿಕ, ಶಿಕ್ಷಣ ಮತ್ತು ಉದ್ಯೋಗ ಸಂಸ್ಕೃತಿಯಲ್ಲಿನ ಸ್ಥಿತ್ಯಂತರ**

* **ಆರ್ಥಿಕತೆ:** ಹಳೆಯ ಪೀಳಿಗೆಯು ಆಸ್ತಿ ಮತ್ತು ಚಿನ್ನದ ಮೇಲೆ ಮಹಾಸಂಗಮ ಮತ್ತು ಹೂಡಿಕೆ ಮಾಡಿದರೆ, ಹೊಸ ಪೀಳಿಗೆಯು 'ಅನುಭವ' ಮತ್ತು ಡಿಜಿಟಲ್ ಹೂಡಿಕೆಗಳತ್ತ (Mutual Funds, Crypto) ಆಕರ್ಷಿತರಾಗುತ್ತಿದ್ದಾರೆ.
* **ಶಿಕ್ಷಣ:** ಸಾಂಪ್ರದಾಯಿಕ ಪದವಿಗಿಂತ 'ಕೌಶಲ'ಕ್ಕೆ (Skill) ಇಂದು ಬೆಲೆ ಸಿಗುತ್ತಿದೆ. ಯೂಟ್ಯೂಬ್ ಮತ್ತು ಆನ್‌ಲೈನ್ ಕೋರ್ಸ್‌ಗಳು ಕಲಿಕೆಯ ಮಾಧ್ಯಮಗಳಾಗಿವೆ.
* ಮಾನಸಿಕ ಆರೋಗ್ಯ: ಹಿಂದೆ ಮಾನಸಿಕ ಒತ್ತಡವನ್ನು ನಿರ್ಲಕ್ಷಿಸಲಾಗುತ್ತಿತ್ತು. ಆದರೆ ಜೆನ್-ಜಿ ಮಾನಸಿಕ ಆರೋಗ್ಯದ ಬಗ್ಗೆ ಇರುವ ಅಳುಕನ್ನು (Stigma) ಹೋಗಲಾಡಿಸುತ್ತಿದ್ದಾರೆ. ಥೆರಪಿ ಮತ್ತು ಮಾನಸಿಕ ವಿಶ್ರಾಂತಿಗೆ ಇವರು ಒತ್ತು ನೀಡುತ್ತಿದ್ದಾರೆ.

1. **ಆರ್ಥಿಕ ದೃಷ್ಟಿಕೋನ:** ಖರ್ಚು ಮತ್ತು ಉಳಿತಾಯದ ಹಾದಿ

ಹಿಂದಿನ ಪೀಳಿಗೆಗಳಿಗೆ ಹೋಲಿಸಿದರೆ ಜೆನ್-ಜಿ ಮತ್ತು ಮಿಲೆನಿಯಲ್ಸ್ ಅವರ ಆರ್ಥಿಕ ಆದ್ಯತೆಗಳು ಸಂಪೂರ್ಣವಾಗಿ ಭಿನ್ನವಾಗಿವೆ.

* **ಬೂಮರ್ಸ್ ಮತ್ತು ಜೆನ್-ಎಕ್ಸ್:** ಇವರು ಆಸ್ತಿ ಖರೀದಿ, ಚಿನ್ನ ಮತ್ತು ಸ್ಥಿರ ಠೇವಣಿಗಳಲ್ಲಿ (ಈಆ) ನಂಬಿಕೆ ಇಟ್ಟವರು. "ಮನೆ ಮಂದಿಗೆಲ್ಲ ಒಂದು ಸೂರು" ಎಂಬುದು ಇವರ ಜೀವನದ ಗುರಿಯಾಗಿತ್ತು.
* **ಜೆನ್-ಜಿ ಮತ್ತು ಆಲ್ಫಾ:** ಇವರು 'ಅನುಭವ'ಕ್ಕೆ ಹಣ ಖರ್ಚು ಮಾಡುತ್ತಾರೆ. ಪ್ರವಾಸ, ಹೊಸ ತಂತ್ರಜ್ಞಾನ ಮತ್ತು 'ಸಬ್‌ಸ್ಕ್ರಿಪ್ಷನ್' (ಓಜಣಜಿಟುಥ, ಖಠಿಃಣುಜಿಥಿ) ಮಾದರಿಯ ಜೀವನ ಇವರದು. ಇವರು ಶೇರು ಮಾರುಕಟ್ಟೆ ಮತ್ತು ಕ್ರಿಪ್ಟೋಕರೆನ್ಸಿಗಳಂತಹ ಆಧುನಿಕ ಹೂಡಿಕೆಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

2. **ಶಿಕ್ಷಣ ಕ್ರಾಂತಿ:** ಡಿಜಿಟಲ್ ಕಲಿಕೆಯ ಯುಗ

ಹಿಂದಿನ ಪೀಳಿಗೆಗೆ 'ಗುರು-ಶಿಷ್ಯ' ಪರಂಪರೆ ಮತ್ತು ತರಗತಿ ಕಲಿಕೆ ಮಾತ್ರವೇ ದಾರಿಯಾಗಿತ್ತು.

* ಜೆನ್-ಆಲ್ಫಾ ಪ್ರಭಾವ: ಆಲ್ಫಾ ಪೀಳಿಗೆಯ ಮಕ್ಕಳಿಗೆ ಯೂಟ್ಯೂಬ್ ಮತ್ತು ಎಐ ತರಬೇತುದಾರರು (AI Tutors) ಸಹಜವಾಗಿದ್ದಾರೆ. ಇವರು ಪದವಿಗಿಂತಲೂ 'ಕೌಶಲ'ಕ್ಕೆ (Skill) ಹೆಚ್ಚು ಒತ್ತು ನೀಡುತ್ತಿದ್ದಾರೆ. ಇದು ಭವಿಷ್ಯದಲ್ಲಿ ಸಾಂಪ್ರದಾಯಿಕ ಕಾಲೇಜುಗಳ ಅಸ್ತಿತ್ವವನ್ನೇ ಪ್ರಶ್ನಿಸುವಂತಿದೆ.

3. ಮಾನಸಿಕ ಆರೋಗ್ಯದ ಜಾಗೃತಿ (Mental Health Awareness)


* ಹಳೆಯ ಪೀಳಿಗೆಯಲ್ಲಿ ಮಾನಸಿಕ ಒತ್ತಡವನ್ನು "ಸುಮ್ಮನೆ ಇರುವ ಹಠ" ಅಥವಾ "ದುರ್ಬಲತೆ" ಎಂದು ಕರೆಯಲಾಗುತ್ತಿತ್ತು.
* ಆದರೆ ಜೆನ್-ಜಿ ಮಾನಸಿಕ ಆರೋಗ್ಯದ ಬಗ್ಗೆ ಇರುವ ಅಳುಕನ್ನು (Stigma) ಹೋಗಲಾಡಿಸುತ್ತಿದ್ದಾರೆ. ಥೆರಪಿ ತೆಗೆದುಕೊಳ್ಳುವುದು ಅಥವಾ ಮಾನಸಿಕ ವಿಶ್ರಾಂತಿಗಾಗಿ ರಜೆ ತೆಗೆದುಕೊಳ್ಳುವುದು (Mental health day-off) ಇವರ ಕಾಲದಲ್ಲಿ ಸಾಮಾನ್ಯವಾಗುತ್ತಿದೆ.

4. ಭವಿಷ್ಯದ ಕೆಲಸದ ಸ್ಥಳ: 'ರಿಮೋಟ್' ಸಂಸ್ಕೃತಿ

ಜೆನ್-ಜಿ ಮತ್ತು ಮುಂಬರುವ ಬೀಟಾ ಪೀಳಿಗೆಯು "ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ" ಕಚೇರಿಯಲ್ಲಿ ಕೂರುವ ಪದ್ಧತಿಯನ್ನು ಬದಲಿಸುತ್ತಿದ್ದಾರೆ.

* ಪ್ರಭಾವ: 'ವರ್ಕ್ ಫ್ರಮ್ ಹೋಮ್' ಅಥವಾ 'ಹೈಬ್ರಿಡ್' ಕೆಲಸದ ಮಾದರಿಗಳು ಇವರಿಂದಾಗಿ ಜನಪ್ರಿಯವಾಗುತ್ತಿವೆ. ಇವರು ಕೆಲಸಕ್ಕಿಂತ ಹೆಚ್ಚಾಗಿ "ಜೀವನದ ಗುಣಮಟ್ಟ"ಕ್ಕೆ (Quality of life) ಬೆಲೆ ಕೊಡುತ್ತಿದ್ದಾರೆ.


"**ಜಾಗತಿಕ ಗ್ರಾಮದ ನಿವಾಸಿಗಳು:**" ಇಂದಿನ ಕಿರಿಯ ಪೀಳಿಗೆಗಳು ಭೌಗೋಳಿಕ ಗಡಿಗಳನ್ನು ಮೀರಿ ಯೋಚಿಸುತ್ತಿವೆ. ಒಬ್ಬ ಜೆನ್-ಜಿ ಯುವಕ ಬೆಂಗಳೂರಿನಲ್ಲಿ ಕುಳಿತು ಅಮೆರಿಕದ ಕಂಪನಿಗೆ ಕೆಲಸ ಮಾಡುತ್ತಾ, ಕೊರಿಯಾದ ಸಂಗೀತವನ್ನು ಕೇಳುತ್ತಾ, ಆಫ್ರಿಕಾದ ಸಾಮಾಜಿಕ ಸಮಸ್ಯೆಯ ಬಗ್ಗೆ ಟ್ವೀಟ್ ಮಾಡುತ್ತಾನೆ. ಈ ಜಾಗತಿಕ ಸಂಪರ್ಕವು ಪ್ರಪಂಚವನ್ನು ಒಂದು 'ಚಿಕ್ಕ ಗ್ರಾಮ'ವನ್ನಾಗಿ ಮಾಡಿದೆ. ಆದರೆ, ಇದೇ ಸಮಯದಲ್ಲಿ ತಮ್ಮ ಪಕ್ಕದ ಮನೆಯವರ ಜೊತೆಗಿನ ಸಂಬಂಧಗಳು ಕ್ಷೀಣಿಸುತ್ತಿರುವುದು ಒಂದು ವಿಪರ್ಯಾಸವೂ ಹೌದು.




**ಸಂಘರ್ಷ ಮತ್ತು ಸಮನ್ವಯದ ಹಾದಿ: ಮುಂದಿನ ದಾರಿ**

ಹಿರಿಯರು ಮತ್ತು ಕಿರಿಯರ ನಡುವಿನ ಸಂಘರ್ಷಕ್ಕೆ ಮುಖ್ಯ ಕಾರಣ ಸಂವಹನದ ಕೊರತೆ. ಹಿರಿಯ ಪೀಳಿಗೆಯವರು ಹೊಂದಿರುವ 'ಅನುಭವದ ಸಾರ' ಮತ್ತು ಹೊಸ ಪೀಳಿಗೆಯ 'ತಾಂತ್ರಿಕ ವೇಗ' ಎರಡೂ ಸೇರಿದರೆ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ.

ಪೀಳಿಗೆಗಳ ನಡುವಿನ ಬದಲಾವಣೆ ಪ್ರಕೃತಿಯ ನಿಯಮ. ಪ್ರತಿಯೊಂದು ಪೀಳಿಗೆಯೂ ತನ್ನದೇ ಆದ ಶಕ್ತಿ ಮತ್ತು ದೌರ್ಬಲ್ಯಗಳನ್ನು ಹೊಂದಿದೆ. ಹಿರಿಯರು ಬದಲಾಗುತ್ತಿರುವ ತಂತ್ರಜ್ಞಾನವನ್ನು ಗೌರವಿಸಬೇಕು ಮತ್ತು ಯುವಜನತೆ ಹಿರಿಯರ ಅನುಭವದ ಮಹತ್ವವನ್ನು ಅರಿಯಬೇಕು. ಪರಸ್ಪರ ಗೌರವ ಮತ್ತು ಮುಕ್ತ ಸಂವಹನ ಮಾತ್ರ ಈ ಪೀಳಿಗೆಗಳ ನಡುವಿನ ಕಂದಕವನ್ನು ಮುಚ್ಚಿ ಸುಂದರ ಸಮಾಜ ನಿರ್ಮಿಸಲು ಸಾಧ್ಯ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,

## ಸಂಕ್ಷಿಪ್ತ ಸುದ್ದಿ

### ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಹಾಸನ:** ಹೋಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ.ವಿ.ವಿ ಕೇಂದ್ರ. ಮಳಲಿ ಇಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ನಿರ್ವಹಿಸಬೇಕಾಗಿರುವುದರಿಂದ ಮಳಲಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಮಳಲಿ, ದುವ್ವಗೆರೆ, ತೆರಣ್ಯ, ಮಾವನ್ರರು, ಲಕ್ಷ್ಮೀಪುರ, ಜಾಗರಹಳ್ಳಿ, ದೇವಿಹಳ್ಳಿ, ಸಂತೆಕೊಪ್ಪಲು, ನಾಗನಹಳ್ಳಿ:ಇ, ಮರ್ಕುಲಿ, ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಫೆ.11 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಕಾರ್ಯಚರಣೆಗಳ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಫೆ.12 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಹಾಸನ:** ತಾಲ್ಲೂಕಿನ ದುದ್ದ 1*100 ಎಂ.ವಿ.ಎ 220/11ಕೆವಿ ಮತ್ತು 1*100 ಎಂ.ವಿ.ಎ ವಿದ್ಯತ್ ಉಪಕೇಂದ್ರ ಸ್ಥಾಪನೆ ಹಾಗೂ 110/11ಕೆವಿ ಗಂಡಸಿ ಮತ್ತು 66/11 ಕೆ.ವಿ ದುದ್ದ ಮತ್ತು 66/11 ಕೆ.ವಿ ಸಾತೇನಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ ಟರ್ಮಿನಲ್ ಬೇಗಳನ್ನ ಹಾಗೂ 220 ಕೆವಿ 110.2 ಮತ್ತು 66ಕೆವಿ ಡಿ.ಸಿ & ಎಸ್.ಸಿ ಪ್ರಸರಣ ಇರುವ ಮಾರ್ಗಗಳ ನಿರ್ಮಾಣ ಮಾರ್ಗಕ್ಕೆ ಸಂಬಂಧಿಸಿದಂತೆ 66/11 ಕೆ.ವಿ ಸಾತೇನಹಳ್ಳಿ ವಿದ್ಯುತ್ ಉಪಕೇಂದ್ರದಲ್ಲಿ 2 ಸಂಖ್ಯೆಯ ಟರ್ಮಿನಲ್ ಚಾಲನೆಗೊಳಿಸುವ ಕಾಮಗಾರಿಯನ್ನ ನಿವ್ವಿಸಲು ಫೆ.11 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 66/11 ಕೆ.ವಿ ಸಾತೇನಹಳ್ಳಿ ಮತ್ತು 66/11 ಕೆ.ವಿ ಕುಂದೂರುವ್ಮಠ ವಿದ್ಯುತ್ ವಿತರಣಾ ಕೇಂದ್ರಗಳಿಂದ ವಿದ್ಯುತ್ ಸರಬಾಜಾಗುವ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಮತ್ತು ಗ್ರಾಹಕರು ಸಹಕರಿಸುವಂತೆ ಕರ್ನಾಟಕ ವಿದ್ಯತ್ ಪ್ರಸರಣ ನಿಗಮದ ಯೋಜನೆಗಳ ವಿಭಾಗದ'ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪ್ರವೇಶಾತಿ ಪ್ರಾರಂಭ

**ಹಾಸನ:** 2025-26 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ವರ್ಷದ ಬಿ.ಎ/ಬಿ.ಕಾಂ, ಬಿ.ಎಸ್ಸಿ, ಬಿ.ಸಿ.ಎ, ಬಿ.ಬಿ.ಎ, ಬಿ.ಎಲ್.ಐ.ಸಿ, B.S.W,ಎಂ.ಎ/ಎಂ.ಕಾಂ, ಎಂ.ಎಸ್ಸಿ – ಕೋರ್ಸ್ ಗಳಿಗೆ ಪ್ರವೇಶಾತಿಯು ಪ್ರಾರಂಭವಾಗಿದೆ.

ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರುವ ಮಹಿಳಾ ವಿದ್ಯಾರ್ಥಿನಿಯರಿಗೆ ಬೋಧನಾ ಶುಲ್ಕದಲ್ಲಿ ಶೇ 10% ರಿಯಾಯಿತಿ ನೀಡಲಾಗುತ್ತದೆ. ಡಿಫೆನ್ಸ್ ಹಾಗೂ ಎಕ್ಸ್ ಸರ್ವೀಸ್‌ಮನ್ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಶೇ10% ರಿಯಾಯಿತಿ ನೀಡಲಾಗುತ್ತದೆ. ಬ್ಯಾಡ್ಜ್ ಹೊಂದಿರುವ ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಮಕ್ಕಳಿಗೆ ಹಾಗೂ ಸಾರಿಗೆ ಇಲಾಖೆ ನೌಕರರಿಗೆ ಶೇ 10% ರಿಯಾಯಿತಿ ನೀಡಲಾಗುತ್ತದೆ. ದೃಷ್ಠಿ ಹೀನ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾತಿ ನೀಡಲಾಗುವುದು. ಖ.ಖಿ.ಖ ಹಾಗು ಆಉಟಟಂಟಚಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಥಮ ಬಿ.ಎ/ಬಿ.ಕಾಂ ಪ್ರವೇಶಾತಿಗೆ ಅವಕಾಶವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಿದ್ದಾರ್ಥ್ ಬಿ.ಎನ್, ಪ್ರಾದೇಶಿಕ ನಿರ್ದೇಶಕರು, ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರ, ಅರಸೀಕೆರೆ ರಸ್ತೆ, ಬಿ.ಟಿ. ಕೊಪ್ಪಲು ಹತ್ತಿರ, ದೊಡ್ಡಪುರ ಅಂಚೆ, ಎಸ್.ಎಂ. ಕೃಷ್ಣನಗರ, ಹಾಸನ ಅಥವಾ ದೂರವಾಣಿ ಸಂಖ್ಯೆ 08172-262726, 8618929376, 9035378321 ,9739402474, 7760494941, 7760546404, 9844242644, 9900787174, 8453378713, 7760014047, 7022887201 ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ.

### ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಹಾಸನ:** ಹೋಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ.ವಿ.ವಿ ಕೇಂದ್ರ. ನಗರ್ತಿ, ದೊಡ್ಡಕಾಡನೂರು ಮತ್ತು ದೊಡ್ಡಹಳ್ಳಿಯಲ್ಲಿ 4ನೇ ತ್ರೈ ಮಾಸಿಕ ನಿರ್ವಹಣಾ ಕಾರ್ಯವನ್ನ ನಿರ್ವಹಿಸಬೇಕಾಗಿರುವುದರಿಂದ ದೊಡ್ಡಕಾಡನೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ, ದೊಡ್ಡಕಾಡನೂರು, ಸಿ.ಹಿಂದಲಹಳ್ಳಿ, ಹಿರಿತಳಾಲು, ಬಾಚಹಳ್ಳಿ, ಕಬ್ಬೂರು, ಕಲ್ಲೊಡೆಬೋರೆಕಾವಲ್, ದಾಳಗೌಡನಹಳ್ಳಿ, ನಗರನಹಳ್ಳಿ, ರಂಗೇನಹಳ್ಳಿ, ಮರಹಳ್ಳಿ, ದೊಡ್ಡಹಳ್ಳಿ, ಸಂತೆಮೈದಾನ, ರಾಗಿಹಳ್ಳಿಕಾವಲು, ಚೌಡಸಮುದ್ರ, ಬೀಕನಹಳ್ಳಿ, ಅಲೇನಹಳ್ಳಿ, ಮುಂಜನಹಳ್ಳಿ, ಗುಳವಿನಅತ್ತಿಗುಪ್ಪೆ, ಅರೆಕೆರೆ, ಯಡೆಗೌಡನಹಳ್ಳಿ, ಮತ್ತು ಮೂಡಲಹಿಪ್ಪೆ ಕಾಸಿಪಾ ಶಾಖಾ ವ್ಯಾಪ್ತಿಯ ಗ್ರಾಮಗಳಾದ ದೇವರಮುದ್ದೇನಹಳ್ಳಿ, ಶ್ರವಣೂರು, ಹಾವಿನಮಾರಹಳ್ಳಿ, ದೇವಿಪುರ, ಕೋಡಿಹಳ್ಳಿ, ಕಡವಿನ ಬಾಚಹಳ್ಳಿ, ನಗರ್ತಿ ಹಾಗು ಸುತ್ತಮುತ್ತಲಿನ ಗ್ರಾಮಗಳಲ್ಲಿ ಫೆ12 ರಂದು ಸಮಯ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಂಡ್ಯ ಜಿಲ್ಲೆಯು ಇ-ಪೌತಿ ಖಾತಾ ಆಂದೋಲನ: ರಾಜ್ಯಕ್ಕೆ ಪ್ರಥಮ

## ಪೌತಿ ಖಾತೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗ್ರಾಮ ಅಡಳಿತಾಧಿಕಾರಿಗಳಿಗೆ ಅಭಿನಂದನೆ

**ಮಂಡ್ಯ :** ಪೌತಿ ಖಾತೆ ಪ್ರಕ್ರಿಯೆಯನ್ನು ಮಂಡ್ ಜಿಲ್ಲೆಯು ಈ ಪೌತಿ ಖಾತೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದು ಈ ಪೌತಿ ಖಾತೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ 35 ಗ್ರಾಮ ಆಡಳಿತಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಾದ ಡಾ ಕುಮಾರ ಅವರು ಮೆಚ್ಚುಗೆ ವ್ಯಕ್ತಪಡಿಸಿ ಗ್ರಾಮ ಆಡಳಿತಾಧಿಕಾರಿಗಳಿಗೆ ಅಭಿನಂದನಾ ಪತ್ರ ನೀಡಿದರು.



ಜಮೀನಿನ ಪೌತಿ ಖಾತೆ ಪ್ರಕ್ರಿಯೆಯನ್ನು ತಾವು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸಿ ನಿಗದಿತ ಸಮಯದಲ್ಲಿ ಕೆಲಸ ಮಾಡಿದ ಗ್ರಾಮ ಆಡಳಿತಾಧಿಕಾರಿಗಳಿಗೆ ಜನಪರ ಸೇವೆ ಮತ್ತು ಕರ್ತವ್ಯ ನಿಷ್ಠೆಗೆಯ ಶ್ಲಾಘನೆ ವ್ಯಕ್ತಪಡಿಸಿದರು.

**ಇ-ಪೌತಿಖಾತೆ ಆಂದೋಲನ ತ್ವರಿತಗೊಳಿಸಿ:** ಮೃತರ ಹೆಸರಿನಲ್ಲಿರುವ ಜಮೀನುಗಳನ್ನು ವಾರಸುದಾರರಿಗೆ ಖಾತೆ ಮಾಡಿಕೊಡುವ ?ಇ?ಪೌತಿ? ಖಾತೆ ಆಂದೋಲನ ತ್ವರಿತ ಗತಿಯಲ್ಲಿ ಸಾಗಬೇಕು ಎಂದು ಅವರು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಸರ್ಕಾರದ ಸೂಚನೆಗಳನ್ನು ಪಾಲಿಸಬೇಕು. ಜನರನ್ನು ಕಚೇರಿಗಳಿಗೆ ಅಲೆದಾಡಿಸುವ ಪ್ರವೃತ್ತಿ ಸರಿಯಲ್ಲ. ಮುಂದಿನ ದಿನಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಖಾತೆ ಮಾಡುವಾಗ ತಾಂತ್ರಿಕ ಸಮಸ್ಯೆ ಎದುರಾದರೆ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕು. ಕೆಲಸದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳು ಶಿಸ್ತು ಕ್ರಮ ಕೈಗೊಳ್ಳಲಾಗುವುದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಂಡ್ಯ ಉಪ ವಿಭಾಗಧಿಕಾರಿಗಳಾದ ಎಂ. ಶಿವಮೂರ್ತಿ, ಪಾಂಡವಪುರ ಉಪ ವಿಭಾಗಧಿಕಾರಿ ಶ್ರೀನಿವಾಸ್ ಹಾಗೂ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಉಪಸ್ಥಿತರಿದ್ದರು.

## ಅಂತರ್ಜಾಲದ ಬಳಕೆ ಕಡಿಮೆ ಮಾಡಿ-ಮಕ್ಕಳಿಗೆ ಅರಿವು ಮೂಡಿಸಿ | ಅಂತರ್ಜಾಲ ಬಳಕೆಯಿಂದ ಒತ್ತಡ ಹೆಚ್ಚುತ್ತಿದೆ

# ಕಚೇರಿ ಮಾಹಿತಿ ಜಾಲತಾಣಗಳಲ್ಲಿ ಹಂಚಿ ಕೊಳ್ಳಬೇಡಿ

**ಮಂಡ್ಯ:** ಪ್ರಸ್ತುತ ಕಾಲದಲ್ಲಿ ಮಕ್ಕಳು ಅಂತರ್ಜಾಲ ಬಳಕೆಯನ್ನು ಹೆಚ್ಚು ಮಾಡುತ್ತಿದ್ದಾರೆ, ಸಾಮಾಜಿಕ ಜಾಲತಾಣಗಳಲ್ಲಿ ಮುಳುಗಿ ಹೋಗಿದ್ದಾರೆ ಇದರಿಂದ ಮಕ್ಕಳ ಮನಸ್ಥಿತಿ ಕುಗ್ಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ ಅವರು ಹೇಳಿದರು.

ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಮಂಗಳವಾರ "ಸುರಕ್ಷತ ಅಂತರ್ಜಲ ದಿನ"ದ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಾಗಾರ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ನಮ್ಮ ಸಮಯವನ್ನು ಬಹುತೇಕ ಟಿ.ವಿ, ಮೊಬೈಲ್ ಗಳಲ್ಲಿಯೆ ಕಳೆಯುತ್ತಿದ್ದೇವೆ ಸಮಾಜ ಜವಾಬ್ದಾರಿಯನ್ನು ಮರೆತಿದ್ದೇವೆ ಎಂದು ತಿಳಿಸಿದರು.

ಅತಿಯಾದ ಮೊಬೈಲ್ ಬಳಕೆಯಿಂದ ಮೆದುಳು ಹಾಗೂ ಹೃದಯ ಸಂಬಂಧಿ ಕಾಯಿಲೆಗಳು ಮನುಷ್ಯರಲ್ಲಿ ಹೆಚ್ಚಾಗುತ್ತಿವೆ. 20 ವರ್ಷಗಳ ಹಿಂದೆ ಜನರು ತಮ್ಮ ಕುಟುಂಬ ಸ್ನೇಹಿತರೊಂದಿಗೆ ಸಮಯ ಕಳೆದು ಕೆಲಸದ ಒತ್ತಡವನ್ನು ನಿವಾರಣೆ ಮಾಡಿಕೊಳ್ಳುತ್ತಿದ್ದರು ಹಾಗೂ ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುತ್ತಿದ್ದರು ಆದರೆ ಇಂದು ಅತಿಯಾದ ಮೊಬೈಲ್ ಬಳಕೆಯಿಂದ ಎಲ್ಲರ ಬದುಕಿನಲ್ಲಿಯೂ ಒತ್ತಡ ಹೆಚ್ಚಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.




ಪ್ರಸ್ತುತ ತಂತ್ರಜ್ಞಾನವನ್ನು ಬಳಸಿ ಯಾವುದೇ ಪ್ರಶ್ನೆಗಳಿಗಾದರೂ ಉತ್ತರವನ್ನು ಕ್ಷಣಾರ್ಧದಲ್ಲಿಯೇ ಕಂಡುಕೊಳ್ಳಬಹುದು. ಅಂತರ್ಜಾಲವನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಹೆಚ್ಚಿನ ಸಮಯ ಅಂತರ್ಜಾಲದಲ್ಲಿ ಕಳೆಯುವುದು ಒಳ್ಳೆಯದಲ್ಲ ಸಾಧ್ಯವಾದಷ್ಟು ಅಂತರ್ಜಾಲದಿಂದ ದೂರ ಉಳಿಯಬೇಕು. ಸಾರ್ವಜನಿಕರು ಇದರ ಕುರಿತಾಗಿ ಅರಿತುಕೊಳ್ಳಬೇಕು ಎಂದರು.

ಕಚೇರಿ ಕೆಲಸಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯವಾಗಿ ಹಂಚಿಕೊಳ್ಳಬೇಡಿ. ಸೈಬರ್ ಗಳ್ಳರು ನಿಮ್ಮ ಸಂಪೂರ್ಣ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳ ಮೂಲಕ ಪಡೆದು ನಿಮ್ಮ ಹಿಂದೆ ಬೀಳುತ್ತಾರೆ ಆದ್ದರಿಂದ ಸಾಮಾಜಿಕ ಜಾಲತಾಣಗಳಿಂದ ದೂರ ಉಳಿಯಿರಿ. ಸೈಬರ್ ಕಳ್ಳರಿಂದ ಯಾವುದೇ ಕರೆ ಬಂದರೂ ಸಹ ಧೃತಿಗೆಡದೆ ಸೈಬರ್ ಸಹಾಯವಾಣಿಗೆ ಕರೆ ಮಾಡಿ ಪ್ರಕರಣ ದಾಖಲಿಸಿ ಸೈಬರ್ ವಂಚನೆಯಿಂದ ದೂರ ಉಳಿಯಿರಿ ಹಾಗೂ ಇದರ ಕುರಿತಾಗಿ ನಿಮ್ಮ ಒಡನಾಡಿಗಳಿಗೂ ಅರಿವು ಮೂಡಿಸಿ ಎಂದು ಹೇಳಿದರು.

ರಾಷ್ಟ್ರೀಯ ಮಾಹಿತಿ ಕೇಂದ್ರದ ಹಿರಿಯ ತಾಂತ್ರಿಕ ನಿರ್ದೇಶಕರಾದ ಸಂಗೀತ ಮಂಜುನಾಥ್ ಅವರು ಮಾತನಾಡಿ ಇವತ್ತಿನ ಮಕ್ಕಳು ಸಾಮಾಜಿಕ ಜಾಲತಾಣಗಳಾದ ಇನ್ಸ್ಟಾಗ್ರಾಮ್ ಫೇಸ್ಬುಕ್ ಗಳಲ್ಲಿ ಮುಳುಗಿ ಹೋಗಿದ್ದಾರೆ. ಇದರಿಂದ ಮಕ್ಕಳಲ್ಲಿ ಆರೋಗ್ಯ ಸಮಸ್ಯೆ ಮಾನಸಿಕ ಸಮಸ್ಯೆ ಹೆಚ್ಚಾಗಿ ಉದ್ಭವಿಸುತ್ತಿದೆ. ಮಕ್ಕಳು ಹಿರಿಯರೊಂದಿಗೆ ಸಮಯ ಕಳೆಯುವುದನ್ನು ಮರೆತು ಹೋಗಿದ್ದಾರೆ ಎಂದು ಹೇಳಿದರು.

ಜನರು ಸಾಮಾಜಿಕ ಜಾಲತಾಣ ವೈಯಕ್ತಿಕ ಫೋಟೋಗಳ ಹಂಚಿಕೆಯನ್ನು ಕಡಿಮೆ ಮಾಡಬೇಕು ಇದರಿಂದ ಸೈಬರ್ ಕಳ್ಳರು ಡೀಪ್ ಫೇಕ್ ನಂತಹ ಅಪಾಯ ಉಂಟಾಗುತ್ತದೆ. ಅಂತರ್ಜಾಲದಲ್ಲಿ ಫ್ರಾಡ್ ಆಗುವ ಸಾಧ್ಯತೆ ಇರುತ್ತದೆ ಸುಳ್ಳು ಮಾಹಿತಿಯನ್ನು ಹರಿಬಿಡಲಾಗುತ್ತಿದೆ ಜನರು ಇದರ ಕುರಿತಾಗಿ ಅರಿಯ ಬೇಕು ಆಗ ಮಾತ್ರ ಆನ್ ಲೈನ್ ವಂಚನೆಯಿಂದ ಬಚಾವಾಗಬಹುದು ಎಂದು ತಿಳಿಸಿದರು.

ಜಿಲ್ಲಾ ರಾಷ್ಟ್ರೀಯ ಮಾಹಿತಿ ಕೇಂದ್ರದ ಕೆ.ವಿ.ಕೆ ಅಪ್ಪರಾವ್, ರಾಷ್ಟ್ರೀಯ ಮಾಹಿತಿ ಕೇಂದ್ರದ ಸಿಬ್ಬಂದಿ ವರ್ಗ ಹಾಗೂ ಜಿಲ್ಲಾ ಪಂಚಾಯತ್ ಸರ್ಕಾರಿ ನೌಕರರು ಉಪಸ್ಥಿತರಿದ್ದರು.

## ಇಂದು ಪೂರ್ವಭಾವಿ ಸಭೆ

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.15 ರಂದು ಸಂತ ಸೇವಾಲಾಲ್ ಜಯಂತಿ, ಫೆ.19ರಂದು ಶ್ರೀಛತ್ರಪತಿ ಶಿವಾಜಿ ಜಯಂತಿ, ಫೆ.20ರಂದು ಸಂತಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮ ಆಚರಣೆ ಸಂಬಂಧ ಫೆ.11ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಜಯಂತಿಯ ಪೂರ್ವಭಾವಿ ಸಭೆಯನ್ನು ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ:409ರಲ್ಲಿ ಆಯೋಜಿಸಲಾಗಿದೆ.

ಜಯಂತಿ ಆಚರಣೆಯ ರೂಪುರೇಷೆಗಳ ಕುರಿತು ಚರ್ಚಿಸಲು ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಮುಖಂಡರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಪೂರ್ವಭಾವಿ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಇರಲಿ: ದೊಡ್ಡಸ್ವಾಮೇಗೌಡ



**ಕೆ.ಆರ್.ನಗರ:** ವಿದ್ಯಾ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಪ್ರಮುಖ ಆದ್ಯತೆಯನ್ನು ನೀಡಬೇಕೆಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಲಕ್ಷ್ಮೀಪುರ ಗ್ರಾಮದಲ್ಲಿನ ಅಮರಜ್ಯೋತಿ ವಿದ್ಯಾ ಸಂಸ್ಥೆಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಾಲೆಯಲ್ಲಿ ಶಿಕ್ಷಕರುಗಳು ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳ ಬಗ್ಗೆಯೂ ಕಲಿಸುವ ಕೆಲಸ ಮಾಡಬೇಕು. ಉತ್ತಮ ಸಂಸ್ಕಾರವನ್ನು ಕಲಿಸುವ ಮೂಲಕ ಸತ್ಪ್ರಜೆಗಳಾಗಿ ರೂಪಿಸಿ ಈ ನಾಡಿಗೆ ನೀಡಬೇಕೆಂದರು.

ಗ್ರಾಮಾಂತರ ಪ್ರದೇಶಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಹಲವು ಪ್ರತಿಭೆಗಳು ಇದ್ದರೂ ಕೂಡ ಅವರುಗಳಿಗೆ ಒಳ್ಳೆಯ ವೇದಿಕೆ ದೊರೆಯದೆ ಪ್ರತಿಭಾವಂತರಿಗೆ ಅವಕಾಶಗಳು ದೊರೆಯದಂತಾಗುತ್ತದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಶಿಕ್ಷಕರುಗಳು ಹಾಗೂ ಪೋಷಕರುಗಳು ಗುರುತಿಸಿ ಅದನ್ನು ಪ್ರೋತ್ಸಾಹಿಸುವ ಮೂಲಕ ಆ ಕ್ಷೇತ್ರಗಳಲ್ಲಿ ಮಕ್ಕಳು ಉತ್ತಮ ಸಾಧನೆ ಮಾಡಲು ಶ್ರಮಿಸಬೇಕು ಎಂದು ಕರೆ ನೀಡಿದರು.

ಪೋಷಕರುಗಳು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಿಸಬೇಕು ಜೊತೆಗೆ ಮನೆಯಲ್ಲಿ ಮಕ್ಕಳಿಗೆ ಕಲಿಸುವ ಕೆಲಸವನ್ನು ಮಾಡುವ ಮೂಲಕ ವಿದ್ಯಾರ್ಥಿಗಳು ಉನ್ನತ ಸ್ಥಾನಮಾನವನ್ನು ಅಲಂಕರಿಸಲು ನೆರವಾಗಬೇಕು ಎಂದರು.

ಅಮರ ಜ್ಯೋತಿ ವಿದ್ಯಾಸಂಸ್ಥೆಯು ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಮುನ್ನಡೆಯುತ್ತಿರುವುದು ಇತರ ವಿದ್ಯಾ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಅವರು ಮುಂದಿನ ದಿನಗಳಲ್ಲಿ ಈ ಸಂಸ್ಥೆಯಲ್ಲಿ ನೂತನ ತರಗತಿಗಳನ್ನು ಆರಂಭಿಸುವ ಕಾರ್ಯಕ್ಕೆ ಸಹಕಾರ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ನಂತರ ವಿದ್ಯಾರ್ಥಿಗಳಿಂದ ವಿವಿಧ ನೃತ್ಯ, ನಾಟಕ, ಗೀತ ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಲಾಯಿತು. ಇದು ಎಲ್ಲರ ಗಮನ ಸೆಳೆದಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ, ತಾ.ಪಂ. ಮಾಜಿ ಸದಸ್ಯ ಎಲ್.ಎಂ.ಸಣ್ಣಪ್ಪ, ಶ್ರೀರಂಗಪಟ್ಟಣ ಪುರಸಭಾ ಮಾಜಿ ಸದಸ್ಯ ಆರ್.ಶ್ರೀನಿವಾಸ್, ಭೂ ನ್ಯಾಯ ಮಂಡಳಿ ಸದಸ್ಯ ರಜನಿಕಾಂತ್, ಗ್ರಾ.ಪಂ.ಮಾಜಿ ಅಧ್ಯಕ್ಷ ಹುಚ್ಚೇಗೌಡ, ಪೊಲೀಸ್ ಇಲಾಖೆಯ ಶಿವೇಗೌಡ, ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಸ್.ವಿಕಾಸ್, ಉಪಾಧ್ಯಕ್ಷ ಡಿಸ್ ಮಂಜು, ಕಾರ್ಯದರ್ಶಿ ಸುನಿತಾವಿಕಾಸ್, ಆಡಳಿತ ಮಂಡಳಿಯ ಟ್ರಸ್ಟಿಗಳಾದ ಲೀಲಾವತಿನಟರಾಜ್, ಶಿವಮ್ಮಶಿವೇಗೌಡ, ರತ್ನನಾಗೇಂದ್ರ, ಎಸ್ ಡಿ ಎಂ ಸಿ ಅಧ್ಯಕ್ಷ ತೇಜೋಮೂರ್ತಿ, ಉಪಾಧ್ಯಕ್ಷ ರವಿ, ಮುಖ್ಯ ಶಿಕ್ಷಕಿ ನಂದಿನಿ, ಶಿಕ್ಷಕರಾದ ಸೌಮ್ಯ, ಶ್ವೇತಾ, ಸುಷ್ಮಾ, ಮಾಳವಿಕಾ, ಹಾಜಿರಾ, ಪವಿತ್ರ ತೀರ್ಥಕಲ, ಧನುಶ್ರೀ, ಡ್ಯಾನ್ಸ್ ಮಾಸ್ಟರ್ ಗಳಾದ ಇಸ್ಮಾಯಿಲ್, ಲಕ್ಷ್ಮಣ್, ಶಿವು, ಕರಾಟೆ ಶಿಕ್ಷಕ ಬ್ರೈನ್ ಸ್ವಾಮರ್, ಮುಖಂಡರುಗಳು, ಜನಪ್ರತಿನಿಧಿಗಳು, ಪೋಷಕರುಗಳು, ವಿದ್ಯಾರ್ಥಿಗಳು ಸೇರಿದಂತೆ ಹಲವರು ಇದ್ದರು.

## ಶರಣರ ಆದರ್ಶ ಮೌಲ್ಯಗಳನ್ನು ಅಳವಡಿಕೆ ಅಗತ್ಯ: ಡಾ. ಬಿ.ವಿ ನಂದೀಶ್

**ಮಂಡ್ಯ :** ಕಾಯಕ ಶರಣರು ಸಮಾಜಕ್ಕೆ ವಚನಗಳ ಮೂಲಕ ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಯುವಜನತೆಯೂ ಕಾಯಕ ಶರಣರ ಆದರ್ಶ,ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಬಿ.ವಿ ನಂದೀಶ್ ರವರು ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಂಡ್ಯ ಇವರ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಯ ಸಭಾಂಗಣದಲ್ಲಿ ನಡೆದ ಕಾಯಕ ಶರಣರ ಜಯಂತಿ (ಮಾದರ ಚೆನ್ನಯ್ಯ ಮಾದರ ಧೂಳಯ್ಯ ಡೋಹರ ಕಕ್ಕಯ್ಯ ಸಮಗಾರ ಹರಳಯ್ಯ ಉರಿಲಿಂಗ ಪೆದ್ದಿ) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ 12 ನೇ ಶತಮಾನದಲ್ಲಿ ಸಾಮಾಜಿಕ ಸುಧಾರಣೆಗಳನ್ನು ಮಾಡಿದ್ದಾರೆ. ಶರಣರು ಅನ್ನ ದಾಸೋಹ ಮತ್ತು ಕಾಯಕ ದಾಸೋಹವನ್ನು ಆರಾಧಿಸುತ್ತಿದ್ದರು. ಯುವಸಮುದಾಯವು ಶರಣರ ಆದರ್ಶಗಳನ್ನುಬೆಳಸಿಕೊಳ್ಳಬೇಕು ಮತ್ತು ಸಮುದಾಯಕ್ಕೆ ಮಾದರಿಯಾಗುವಂತಹ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬೆಂಗಳೂರಿನ ಪರಿಶಿಷ್ಟ ಜಾತಿ ಹಾಗೂ ಪಂಗಡ ಆಯೋಗದ ಮಾಜಿ ಸದಸ್ಯರಾದ ವೆಂಕಟೇಶ್ ದೊಡ್ಡೇರಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತರಾದ ಬಿ.ಎಸ್ ಅನುಪಮ, ಮುಖಂಡರುಗಳಾದ ಎಲ್ .ಸಂದೇಶ್, ಕೃಷ್ಣ, ತಮ್ಮಣ್ಣ, ಸಿ.ಕೆ ಪಾಪಯ್ಯ ಎನ್ .ಆರ್ ಚಂದ್ರಶೇಖರ್, ಕೆಂಪಣ್ಣ ಹಾಗೂ ಇನ್ನಿತರರು ಭಾಗವಹಿಸಿದ್ದರು.





# ಅಕ್ರಮ ಖಾತೆ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

**ಕೆ.ಆರ್.ಪೇಟೆ:** ತಾಲೂಕಿನ ಶೀಳನೆರೆ ಹೋಬಳಿಯಲ್ಲಿ ಕಂದಾಯ ಇಲಾಖೆಯ ಶಿರಸ್ತೆದಾರರು ಮತ್ತು ಗ್ರಾಮ ಲೆಕ್ಕಿಗರು ಒಗ್ಗೂಡಿ ಜಮೀನಿನ ನೈಜ ವಾರಸುದಾರರೇ ಅಲ್ಲದ ಅನ್ಯರ ಹೆಸರಿಗೆ ಕೃಷಿ ಭೂಮಿಯನ್ನು ಖಾತೆ ಮಾಡುತ್ತಿದ್ದು ರೈತರು ತಮ್ಮ ಜಮೀನಿನ ಹಕ್ಕಿಗಾಗಿ ಕೋರ್ಟು ಕಛೇರಿ ಅಲೆಯುವಂತೆ ಮಾಡುತ್ತಿದ್ದಾರೆ.

ಅಕ್ರಮ ಖಾತೆ ಮಾಡುತ್ತಿರುವ ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ದ ಇಲಾಖಾ ತನಿಖೆ ನಡೆಸಿ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಜಿಲ್ಲಾ ರೈತಸಂಘದ ಉಪಾಧ್ಯಕ್ಷ ಮರುವನಹಳ್ಳಿ ಶಂಕರ್ ಆಗ್ರಹಿಸಿದ್ದಾರೆ. ಅಕ್ರಮ ಖಾತೆಗಳ ದಾಖಲೆಗಳನ್ನು ಬಿಡುಗಡೆ ಮಾಡಿ ಮಾತನಾಡಿ

ತಾಲೂಕು ಕಛೇರಿಯ ಬ್ರಷ್ಟಾಚಾರದ ವಿರುದ್ದ ಕಿಡಿಕಾರಿದ ಜಿಲ್ಲಾ ರೈತಸಂಘದ ಉಪಾಧ್ಯಕ್ಷ ಮರುವನಹಳ್ಳಿ ಶಂಕರ್ ಪೌತಿ ಖಾತೆ ಮಾಡುವಲ್ಲಿ ಗ್ರಾಮ ಲೆಕ್ಕಿಗರು ಸಾಕಷ್ಟು ಭ್ರಷ್ಟಾಚಾರ ನಡೆಸುತ್ತಿದ್ದಾರೆ. ನೈಜ ವಾರಸುದಾರರ ಕುಟುಂಬದ ಸದಸ್ಯರ ಹೆಸರಿಗೆ ಪೌತಿ ಖಾತೆ ಮಾಡದೆ ರಕ್ತ ಸಂಬಂಧಿಕರೇ ಅಲ್ಲದ ಇತರರ ಹೆಸರಿಗೆ ಪೌತಿ ಖಾತೆ ಮಾಡಿ ರೈತರು ಕೋರ್ಟು ಕಛೇರಿ ಅಲೆಯುವಂತೆ ಮಾಡುತ್ತಿದ್ದಾರೆ. ಶೀಳನೆರೆ ಹೋಬಳಿಯ ಚೌಡಘಟ್ಟ ಗ್ರಾಮದ ಸರ್ವೆ.ನಂ 4/7 ರ 012 ಗುಂಟೆ ಜಮೀನು ಮೂಲ ಖಾತೆದಾರರಾದ ಶಿವೇಗೌಡರಿಗೆ ಸೇರಿದೆ. ಆದರೆ ಸದರಿ ಜಮೀನನ್ನು ಶಿವೇಗೌಡರ ಕುಟುಂಬದ ರಕ್ತ ಸಂಬಂಧಿಕರೇ ಅಲ್ಲದ ಪಾರ್ವತಮ್ಮ ಎನ್ನುವವರ ಹೆಸರಿಗೆ ಪೌತಿಖಾತೆ ಮಾಡಲಾಗಿದೆ. ಸಿಂಧಘಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಾಳೇನಹಳ್ಳಿ ಎಲ್ಲೆಯ ಸರ್ವೆ. 7/2 ರಲ್ಲಿನ 09 ಗುಂಟೆ ಜಮೀನು, 8/2 ರಲ್ಲಿನ 0.20 ಗುಂಟೆ ಜಮೀನು ಮಾಳೇನಹಳ್ಳಿ ಗ್ರಾಮದ ಪುಟ್ಟಸ್ವಾಮಿ, ವೆಂಕಟಸ್ವಾಮಯ್ಯ ಪುಟ್ಟಲಕ್ಷ್ಮಮ್ಮ ಅವರ ಹೆಸರಿನಲ್ಲಿ ಜಂಟಿ ಖಾತೆಯಿದ್ದು ಪುಟ್ಟಸ್ವಾಮಿ ಎನ್ನುವವರು ಪೌತಿಯಾಗಿದ್ದಾರೆ.



ಸದರಿ ಜಮೀನನ್ನು ಪೌತಿ ಖಾತೆ ಮಾಡುವ ಸಂದರ್ಭದಲ್ಲಿ ಜಮೀನಿಗೆ ಸಂಬಂಧಿಸಿದವರ ವಂಶಸ್ತರೇ ಅಲ್ಲದ ಡಿ.ಪುಟ್ಟಸ್ವಾಮಿ ಎನ್ನುವವರ ಹೆಸರಿಗೆ ಪೌತಿ ಖಾತೆ ಮಾಡಲಾಗಿದೆ. ನವಿಲು ಮಾರನಹಳ್ಳಿ ಗ್ರಾಮದ ಸರ್ವೆ.ನಂ.33/1 ರಲಿನ 1.28 ಗುಂಟೆ ಜಮೀನಿಗೆ ಕರೀಗೌಡ ಎನ್ನುವವರು ಮಾಲೀಕರಾಗಿರುತ್ತಾರೆ. ರೈತ ಕರೀಗೌಡರು ಬದುಕಿರುವಾಗಲೇ ಅವರ ಮಕ್ಕಳ ಗಮನಕ್ಕೂ ಬಾರದಂತೆ ಸದರಿ ಭೂಮಿಯನ್ನು ಸುದಾ ಉರೀಗೌಡ, ಗಾಯಿತ್ರಿ ರಾಮೇಗೌಡ, ಜಯಮ್ಮ ನಾಗೇಗೌಡ ಮತ್ತು ಸರೋಜ ಶಿವಣ್ಣಗೌಡ ಎನ್ನುವವರ ಹೆಸರಿಗೆ ಅಕ್ರಮ ಖಾತೆ ಮಾಡಿದ್ದಾರೆ. ತಾಲೂಕಿನಲ್ಲಿ ಪೌತಿ ಖಾತೆ ಹೆಸರಿನಲ್ಲಿ ನಡೆಯುತ್ತಿರುವ ಹತ್ತಾರು ಪ್ರಕರಣಗಳನ್ನು ರೈತಸಂಘ ತಹಸೀಲ್ದಾರರು, ಉಪ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ದಾಖಲೆ ಸಮೇತ ನೀಡಿದೆ. ಗ್ರಾಮ ಲೆಕ್ಕಿಗರು ಮತ್ತು ಶಿರಸ್ತೆದಾರರು ಪರಸ್ಪರ ಶಾಮೀಲಾಗಿ ಯಾರದೋ ಆಸ್ತಿಯನ್ನು ಮತ್ತ್ಯಾರದೊ ಹೆಸರಿಗೆ ಪೌತಿ ಖಾತೆ ಮಾಡಿ ರೈತ ಕುಟುಂಬಗಳನ್ನು ಕೋರ್ಟು ಕಛೇರಿಗೆ ಸುತ್ತಾಡುವಂತೆ ಮಾಡಿದ್ದಾರೆ. ಇಂತಹ ಹಲವಾರು ಪ್ರಕರಣಗಳು ತಾಲೂಕಿನ ಉದ್ದಗಲಕ್ಕೂ ಬೆಳಕಿಗೆ ಬರುತ್ತಿದ್ದು ರೈತ ಕುಟುಂಬಗಳ ಆಸ್ತಿಗೆ ಭದ್ರತೆಯೇ ಇಲ್ಲದಂತಾಗಿದೆ. ತಪ್ಪು ಮಾಡಿದ ಗ್ರಾಮ ಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರು ತಮ್ಮಿಂದ ಆಗಿರುವ ಲೋಪವನ್ನು ರೈತ ಚಳುವಳಿಯ ಸಂದರ್ಭದಲ್ಲಿ ತಹಸೀಲ್ದಾರರ ಸಮ್ಮುಖದಲ್ಲಿಯೇ ಒಪ್ಪಿಕೊಂಡಿದ್ದಾರೆ. ಲಂಚದ ಹಣತಿಂದು ತಪ್ಪು ಮಾಡಿದ್ದೇವೆಂದು ಬಾಯಿ ಮಾತಿನಲ್ಲಿ ಒಪ್ಪಿಕೊಂಡರೆ ಸಾಲದು. ಇವರ ವಿರುದ್ದ ಕ್ರಮವಾಗಬೇಕು. ಸ್ಥಳೀಯ ಕಂದಾಯ ಅಧಿಕಾರಿಗಳು ತಾವು ಮಾಡಿದ ತಪ್ಪನ್ನು ತಾವೇ ಸರಿಪಡಿಸಿಕೊಡಬೇಕು. ಅದನ್ನು ಬಿಟ್ಟು ರೈತರನ್ನು ಎ.ಸಿ.ಕೋರ್ಟು ಮತ್ತಿತರರ ಕಡೆ ಅಲೆದಾಡುವಂತೆ ಮಾಡಬಾರದು.

ಒಂದುವೇಳೆ ಇವರತಪ್ಪುಗಳನ್ನುಎ.ಸಿ.ನ್ಯಾಯಾಲಯದಲ್ಲಿಯೇ ಸರಿಪಡಿಸಿಕೊಳ್ಳಬೇಕಾದರೆ ರೈತರಿಗೆ ತಲುಗುವ ನ್ಯಾಯಾಲಯದ ವೆಚ್ಚ, ವಕೀಲರ ವೆಚ್ಚ ಮತ್ತು ತಿರುಗಾಟದ ವೆಚ್ಚವನ್ನು ತಪ್ಪು ಮಾಡಿದ ಅಧಿಕಾರಿಗಳಿಂದಲೇ ವಸೂಲಿ ಮಾಡಿಕೊಡಬೇಕು. ಭ್ರಷ್ಟ ನೌಕರರನ್ನು ಕೇವಲ ಅಮಾನತ್ತು ಮಾಡಿದರೆ ಸಾಲದು, ಬದಲಾಗಿ ಅವರುಗಳ ವಿರುದ್ದ ಕ್ರಿಮಿನಲ್ ಮೊಕದ್ದೊಮ್ಮೆ ದಾಖಲಿಸಿ ನೌಕರರಿಂದ ಆಗಿರುವ ತಪ್ಪುಗಳನ್ನು ಸರಿಪಡಿಸಿ ನೈಜ ಖಾತೆದಾರರ ಕುಟುಂಬದ ಹೆಸರಿಗೆ ಪೌತಿ ಖಾತೆ ಮಾಡಿಕೊಡುವಂತೆ ಒತ್ತಾಯಿಸಿದರು.

## ನಡೆ, ನುಡಿ ವ್ಯಕ್ತಿಯ ಶೇಷ್ಠತೆಯಾಗಿದೆ: ಮಂಜಯ್ಯ

**ಹಾಸನ:** ನಡೆ ಮತ್ತು ನುಡಿ ಎಂಬುದು ವ್ಯಕ್ತಿಯ ಶೇಷ್ಠತೆಯಾಗಿದೆ, ಕಾಯಕದಿಂದ ಮಾತ್ರ ಮಾರ್ಗ ಮುಕ್ತಿ ಸಾಧ್ಯವೆಂದು ಕಾಯಕ ಶರಣರು ವಚನಗಳ ಮೂಲಕ ಸಮಾಜಕ್ಕೆ 12 ನೇ ಶತಮಾನದಲ್ಲಿ ಸಾರಿದ್ದಾರೆ, ವಚನಗಳ ಮಹತ್ವವನ್ನು ಅರಿಯಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಮಂಜಯ್ಯ ತಿಳಿಸಿದ್ದಾರೆ.



ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಸಹಯೋಗದಲ್ಲಿ ಇಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಕಾಯಕ ಶರಣರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು

ಬಸವಣ್ಣನವರು ಅನುಭವ ಮಂಟಪದಲ್ಲಿ ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಸಮಗಾರ ಹರಳಯ್ಯ ಇನ್ನೂ ಹಲವಾರು ಶರಣು ಅನುಯಾಯಿಗಳಾಗಿದ್ದರು ತಮ್ಮ ಕಾಯಕವೇ ಶ್ರೇಷ್ಠ ಎಂಬುದನ್ನು ವಚನಗಳ ತಿಳಿಸುವ ಕೆಲಸ ಮಾಡಿದ್ದಾರೆ ಎಂದರು.

12 ನೇ ಶತಮಾನದ ಜ್ಞಾನ ದಾಸೋಹವನ್ನು ಪ್ರಾರಂಭವಾಯಿತು. ಶರಣದ ವಚನಗಳ ಆದರ್ಶವನ್ನು ಯುವ ಪೀಳಿಗೆ ಪಾಲಿಸಿಬೇಕು, ಕಾಯಕ ಕನಿಷ್ಠವಲ್ಲ ಮಾಡುವ ಕೆಲಸದಿಂದ ಮಹತ್ವ ತಿಳಿಯುತ್ತದೆ. ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಯು ಹುಟ್ಟಿದಾಗ ವಿಶ್ವ ಮಾನವವಾಗಿ ಜನಿಸಿಸುತ್ತಾರೆ ಎಂದರು.

ಸಮಾಜದಲ್ಲಿ ಜಾತಿ ಧರ್ಮ ತಾರತಮ್ಯ, ಮೇಲೂ ಕೀಳು ತಾರತಮ್ಯ ನಡುವೆಯೂ ಕೂಡ ಸಮಾನತೆಯನ್ನು 12 ನೇ ಶತಮಾನದಲ್ಲಿ ಕಾಣಬಹುದಾಗಿದೆ. ಶರಣರು ತಮ್ಮ ಕಾಯಕವನ್ನು ಮಾಡುವ ಸಂಧರ್ಭದಲ್ಲಿ ನೀವು ಮಾಡುವ ಕಾಯಕವೇ ಶ್ರೇಷ್ಠ ವಿನಃ ಜಾತಿ ಅಲ್ಲ ಎಂದು ಹೇಳುವ ಮೂಲಕ ಅನುಭವ ಮಂಟಪವನ್ನು ಕಟ್ಟಲಾಗಿದೆ ಎಂದು ತಿಳಿಸಿದರು.

ಹುಟ್ಟಿಗೆ ಯಾವುದೇ ಜಾತಿ ಇರುವುದಿಲ್ಲಸಮಾಜದಲ್ಲಿ ಯಾವುದೇ ವೃತ್ತಿಯಲ್ಲಿ ಮೇಲು ಕೀಳು ಎಂಬುದು ಇರಬಾರದು ಎಲ್ಲಾ ವೃತ್ತಿಯನ್ನು ಗೌರವಿಸಬೇಕು. ಕಾಯಕ ಶರಣ ವಚನಗಳಲ್ಲಿನ ಮಹತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.